ಸಂಪುಟ: 05 ಸಂಚಿಕೆ: 357 ಪುಟಗಳು: 08 ಬುಧವಾರ 11 ಮಾರ್ಚ್ 2026

www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail. com

ಸಂಪಾದಕರು: ಟಿ. ಹೊಂಬೇಗೌಡ

RNI No. KARKAN/2021/80833

9448225696 +91 8035841833

₹5

# ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

**ಮುಂಜಾನೆ ಮಾತು**

ಜೀವನಾವಧಿ ಅಲ್ಲ, ಪ್ರಾಪಂಚಿಕ ವಿಷಯಗಳೆಲ್ಲ ಕ್ಷಣಿಕ. ಆದರೆ ಯಾರು ಇತರರಿಗಾಗಿ ಬಾಳುತ್ತಾರೋ, ಅವರೇ ನಿಜವಾಗಿ ಬಾಳುತ್ತಾರೆ. ಉಳಿದವರು ಜೀವನ ಮೃತರು.


## ವಿನ್ಯಾಸಗಾರರು ಬೇಕಾಗಿದ್ದಾರೆ




ಪೇಜ್ ಮೇಕರ್, ಇನ್ ಡಿಸೈನರ್, ಕನ್ನಡ ಟೈಪ್ ಮಾಡಬಲ್ಲವರು. ಬೆಂಗಳೂರಿನಲ್ಲಿ ವಾಸವಿರುವ ಬೆಂಗಳೂರು ಕಚೇರಿಯಲ್ಲಿ ಕೆಲಸ ಮಾಡಲು ಇಚ್ಛಿಸುವ (4 ಮಂದಿ) ಪತ್ರಿಕೋದ್ಯಮದಲ್ಲಿ ತೀವ್ರ ಆಸಕ್ತಿ, ಕನ್ನಡ ಭಾಷೆಯ ಮೇಲೆ ಹಿಡಿತ, ಸಾಮಾನ್ಯ ಜ್ಞಾನ, ಓದುವ ಹವ್ಯಾಸ ಹಾಗೂ ಉತ್ಸಾಹ ಕಾತುರವಿರುವ ಆಸಕ್ತರಿಗೆ ನಿರ್ದಿಷ್ಟ ಪದವಿಯ ಅಗತ್ಯವಿಲ್ಲ. ವಯೋಮಿತಿ ಗರಿಷ್ಠ 25 ವರ್ಷ. ಆಸಕ್ತರು ಕೂಡಲೇ ಈ ಕೆಳಗಿನ ವಿಳಾಸಕ್ಕೆ ತಮ್ಮ ಪೂರ್ಣ ವಿವರಗಳುಳ್ಳ ಅರ್ಜಿ ಸಲ್ಲಿಸಿ ಅಥವಾ ಮುಖತಃ ಭೇಟಿ ನೀಡಿ.

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ

**9448225696**

ಉದಯ ವಾಹಿನಿ

#: 1230 'JAYAMAHAL 13th cross, 2nd phase, Girinagar, Bangalore-560085. (Near to bangalore one park, opposite mandya medical)
udayavahininews@gmail.com


## ಮುಷ್ಕರ ಬೇಡ: ವೈದ್ಯರು-ಸಿಬ್ಬಂದಿ ಜತೆ ಮಾತುಕತೆ ನಡೆಸಲು ಒತ್ತಾಯ

• ಉದಯವಾಹಿನಿ, ಬೆಂಗಳೂರು

ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಮುಷ್ಕರಕ್ಕೆ ಸರಕಾರಿ ಆಸ್ಪತ್ರೆಗಳ ವೈದ್ಯರು, ಸಿಬ್ಬಂದಿ ವರ್ಗ ಮುಂದಾಗಿದ್ದು, ರಾಜ್ಯ ಸರಕಾರ ಕೂಡಲೇ ಚರ್ಚೆ ಮಾಡಿ ಸೌಹಾರ್ದಯುತವಾಗಿ ಬಗೆಹರಿಸುವ ಪ್ರಯತ್ನ ಮಾಡಬೇಕು ಎಂದು ಪಕ್ಷತೀತವಾಗಿ ಒತ್ತಾಯಿಸಲಾಯಿತು. ಮಂಗಳವಾರ ವಿಧಾನಸಭೆಯ ಪ್ರಶ್ನೋತ್ತರ ಕಲಾಪದ ಬಳಿಕ ಬಿಜೆಪಿಯ ಸದಸ್ಯ ವಿ.ಸುನಿಲ್ ಕುಮಾರ್, ವೈದ್ಯರ ಮುಷ್ಕರವನ್ನು ಪ್ರಸ್ತಾಪಿಸಿ, ಔಷಧಿಗಳ ಪೂರೈಕೆ ವರ್ಗಾವಣೆಯ ರೀತಿ ಮತ್ತು ಖಾಲಿ ಹುದ್ದೆಗಳ ನೇಮಕ ಬೇಡಿಕೆಗಳ ಬಗ್ಗೆ ಸರಕಾರಿ ವೈದ್ಯರು ಮತ್ತು ಸಿಬ್ಬಂದಿಗಳು ನಾಳೆಯಿಂದ ಹೊರ ರೋಗಿಗಳ ವಿಭಾಗದ ಸೇವೆಯನ್ನು ಸ್ಥಗಿತಗೊಳಿಸಿ ಮುಷ್ಕರ ಆರಂಭಿಸುತ್ತಿದ್ದಾರೆ ಮಾ.16 ರಿಂದ ತುರ್ತು ಸೇವೆಗಳನ್ನು ನಿಲ್ಲಿಸುವುದಾಗಿ ಎಚ್ಚರಿಸಿದ್ದಾರೆ.

ಆದರೆ, ಒಂದು ತಿಂಗಳ ಹಿಂದೆಯೇ ಬೇಡಿಕೆಗಳ ಈಡೇರಿಕೆಗೆ ಮನವಿ ಸಲ್ಲಿಸಲಾಗಿದ್ದು, ಮುಷ್ಕರದ ನೋಟಿಸ್ ಕೂಡ ನೀಡಲಾಗಿದೆ. ಸರಕಾರ ಅವರನ್ನು ಚರ್ಚೆಗೆ ಕರೆದಿಲ್ಲ. ಹಟ ಬಿಟ್ಟು ಸಂಘರ್ಷದ ಬದಲಿಗೆ ಮಾತುಕತೆ ಮೂಲಕ ಸಮಸ್ಯೆಯನ್ನು ಬಗೆಹರಿಸಿ ಎಂದು ಒತ್ತಾಯಿಸಿದರು.

## ಪದವೀಧರರ, ಶಿಕ್ಷಕರ ಕ್ಷೇತ್ರಕ್ಕೆ ಬಿಜೆಪಿ 3 ಅಭ್ಯರ್ಥಿಗಳ ಆಯ್ಕೆ ಪಟ್ಟಿ ಬಿಡುಗಡೆ

• ಉದಯವಾಹಿನಿ, ಬೆಂಗಳೂರು

ಕರ್ನಾಟಕ ವಿಧಾನ ಪರಿಷತ್‌ನ ದ್ವೈವಾರ್ಷಿಕ ಚುನಾವಣೆಗೆ ಸಂಬಂಧಿಸಿದಂತೆ ಬಿಜೆಪಿ ತನ್ನ ಅಭ್ಯರ್ಥಿಗಳ ಪಟ್ಟಿಯನ್ನು ಪ್ರಕಟಿಸಿದೆ. ಬಿಜೆಪಿಯ ಕೇಂದ್ರ ಚುನಾವಣಾ ಸಮಿತಿಯು ಚರ್ಚಿಸಿ ಮೂರು ಪ್ರಮುಖ ಕ್ಷೇತ್ರಗಳಿಗೆ ಅಭ್ಯರ್ಥಿಗಳ ಹೆಸರನ್ನು ಅಂತಿಮಗೊಳಿಸಿ ಅಧಿಕೃತ ಪ್ರಕಟಣೆ ಹೊರಡಿಸಿದೆ.

ಜೂನ್ ವೇಳೆಗೆ ಚುನಾವಣೆ ನಡೆಯುವ ಸಾಧ್ಯತೆ ಇದೆ. ಹೀಗಾಗಿ, ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಅರುಣ್ ಸಿಂಗ್ ಅವರು, ಈಶಾನ್ಯ ಶಿಕ್ಷಕರ ಕ್ಷೇತ್ರ, ಪಶ್ಚಿಮ ಪದವೀಧರರ ಕ್ಷೇತ್ರ, ಆಗ್ನೇಯ ಪದವೀಧರರ ಕ್ಷೇತ್ರಕ್ಕೆ ಅಭ್ಯರ್ಥಿಗಳ ಆಯ್ಕೆ ಮಾಡಿ ಪಟ್ಟಿಯನ್ನು ಬಿಡುಗಡೆ ಮಾಡಿದ್ದಾರೆ.

- **ಈಶಾನ್ಯ ಶಿಕ್ಷಕರ ಕ್ಷೇತ್ರ: ಶಶೀಲ್ ಜಿ. ನಮೋಶಿ**
- **ಪಶ್ಚಿಮ ಪದವೀಧರರ ಕ್ಷೇತ್ರ: ಎಸ್.ವಿ. ಸಂಕನೂರು**
- **ಆಗ್ನೇಯ ಪದವೀಧರರ ಕ್ಷೇತ್ರ: ಕೆ.ಎಂ. ಸುರೇಶ್**

ಪದವೀಧರರ ಮತ್ತು ಶಿಕ್ಷಕರ ಕ್ಷೇತ್ರಗಳ ಚುನಾವಣೆಗೆ ಬಿಜೆಪಿ ಈ ಬಾರಿ ಅನುಭವಿ ನಾಯಕರನ್ನೇ ಕಣಕ್ಕಿಳಿಸಿದೆ. ಈ ಮೂಲಕ ಮುಂಬರುವ ವಿಧಾನ ಪರಿಷತ್ ಚುನಾವಣೆಗೆ ಪಕ್ಷವು ತನ್ನ ರಣತಂತ್ರವನ್ನು ಆರಂಭಿಸಿದಂತಾಗಿದೆ.

ಮೂರು ತಿಂಗಳು ಅಗತ್ಯ ಕಾರ್ಯತಂತ್ರ ರೂಪಿಸಲು ಅಭ್ಯರ್ಥಿಗಳಿಗೆ ಅವಕಾಶ ಮಾಡಿಕೊಟ್ಟಿದೆ ಎನ್ನಲಾಗಿದೆ.ಬರುವ ಮಕ್ಕಳಿಗೆ ಬಿಸಿಯೂಟ, ಉಚಿತ ಪಠ್ಯ ಜತೆಗೆ ಬಸ್ ಸೌಕರ್ಯವನ್ನೂ ಕಲ್ಪಿಸಲಾಗುತ್ತಿದೆ.

ಹಾಗಾಗಿ ಪೋಷಕರ ಮನವೊಲಿಸಿ ಮಕ್ಕಳನ್ನು ಸೇರಿಸುವಂತೆ ಮನವೊಲಿಸಬೇಕು ಎಂದು ಮನವಿ ಮಾಡಲಾಗುವುದು. ಈ ಕುರಿತು ಪತ್ರ ಬರೆಯಲಾಗುವುದು ಎಂದರು.

# ಕೆಪಿಸಿಸಿ ಸಾರಥ್ಯಕ್ಕೆ 6 ವರ್ಷ

## ಕೈ ನಾಯಕರ ಹರ್ಷ

**ಡಿಕೆಶಿಗೆ ಉಜ್ವಲ ರಾಜಕೀಯ ಭವಿಷ್ಯವಿದೆ**

**ಡಿಕೆಶಿದು ಕಾಂಗ್ರೆಸ್‌ಗೆ ರಾಜಿಯಿಲ್ಲದ ನಿಷ್ಠೆ**



**KPCC ಅಧ್ಯಕ್ಷರಾಗಿ ಡಿಕೆಶಿ 6 ವರ್ಷ ಪೂರೈಕೆ**



## ಕುರ್ಚಿ ಕಾದಾಟದ ನಡುವೆಯೂ ಡಿಕೆಶಿ ಗುಣಗಾನ ಮಾಡಿದ ಸಿದ್ದರಾಮಯ್ಯ

• ಉದಯವಾಹಿನಿ, ಬೆಂಗಳೂರು

ಕೆಪಿಸಿಸಿ ಅಧ್ಯಕ್ಷರಾಗಿ 6 ವರ್ಷಗಳನ್ನು ಯಶಸ್ವಿಯಾಗಿ ಪೂರೈಸಿರುವ ಉಪಮುಖ್ಯಮಂತ್ರಿ, ಡಿ.ಕೆ.ಶಿವಕುಮಾರ್ ಅವರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅಭಿನಂದಿಸಿದ್ದಾರೆ. ಈ ಕುರಿತು ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಮುಖ್ಯಮಂತ್ರಿ, ಶಿವಕುಮಾರ್ ಅವರ ಸಂಘಟನಾ ಚಾತುರ್ಯ, ಸೈದ್ಧಾಂತಿಕ ಬದ್ಧತೆ ಮತ್ತು ಕಠಿಣ ಶ್ರಮ ನಮ್ಮ ಪಕ್ಷದ ಎಲ್ಲಾ ಯುವನಾಯಕರಿಗೆ ಮಾದರಿಯಾದುದು ಎಂದಿದ್ದಾರೆ.

ವಿರೋಧ ಪಕ್ಷವಾದ ಬಿಜೆಪಿ ಸುಳ್ಳು ಕೇಸ್ ಗಳನ್ನು ಹಾಕಿ ಬಗೆಬಗೆಯ ಕಿರುಕಳ ನೀಡಿದರೂ ಶಿವಕುಮಾರ್ ಅವರು ಮಣಿಯದೆ ಪಕ್ಷಕ್ಕೆ ನಿಷ್ಠರಾಗಿ ಉಳಿದಿರುವುದು ಕಾಂಗ್ರೆಸ್ ಪಕ್ಷದ ಬಗ್ಗೆ ಅವರಲ್ಲಿರುವ ರಾಜಿಯಿಲ್ಲದ ನಿಷ್ಠೆಗೆ ಸಾಕ್ಷಿಯಾಗಿದೆ. ಇದು ಕಾಂಗ್ರೆಸ್ ಪಕ್ಷದ ಲಕ್ಷಾಂತರ ಕಾರ್ಯಕರ್ತರಿಗೆ ಸ್ಫೂರ್ತಿದಾಯಕ ನಡವಳಿಕೆ ಆಗಿದೆ ಎಂದು ಶ್ಲಾಘಿಸಿದ್ದಾರೆ. ಕೋಮುವಾದಿ ಶಕ್ತಿಗಳನ್ನು ಸೋಲಿಸಿ ಕಾಂಗ್ರೆಸ್ ಪಕ್ಷವನ್ನು ಅಧಿಕಾರಕ್ಕೆ ತರಲು ಪಕ್ಷದ ನಾಯಕರು ಮತ್ತು ಕಾರ್ಯಕರ್ತರ ಜೊತೆಯಲ್ಲಿ ಡಿ.ಕೆ. ಶಿವಕುಮಾರ್ ಹಗಲಿರುಳು ದುಡಿದಿದ್ದಾರೆ. ರಾಜ್ಯವನ್ನು ಸರ್ವಜನಾಂಗದ ಶಾಂತಿಯ ತೋಟವಾಗಿ ಮತ್ತೆ ಕಟ್ಟುವಲ್ಲಿ ಶಿವಕುಮಾರ್ ನನ್ನ ಹೆಗಲಿಗೆ ಹೆಗಲಾಗಿ ನಿಂತಿದ್ದಾರೆ ಎಂದು ತಿಳಿಸಿದ್ದಾರೆ. ನನಗಿಂತ ಕಿರಿಯರಾದ ಶಿವಕುಮಾರ್ ಅವರಿಗೆ ಉಜ್ವಲವಾದ ರಾಜಕೀಯ ಭವಿಷ್ಯವಿದೆ. 2028ರಲ್ಲಿ ಕಾಂಗ್ರೆಸ್ ಪಕ್ಷವನ್ನು ಅಧಿಕಾರಕ್ಕೆ ತರಬೇಕು ಎನ್ನುವುದು ನಮ್ಮೆಲ್ಲರ ಬಯಕೆಯಾಗಿದೆ. ಇದಕ್ಕಾಗಿ ನಡೆಯುವ ಪಕ್ಷದ ಸಂಘಟನೆ ಮತ್ತು ಹೋರಾಟದಲ್ಲಿ ನಾನು ಕೂಡಾ ಜೊತೆಯಿರುತ್ತೇನೆ ಎಂದು ಹೇಳಿದ್ದಾರೆ. ಈ ಮೂಲಕ ಮುಖ್ಯಮಂತ್ರಿ ಸ್ಥಾನದ ಆಕಾಂಕ್ಷೆಯಲ್ಲಿರುವ ಡಿಕೆ ಶಿವಕುಮಾರ್ ಅವರಿಗೆ ಈ ಬಾರಿ ಮುಖ್ಯಮಂತ್ರಿ ಪಟ್ಟ ಇಲ್ಲ. 2028ರಲ್ಲಿ ಸಿಗಬಹುದು ಎಂಬುದನ್ನು ಸೂಚ್ಯವಾಗಿ ಸಿದ್ದರಾಮಯ್ಯ ಹೇಳಿದ್ದಾರೆ.

**ಏನೆಂದ್ರು ಡಿಕೆಶಿ?:** ಕೆಪಿಸಿಸಿ ಅಧ್ಯಕ್ಷರಾಗಿ 6 ವರ್ಷಗಳನ್ನು ಪೂರೈಸಿರುವ ಬಗ್ಗೆ ಡಿಕೆ ಶಿವಕುಮಾರ್ ಕೂಡಾ ಪ್ರತಿಕ್ರಿಯೆ ನೀಡಿದ್ದಾರೆ. ವಿಧಾನಸೌಧದಲ್ಲಿ ಮಾತನಾಡಿದ ಅವರು, ಸೋನಿಯಾ ಗಾಂಧಿ ಅವರು ನನ್ನನ್ನು ಅಂದು ಆಯ್ಕೆ ಮಾಡಿದರು. ಅವರಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ವಿಧಾನಸಭೆ ಕಲಾಪ ನಡೆಯುತ್ತಿರುವ ಕಾರಣಕ್ಕೆ ದೊಡ್ಡ ಸಮಾರಂಭ ಮಾಡುವುದನ್ನು ಮುಂದೂಡಲಾಯಿತು.

ಎಲ್ಲಾ ಶಾಸಕರಿಗೆ ಔತಣಕೂಟ ಏರ್ಪಡಿಸಲಾಗಿದೆ ಎಂದು ಹೇಳಿದರು. ನೀವು ಮುಖ್ಯಮಂತ್ರಿ ಆಗಬೇಕು ಎನ್ನುವ ಒತ್ತಾಯದ ಬಗ್ಗೆ ಕೇಳಿದಾಗ, ಇದರ ಬಗ್ಗೆ ನಾನು ಮಾತನಾಡುವುದಿಲ್ಲ. ಪಕ್ಷ ನೀಡಿದ ಕರ್ತವ್ಯ, ಜವಾಬ್ದಾರಿಯನ್ನು ನಾನು ನಿಭಾಯಿಸುತ್ತಿದ್ದೇನೆ ಎಂದು ಹೇಳಿದರು.ಮುಖ್ಯಮಂತ್ರಿ ಸ್ಥಾನ ಬಿಟ್ಟುಕೊಡಿ ಎಂದ ನೆಟ್ಟಿಗರು ಇನ್ನು ಈ ಪೋಸ್ಟ್‌ಗೆ ಸೋಷಿಯಲ್ ಮೀಡಿಯಾದಲ್ಲಿ ಮಿಶ್ರ ಪ್ರತಿಕ್ರಿಯೆ ವ್ಯಕ್ತವಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಡಿ.ಕೆ ಶಿವಕುಮಾರ್ ಅವರನ್ನು ಮೆಚ್ಚಿ ಮಾಡಿರುವ ಪೋಸ್ಟ್‌ಗೆ ಹಲವರು, ಹಾಗಾದರೆ ಡಿ.ಕೆ ಶಿವಕುಮಾರ್ ಅವರಿಗೆ ಮುಖ್ಯಮಂತ್ರಿ ಸ್ಥಾನವನ್ನು ಬಿಟ್ಟುಕೊಡಿ ಎಂದು ಆಗ್ರಹಿಸಿದ್ದಾರೆ. ಚಂದ್ರು ಎನ್ನುವವರು ಉಳಿದ ಅವಧಿಗೆ ಅವರನ್ನು ಮುಖ್ಯಮಂತ್ರಿ ಮಾಡಿ ಸರ್ ಎಂದಿದ್ದಾರೆ.

ಈ ವ್ಯಾಖ್ಯಾನದ ಸಾರಾಂಶ ಇಷ್ಟೇ ಸದ್ಯಕ್ಕೆ ನಾನು ಮುಖ್ಯಮಂತ್ರಿ ಹುದ್ದೆಯನ್ನು ಅಷ್ಟು ಸುಲಭವಾಗಿ ಬಿಟ್ಟುಕೊಡಲಾರೆ. 2028ರ ಚುನಾವಣೆಯವರೆಗೂ ಒಟ್ಟಾಗಿ ಹೋಗೋಣ 2028ಕ್ಕೆ ಮತ್ತೊಮ್ಮೆ ಅಧಿಕಾರಕ್ಕೆ ಪಕ್ಷವನ್ನು ತರೋಣ ಅಂತಾ ಹೇಳ್ತಾ ಹೇಳ್ತಾನೆ ದಿನಗಳನ್ನು ಮುಂದೂಡುವ ತಂತ್ರ ಎಂದೂ ಕೆಲವರು ವ್ಯಂಗ್ಯವಾಡಿದ್ದಾರೆ.

### ಕೈ ಕಾರ್ಯಕರ್ತರಿಂದ ವಿಜಯೋತ್ಸವ

ಡಿ.ಕೆ.ಶಿವಕುಮಾರ್ ಅವರು ಕೆಪಿಸಿಸಿ ಅಧ್ಯಕ್ಷರಾಗಿ ಆರು ವರ್ಷ ಪೂರೈಸಿದ ಹಿನ್ನೆಲೆ ಹುಬ್ಬಳ್ಳಿಯ ಸರ್ವೋದಯ ವೃತ್ತದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಸಂಭ್ರಮಿಸಿದ್ದಾರೆ. ಕೇಕ್ ಕಟ್ ಮಾಡಿ, ಪಟಾಕಿ ಸಿಡಿಸಿ ಸಂಭ್ರಮಿಸಿದ್ದಾರೆ. ಈ ವೇಳೆ ಮುಂದಿನ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಎಂದು ಘೋಷಣೆ ಕೂಗಿದ್ದಾರೆ. ಯುಗಾದಿಯೊಳಗಾಗಿ ಡಿಕೆಶಿ ಸಿಎಂ ಆಗಲಿ, ಹೈಕಮಾಂಡ್ ಈ ನಿಟ್ಟಿನಲ್ಲಿ ಸೂಕ್ತ ಕ್ರಮ ಕೈಗೊಳ್ಳುವಂತೆ ಸಂಭ್ರಮಾಚರಣೆ ವೇಳೆ ಆಗ್ರಹಿಸಿದ್ದಾರೆ.

### ಔತಣಕೂಟ

ಡಿಕೆಶಿ 6 ವರ್ಷ ಪೂರೈಸಿದ ಹಿನ್ನೆಲೆಯಲ್ಲಿ ಖಾಸಗಿ ಹೋಟೆಲ್‌ನಲ್ಲಿ ಔತಣಕೂಟ ಹಮ್ಮಿಕೊಳ್ಳಲಾಗಿದೆ. ಶಾಸಕರು, ಸಚಿವರು, ಸಿಎಂಗೆ ಡಿಕೆಶಿವಕುಮಾರ್ ಡಿನ್ನರ್ ಪಾರ್ಟಿ ಆಯೋಜನೆ ಮಾಡಿದ್ದಾರೆ. ಖಾಸಗಿ ಹೋಟೇಲ್‌ನಲ್ಲಿ ನಡೆಯಲಿರುವ ಡಿನ್ನರ್ ಪಾರ್ಟಿಗೆ ಶಾಸಕರು, ಸಚಿವರು ಬರುತ್ತಿದ್ದಾರೆ. ಔತಣಕೂಟದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ ಕೂಡ ಆಯೋಜನೆ ಮಾಡಲಾಗಿದೆ. ರಾತ್ರಿ 7 ಗಂಟೆಯಿಂದ ಔತಣಕೂಟ ಆರಂಭಗೊಂಡಿದೆ.

### ಡಿಕೆ ಶಿ ಪಕ್ಷ ನಿಷ್ಠೆಯೇ ಸ್ಫೂರ್ತಿ

ವಿರೋಧ ಪಕ್ಷ ಬಿಜೆಪಿ ಸುಳ್ಳು ಕೇಸ್‌ಗಳನ್ನು ದಾಖಲಿಸಿ, ಹಲವು ರೀತಿಯ ಕಿರುಕುಳ ನೀಡಿದರೂ ಡಿ.ಕೆ. ಶಿವಕುಮಾರ್ ಮಣಿಯದೆ ಪಕ್ಷಕ್ಕೆ ನಿಷ್ಠರಾಗಿ ಉಳಿದಿದ್ದಾರೆ. ಇದು ಕಾಂಗ್ರೆಸ್ ಪಕ್ಷದ ಬಗ್ಗೆ ಅವರಲ್ಲಿರುವ ರಾಜಿಯಿಲ್ಲದ ನಿಷ್ಠೆಗೆ ಸಾಕ್ಷಿಯಾಗಿದೆ ಹಾಗೂ ಪಕ್ಷದ ಲಕ್ಷಾಂತರ ಕಾರ್ಯಕರ್ತರಿಗೆ ಸ್ಫೂರ್ತಿದಾಯಕ ನಡವಳಿಕೆಯಾಗಿದೆ. ಕೋಮುವಾದಿ ಶಕ್ತಿಗಳನ್ನು ಸೋಲಿಸಿ ಕಾಂಗ್ರೆಸ್ ಪಕ್ಷವನ್ನು ಅಧಿಕಾರಕ್ಕೆ ತರಲು, ಪಕ್ಷದ ನಾಯಕರು ಮತ್ತು ಕಾರ್ಯಕರ್ತರ ಜೊತೆಯಲ್ಲಿ ಡಿ.ಕೆ. ಶಿವಕುಮಾರ್ ಹಗಲಿರುಳು ದುಡಿದಿದ್ದಾರೆ. ರಾಜ್ಯವನ್ನು ಸರ್ವಜನಾಂಗದ ಶಾಂತಿಯ ತೋಟವಾಗಿ ಮತ್ತೆ ಕಟ್ಟುವಲ್ಲಿ ಶಿವಕುಮಾರ್ ನನ್ನ ಹೆಗಲಿಗೆ ಹೆಗಲುಗೊಟ್ಟು ನಿಂತಿದ್ದಾರೆ ಎಂದು ಗುಣಗಾನ ಮಾಡಿದ್ದಾರೆ. ನನಗಿಂತ ಕಿರಿಯರಾದ ಶಿವಕುಮಾರ್ ಅವರಿಗೆ ಉಜ್ವಲವಾದ ರಾಜಕೀಯ ಭವಿಷ್ಯವಿದೆ. 2028ರಲ್ಲಿ ಕಾಂಗ್ರೆಸ್ ಪಕ್ಷವನ್ನು ಮತ್ತೆ ಅಧಿಕಾರಕ್ಕೆ ತರಬೇಕು ಎನ್ನುವುದು ನಮ್ಮೆಲ್ಲರ ಬಯಕೆಯಾಗಿದೆ. ಇದಕ್ಕಾಗಿ ನಡೆಯುವ ಪಕ್ಷದ ಸಂಘಟನೆ ಮತ್ತು ಹೋರಾಟದಲ್ಲಿ ನಾನು ಕೂಡ ಜೊತೆಯಿರುತ್ತೇನೆ ಎಂದು ತಮ್ಮ ಎಕ್ಸ್ ಖಾತೆಯ ಸಂದೇಶದಲ್ಲಿ ತಿಳಿಸಿದ್ದಾರೆ.

## ಮಲೆನಾಡು-ಕರಾವಳಿ ಭಾಗದಲ್ಲಿ ಬಂದೂಕು ಪರವಾನಗೆ ನೀಡಲು ಒಕ್ಕೊರಲ ಆಗ್ರಹ

• ಉದಯವಾಹಿನಿ, ಬೆಂಗಳೂರು


ಮಲೆನಾಡು ಮತ್ತು ಕರಾವಳಿ ಭಾಗದಲ್ಲಿ ಬಂದೂಕು ಪರವಾನಗೆ ನವೀಕರಣಕ್ಕೆ ರಾಜ್ಯ ಸರಕಾರ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಆಡಳಿತ ಮತ್ತು ವಿರೋಧ ಪಕ್ಷದ ಸದಸ್ಯರು ಒಕ್ಕೊರಲ ಆಗ್ರಹ ಮಾಡಿದರು.

ಮಂಗಳವಾರ ವಿಧಾನಸಭೆಯ ಪ್ರಶ್ನೋತ್ತರ ಕಲಾಪದಲ್ಲಿ ಕಾಂಗ್ರೆಸ್ ಸದಸ್ಯ ಅಶೋಕ್ ರೈ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬಂದೂಕುಗಳ ಪರವಾನಿಗೆ ನವೀಕರಣಕ್ಕೆ ಪೊಲೀಸ್ ಅಧಿಕಾರಿಗಳು ತಕರಾರು ತೆಗೆಯುತ್ತಿದ್ದಾರೆ. ಕಾಡುಪ್ರಾಣಿಗಳು ಬೆಳೆನಾಶ ಮಾಡಿ, ಅದಕ್ಕೆ ಅರಣ್ಯ ಅಧಿಕಾರಿಗಳು ಪರಿಹಾರ ನೀಡಿದ್ದರೆ ಮಾತ್ರ ಅಂತಹ ಪ್ರಕರಣಗಳನ್ನು ಬಂದೂಕು ಪರವಾನಗಿ ನವೀಕರಣಕ್ಕೆ ಪರಿಗಣಿಸುವುದಾಗಿ ಹೇಳುತ್ತಿದ್ದಾರೆ.

ಇದು ಸರಿಯಲ್ಲ ಮಂಗಗಳು ಕೃತಕ ಬಂದೂಕಿಗೆ ಎದುರುತ್ತಿಲ್ಲ. ಕಾಡು ಹಂದಿ ಬೆಳೆ ನಾಶ ಮಾಡುತ್ತಿವೆ. ಆನೆ ದಾಳಿಯಿಂದ ಮೂರು ಜನ ಸಾವನ್ನಪ್ಪಿದ್ದಾರೆ ಎಂದು ಉಲ್ಲೇಖಿಸಿದರು.

ಇದಕ್ಕೂ ಮುನ್ನ ಮತ್ತೊಂದು ಪ್ರಶ್ನೆಯಲ್ಲಿ ತೀರ್ಥಹಳ್ಳಿ ಕ್ಷೇತ್ರದ ಬಿಜೆಪಿ ಶಾಸಕ ಅರಗ ಜ್ಞಾನೇಂದ್ರ, ಮಲೆನಾಡು ಮತ್ತು ಕರಾವಳಿ ಭಾಗದಲ್ಲಿ ಕಳ್ಳತನ ಪ್ರಕರಣಗಳು ಹೆಚ್ಚಾಗಿವೆ. ಈ ಮೊದಲು ದಾರಿ ತಿಳಿಯದೆ ನಮ್ಮ ಭಾಗದಲ್ಲಿ ಕಳ್ಳತನಕ್ಕೆ ಬರಲು ಹೆದುರುತ್ತಿದ್ದರು. ಇತ್ತೀಚೆಗೆ ಬಂದೂಕುಗಳ ಪರವಾನಗಿಗಳ ನವೀಕರಣಕ್ಕೆ ಕಡಿವಾಣ ಹಾಕಲಾಗಿದೆ. ಇದರಿಂದಾಗಿ ಕಳ್ಳತನ ಪ್ರಕರಣಗಳು ಹೆಚ್ಚಾಗುತ್ತಿದೆ ಎಂದು ಹೇಳಿದರು.

ಸದಸ್ಯರಾದ ಚನ್ನಬಸಪ್ಪ ಹರೀಶ್ ಪೂಂಜಾ, ಭಾಗೀರಥಿ ಮುರುಳ್ಯಾ, ಸಿಮೆಂಟ್ ಮಂಜು ಸೇರಿದಂತೆ



ಹಲವಾರು ಶಾಸಕರು ಬಂದೂಕುಗಳ ಪರವಾನಗಿಯ ನವೀಕರಣಕ್ಕೆ ಬಗ್ಗೆ ಒತ್ತಡ ಹೇರಿದರು.

**ಕ್ರಮ:** ಕುಂದಾಪುರದಲ್ಲಿರುವ ಅಗ್ನಿಶಾಮಕ ಠಾಣೆಯನ್ನು ನಗರ ಪ್ರದೇಶದ ವ್ಯಾಪ್ತಿಯೊಳಗೆ ಆರಂಭಿಸಲು ನಿವೇಶನ ಲಭ್ಯತೆ ಆಧರಿಸಿ ಕ್ರಮ ಕೈಗೊಳ್ಳುವುದಾಗಿ ಸದಸ್ಯ ಕಿರಣ್ ಕುಮಾರ್ ಕೊಡ್ಗಿ ಅವರ ಪ್ರಶ್ನೆಗೆ ಸಚಿವರು ಇದೇ ವೇಳೆ ಉತ್ತರಿಸಿದರು.

> ನಿಯಮ ಬದ್ಧವಾಗಿದ್ದರೆ ಅಂತಹ ಬಂದೂಕು ಪರವಾನಗಿ ಅರ್ಜಿಗಳಿಗೆ ಪೊಲೀಸರು ನಿರಪೇಕ್ಷಣಾ ಪತ್ರ ನೀಡುತ್ತಾರೆ. ಪರವಾನಗಿಯನ್ನು ನವೀಕರಣ ಮಾಡಿಕೊಡುವುದು ಜಿಲ್ಲಾಧಿಕಾರಿಗಳ ಜವಾಬ್ದಾರಿ. ಕ್ರಿಮಿನಲ್ ಹಿನ್ನೆಲೆ ಇದ್ದವರಿಗೆ, ಜಮೀನು ಬಿಟ್ಟು ಬೇರೆ ಕಡೆ ವಾಸ ಇರುವವರಿಗೆ, ವಯಸ್ಸಾದವರಿಗೆ ಮತ್ತು ಮಾನಸಿಕ ಸೀಮಿತ ಇಲ್ಲದವರಿಗೆ ಬಂದೂಕು ಪರವಾನಿಗೆ ನವೀಕರಣ ಮಾಡಿ ಕೊಡುವುದಿಲ್ಲ. ಉಳಿದಂತೆ ಯಾವುದೇ ತಕರಾರುಗಳು ಇಲ್ಲ. ಒಂದು ವೇಳೆ ನಿಯಮದ ಅನುಸಾರವಿದ್ದು ಎಲ್ಲಿಯಾದರೂ ಅರ್ಜಿಗಳು ತಿರಸ್ಕಾರವಾಗಿದ್ದರೆ ಅಂತಹ ಪ್ರಕರಣಗಳನ್ನು ಪುನರ್ ಪರಿಶೀಲಿಸಲಾಗುವುದು.
>
> **-ಡಾ.ಜಿ.ಪರಮೇಶ್ವರ್, ಗೃಹ ಸಚಿವ**



## ಏರುತ್ತಿದೆ ಬಿಸಿಲ ಧಗೆ: 183 ಗ್ರಾಮಗಳಲ್ಲಿ ಶುರುವಾದ ನೀರಿನ ಸಮಸ್ಯೆ

■ ಜನರಿಗೆ ಕುಡಿಯುವ ನೀರಿನ ಅಭಾವ ಉಂಟಾಗದಂತೆ ಅಗತ್ಯ ವ್ಯವಸ್ಥೆ ಸಚಿವ ಪ್ರಿಯಾಂಕ್ ಖರ್ಗೆ ಸೂಚನೆ

• ಉದಯವಾಹಿನಿ, ಬೆಂಗಳೂರು

ರಾಜ್ಯದಲ್ಲಿ ಏರುತ್ತಿದೆ ಬಿಸಿಲ ಧಗೆ ದಿನದಿಂದ ದಿನಕ್ಕೆ ಏರಿಕೆ ಆಗುತ್ತಿದೆ. ಈ ನಡುವೆ ರಾಜ್ಯದ 183 ಗ್ರಾಮಗಳಲ್ಲಿ ನೀರಿನ ಸಮಸ್ಯೆ ಶುರುವಾಗಿದೆ. ಈ ಹಿನ್ನೆಲೆಯಲ್ಲಿ 31 ಗ್ರಾಮಗಳಿಗೆ ಟ್ಯಾಂಕರ್ ನೀರು ಪೂರೈಕೆ ಮಾಡಲು ಸರ್ಕಾರ ಕ್ರಮ ಕೈಗೊಂಡಿದೆ. ಬೇಸಿಗೆಯಲ್ಲಿ ಗ್ರಾಮೀಣ ಪ್ರದೇಶದ ಜನರಿಗೆ ಕುಡಿಯುವ ನೀರಿನ ಅಭಾವ ಉಂಟಾಗದಂತೆ ಅಗತ್ಯ ವ್ಯವಸ್ಥೆ ಸಚಿವ ಪ್ರಿಯಾಂಕ್ ಖರ್ಗೆ ಸೂಚನೆ ನೀಡಿದ್ದಾರೆ.



**ಉತ್ತರ ಕರ್ನಾಟಕಕ್ಕೆ ಮುಂದಿನ ಮೂರು ತಿಂಗಳು ಹೆಚ್ಚು ಬಿಸಿಲು, ಬಿಸಿಗಾಳಿ ಅಲರ್ಟ್; ಐಎಂಡಿ ಮುನ್ಸೂಚನೆ:** ಈ ಕುರಿತಾಗಿ ಮಾಹಿತಿ ನೀಡಿದ ಅವರು, ರಾಜ್ಯದ ಗ್ರಾಮಾಂತರ ಪ್ರದೇಶಗಳಲ್ಲಿ ಬೇಸಿಗೆಯಲ್ಲಿ ಎದುರಾಗಲಿರುವ ಕುಡಿಯುವ ನೀರಿನ ಅಭಾವವನ್ನು ಎದುರಿಸಲು ಮೊದಲ ಆದ್ಯತೆಯಾಗಿ ಖಾಸಗಿ ಬೋರ್‌ವೆಲ್‌ಗಳನ್ನು ಬಾಡಿಗೆ ಮುಖಾಂತರ ಪಡೆಯಲಾಗುವುದಲ್ಲದೆ, ಅಗತ್ಯವಿರುವ ಸ್ಥಳದಲ್ಲಿ ಟ್ಯಾಂಕರ್ ಮೂಲಕ ನೀರನ್ನು ಸರಬರಾಜು ಮಾಡಲು ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದು ತಿಳಿಸಿದ್ದಾರೆ.

ನೀರು ಬತ್ತಿ ಹೋಗಿರುವ ಕೊಳವೆ ಬಾವಿಗಳನ್ನು ಫ್ಲಶಿಂಗ್



ಮತ್ತು ಆಳಗೊಳಿಸುವುದರೊಂದಿಗೆ ನೀರಿನ ಮೂಲಗಳನ್ನು ಹೆಚ್ಚಿಸಲಾಗುವುದು.

ಅನಿವಾರ್ಯ ಸಂದರ್ಭಗಳಲ್ಲಿ ಕೊಳವೆಬಾವಿಗಳನ್ನು ಕೊರೆಯುವುದು ಅತ್ಯಗತ್ಯವೆಂದು ಕಂಡು ಬಂದಲ್ಲಿ, ಸಂಬಂಧಪಟ್ಟ ಭೂವಿಜ್ಞಾನಿಗಳ ವರದಿಯನುಸಾರ ಸೂಕ್ತ ಕ್ರಮ ಕೈಗೊಂಡು ಕುಡಿಯುವ ನೀರಿನ ವ್ಯವಸ್ಥೆಯನ್ನು ಕಲ್ಪಿಸಲು ಕಾಮಗಾರಿಗಳನ್ನು ಕೈಗೊಳ್ಳಲು ತಿಳಿಸಲಾಗಿದೆ ಎಂದೂ ಸಚಿವರು ಮಾಹಿತಿ ನೀಡಿದ್ದಾರೆ.

ರಾಜ್ಯವು ಮೂಲತಃ ಶುಷ್ಕ ಪ್ರದೇಶವಾಗಿರುವುದರಿಂದ ಬೇಸಿಗೆಯಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ಹಾಲಿ ಇರುವ ಬಹುತೇಕ ಜಲಮೂಲಗಳು ಬತ್ತಿಹೋಗಿ ಗ್ರಾಮದ ಜನರಿಗೆ ಕುಡಿಯುವ ನೀರಿನ ಸಮಸ್ಯೆ ಉಂಟಾಗುವ ಸಂಭವವಿರುತ್ತದೆ.

ಸದರಿ ಸಮಸ್ಯೆಯನ್ನು ದೈನಂದಿನ ಆಧಾರದ ಮೇಲೆ ಮೇಲ್ವಿಚಾರಣೆ ಮಾಡಲು ಕ್ರಮವಹಿಸಿದ್ದು, ಆದ್ದರಿಂದ ಗ್ರಾಮೀಣ ಪ್ರದೇಶದ ಜನರಿಗೆ ನೀರಿನ ಅಭಾವ ಎದುರಾದಲ್ಲಿ ಕುಡಿಯುವ ನೀರಿನ ವ್ಯವಸ್ಥೆಯನ್ನು ಕಲ್ಪಿಸುವ ನಿಟ್ಟಿನಲ್ಲಿ ಕ್ರಮಗಳನ್ನು ಕೈಗೊಳ್ಳಲು ಈಗಾಗಲೆ ಹೊರಡಿಸಲಾಗಿರುವ ಸುತ್ತೋಲೆಯಲ್ಲಿ ತಿಳಿಸಲಾಗಿರುತ್ತದೆ ಎಂದು ಸಚಿವರು ಹೇಳಿದ್ದಾರೆ.

ಶುದ್ಧ ನೀರು ಸರಬರಾಜು ಮಾಡುವ ನಿಟ್ಟಿನಲ್ಲಿ ಗ್ರಾಮ ಪಂಚಾಯತಿ ಹಾಗೂ ಗ್ರಾಮ ಮಟ್ಟದಲ್ಲಿ ಪ್ರಾಥಮಿಕ ಹಂತವಾಗಿ ಎಲ್ಲಾ ಕುಡಿಯುವ ನೀರಿನ ಮೂಲಗಳ ಮಾದರಿಗಳನ್ನು, ಪ್ರತಿ ಗ್ರಾಮದಲ್ಲಿ ಕನಿಷ್ಠ 3 ನಳ ನೀರು ಸಂಪರ್ಕಗಳ ನೀರಿನ ಗುಣಮಟ್ಟದ ಪರೀಕ್ಷೆಗಳನ್ನು ಕೂಡಲೇ ಕೈಗೊಂಡು ಮಾಹಿತಿಗಳನ್ನು ದಾಖಲಿಸಲು ಸೂಚಿಸಲಾಗಿದೆ.

ಎಲ್ಲಾ ಕುಡಿಯುವ ನೀರಿನ ಮೇಲ್ಮಟ್ಟದ ಜಲಸಂಗ್ರಹಾರಗಳನ್ನು ಮಾರ್ಗಸೂಚಿಗಳ ಅನ್ವಯ ಶುಚಿಗೊಳಿಸಲು ಸೂಕ್ತ ಕ್ರಮವಹಿಸುವಂತೆಯೂ ಸೂಚಿಸಲಾಗಿದೆ ಎಂದು ಸಚಿವರು ವಿವರಿಸಿದ್ದಾರೆ.

### 183 ಗ್ರಾಮಗಳಲ್ಲಿ ನೀರಿನ ಸಮಸ್ಯೆ

ರಾಜ್ಯದಲ್ಲಿ ಈಗಾಗಲೆ 21 ಜಿಲ್ಲೆಗಳ 144 ತಾಲ್ಲೂಕುಗಳಲ್ಲಿನ 183 ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಉಂಟಾಗಿರುತ್ತದೆ, ಇವುಗಳ ಪೈಕಿ 31 ಗ್ರಾಮಗಳಿಗೆ 96 ಟ್ಯಾಂಕರ್‌ಗಳ ಮುಖಾಂತರ ಹಾಗೂ 152 ಗ್ರಾಮಗಳಿಗೆ 154 ಖಾಸಗಿ ಕೊಳವೆ ಬಾವಿಗಳನ್ನು ಬಾಡಿಗೆ ಆಧಾರದ ಮೇಲೆ ಪಡೆದು ಕುಡಿಯುವ ನೀರನ್ನು ಒದಗಿಸಲು ಕ್ರಮವಹಿಸಲಾಗಿದೆ ಎಂಬ ಮಾಹಿತಿಯನ್ನು ಸಚಿವ ಪ್ರಿಯಾಂಕ್ ಖರ್ಗೆ ನೀಡಿದ್ದಾರೆ. ಮಾರ್ಚ್ 2026ರಲ್ಲಿ ಫ್ಲಷಿಂಗ್ ಹಾಗೂ ಆಳಗೊಳಿಸುವ ಮೂಲಕ 1053 ಕೊಳವೆ ಬಾವಿಗಳನ್ನು ದುರಸ್ತಿಗೊಳಿಸುವುದು ಹಾಗೂ ತುರ್ತು ಸಂದರ್ಭಗಳಲ್ಲಿ ಹೊಸ ಕೊಳವೆ ಬಾವಿಗಳನ್ನು ಕೊರೆಯುವುದು ಅವಶ್ಯಕವೆಂದು ನಿರೀಕ್ಷಿಸಲಾಗಿದ್ದು, ಆದ್ಯತೆಯ ಮೇರೆಗೆ ಕ್ರಮವಹಿಸಲು ಎಲ್ಲಾ ಜಿಲ್ಲಾಡಳಿತಕ್ಕೆ ಸೂಚಿಸಲಾಗಿದೆ ಎಂದು ಸಚಿವರು ತಿಳಿಸಿದ್ದಾರೆ.

**ಈ ದಿನದ ದರ** ಪೆಟ್ರೋಲ್: 102.96 ₹/L | ಡೀಸೆಲ್ : 90.99 ₹/L | ಬಂಗಾರ: ₹16,238/Gram24ct ₹14,885/Gram22ct | ಬೆಳ್ಳಿ: ₹290.00/Gram

## ಹುಲಿ ದಾಳಿಗೆ ಹಸು ಸಾವು : ಪಡಗೂರಿನಲ್ಲಿ ಘಟನೆ ಅರಣ್ಯ ಇಲಾಖೆ ವಿರುದ್ಧ ತೀವ್ರ ಆಕ್ರೋಶ

• ಉದಯವಾಹಿನಿ, ಗುಂಡ್ಲುಪೇಟೆ

ಜಮೀನಿನಲ್ಲಿ ಮೇಯುತ್ತಿದ್ದ ಹಸುವಿನ ಮೇಲೆ ಹುಲಿಯೊಂದು ದಾಳಿ ನಡೆಸಿ ಬಲಿ ಪಡೆದಿರುವ ಘಟನೆ ತಾಲ್ಲೂಕಿನ ಪಡಗೂರು ಗ್ರಾಮದ ರೈತನ ಜಮೀನಿನಲ್ಲಿ ಮಂಗಳವಾರ ಸಂಜೆ ಸಂಭವಿಸಿದೆ. ಗ್ರಾಮದ ಗುರುಸಿದ್ದಪ್ಪ ಎಂಬವರಿಗೆ ಸೇರಿದ ಹಸು ಹುಲಿ ದಾಳಿಗೆ ಬಲಿಯಾಗಿದ್ದು ಅರಣ್ಯ ಇಲಾಖೆ ಅಧಿಕಾರಿಗಳ ವಿರುದ್ಧ ರೈತರು ತೀವ್ರ ಆಕ್ರೋಶ ಹೊರಹಾಕಿದ್ದಾರೆ.


ಉದಯವಾಹಿನಿ ಚಿತ್ರ

ಮೊನ್ನೆಯಷ್ಟೇ ಚಿರತೆ ಮರಿಗಳು ಪತ್ತೆಯಾಗಿದ್ದ ಶಿವಕುಮಾರ್ ಎಂಬ ರೈತನ ಜಮೀನಿನಲ್ಲೇ ಘಟನೆ ನಡೆದಿರುವುದು ಆತಂಕ ಸೃಷ್ಟಿಸಿದೆ, ಬಾಳೆ ತೋಟದಲ್ಲಿ ಪತ್ತೆಯಾಗಿದ್ದ ಚಿರತೆ ಮರಿಗಳನ್ನ ಅರಣ್ಯ ಇಲಾಖೆ ಸುಪರ್ದಿಗೆ ನೀಡಿದ ಮೂರ್ನಾಲ್ಕು ದಿನದಲ್ಲೇ ಹುಲಿ ಪ್ರತ್ಯಕ್ಷವಾಗಿರುವುದು ರೈತರನ್ನ ಬೆಚ್ಚಿಬೀಳಿಸಿದ್ದು ಹಸು ಕಳೆದುಕೊಂಡ ರೈತನಿಗೆ ಸೂಕ್ತ ಪರಿಹಾರ ನೀಡುವಂತೆ ಸ್ಥಳೀಯರು ಒತ್ತಾಯಿಸಿದ್ದಾರೆ. ಘಟನಾ ಸಂಬಂದ ಸ್ಥಳಕ್ಕೆ ದೌಡಾಯಿಸಿದ ಅರಣ್ಯ ಇಲಾಖೆ ಅಧಿಕಾರಿಗಳು ಪರಿಶೀಲನೆ ನಡೆಸಿ ಪರಿಹಾರದ ಭರವಸೆ ನೀಡಿದ್ದಾರೆ.

**ವ್ಯಾಘ್ರನೊಡನೆ ಸೆಣಸಾಟ :** ಹುಲಿ ಬಾಯಿಂದ ಹಸುವನ್ನ ರಕ್ಷಿಸಲು ರೈತ ಗುರುಸಿದ್ದಪ್ಪ ಹರಸಾಹಸ ಪಟ್ಟಿದ್ದಾರೆ, ಗೋವಿನ ಮೇಲೆರಗಿದ ವ್ಯಾಘ್ರನಿಗೆ ಬಡಿಗೆಯಿಂದ ಥಳಿಸಿ ಜೋರಾಗಿ ಕೂಗಿಕೊಂಡಿದ್ದಾರೆ ಈ ವೇಳೆ ಗಾಬರಿಗೊಂಡ ವ್ಯಾಘ್ರ ಸ್ಥಳದಿಂದ ಕಾಲ್ಕಿತ್ತರೂ ಸಹ ದಾಳಿಯ ತೀವ್ರತೆಗೆ ಹಸು ಸಾವನ್ನಪ್ಪಿದೆ.

**ಹುಲಿ ಸೆರೆಗೆ ಒತ್ತಾಯ :** ಪಡಗೂರು ಗ್ರಾಮದಲ್ಲಿ ಹುಲಿ ಚಿರತೆ ಉಪಟಳ ಉಲ್ಬಣಗೊಂಡಿದ್ದು ರೈತರ ಹಿತಕಾಯಲು ಅರಣ್ಯ ಇಲಾಖೆ ಮುಂದಾಗಬೇಕು ಈ ನಿಟ್ಟಿನಲ್ಲಿ ಕೂಂಬಿಂಗ್ ಕಾರ್ಯಚರಣೆಗೆ ಮುಂದಾಗಬೇಕು, ಹಾಡಹಗಲೇ ರೈತರ ಜಮೀನುಗಳಲ್ಲಿ ಕಾಣಿಸಿಕೊಳ್ಳುತ್ತಿರುವ ಮೃಗಗಳಿಂದ ಕುಲಕಸುಬಿನ ಮೇಲೆ ಪರಿಣಾಮ ಬೀರುತ್ತಿದೆ, ಕೃಷಿ ಚಟುವಟಿಕೆಗೆ ಮುಂದಾಗಲು ಸಹ ರೈತರು ಹಿಂದೇಟು ಹಾಕುವಂತ ಪರಿಸ್ಥಿತಿಯನ್ನ ತಿಳಿಗೊಳಿಸುವ ಕೆಲಸಕ್ಕೆ ಅರಣ್ಯ ಇಲಾಖೆ ಮುಂದಾಗಬೇಕು ಎಂದು ರೈತ ಮುಖಂಡ ಶಿವಕುಮಾರ್ ಆಗ್ರಹಿಸಿದ್ದಾರೆ.

## ಮೈಸೂರಿನಲ್ಲಿ ಹೊಸ ಲೇಔಟ್ ಎಂಡಿಎ ಸಜ್ಜು

### ಪಕ್ಕದ 4 ಗ್ರಾಮಗಳ 2000 ಎಕರೆಯಲ್ಲಿ ನಿರ್ಮಾಣ; 460 ಕೋಟಿ ರೂ. ಮೀಸಲು

• ಉದಯವಾಹಿನಿ, ಮೈಸೂರು

ಮೈಸೂರು ಅಭಿವೃದ್ಧಿ ಪ್ರಾಧಿಕಾರ ಬೊಮ್ಮೇನಹಳ್ಳಿ, ಸುತ್ತಮ ಗ್ರಾಮಗಳಲ್ಲಿ ಹೊಸ ಬಡಾವಣೆ ನಿರ್ಮಾಣಕ್ಕೆ ಮಹತ್ವದ ತೀರ್ಮಾನ ಕೈಗೊಂಡಿದ್ದು, ಈ ಬಾರಿಯ ಬಜೆಟ್‌ನಲ್ಲಿ 460 ಕೋಟಿ ರೂ. ಮೀಸಲಿಟ್ಟಿದೆ. ನಗರದ ಎಂಡಿಎ ಕಚೇರಿ ಆವರಣದಲ್ಲಿ ಅಧ್ಯಕ್ಷರೂ ಆದ ಜಿಲ್ಲಾಧಿಕಾರಿ ಜಿ ಲಕ್ಷ್ಮೀಕಾಂತ ರೆಡ್ಡಿ ಅವರ ಅಧ್ಯಕ್ಷತೆಯಲ್ಲಿ ನಡೆದ ವಿಶೇಷ ಸಭೆಯಲ್ಲಿ ಎಂಡಿಎ ಆಯುಕ್ತ ಕೆ.ಆರ್.ರಕ್ಷಿತ್ 2026-27ನೇ ಸಾಲಿನ ಆಯವ್ಯಯ ಮಂಡಿಸಿದರು.



ಉದಯವಾಹಿನಿ ಚಿತ್ರ

ಮೈಸೂರು ತಾಲ್ಲೂಕಿನ ಇಲವಾಲ ಹೋಬಳಿಯ ಬೊಮ್ಮೇನಹಳ್ಳಿ, ನಾಗವಾಲ, ಕಮ್ಮರಹಳ್ಳಿ, ದೊಡ್ಡಮಾರನಗೌಡನಹಳ್ಳಿ ಸೇರಿದಂತೆ ಇತರೆ ಗ್ರಾಮಗಳಲ್ಲಿ ರೈತರ ಸಹಭಾಗಿತ್ವದಲ್ಲಿ ಬಡಾವಣೆ ನಿರ್ಮಾಣ ಯೋಜನೆಯನ್ನು ಪ್ರಾಧಿಕಾರ ಕೈಗೆತ್ತಿಕೊಂಡಿದೆ. ಈಗಾಗಲೇ ಒಂದಷ್ಟು ರೈತರ ಜಮೀನು ನೀಡಲು ಮುಂದೆ ಬಂದಿದ್ದಾರೆ. ನಿವೇಶನ ರಹಿತರಿಗೆ ಸೂರು ಕಲ್ಪಿಸುವ ಉದ್ದೇಶದಿಂದ 2 ಸಾವಿರ ಎಕರೆಯಷ್ಟು ಪ್ರದೇಶದಲ್ಲಿ ವಸತಿ ಬಡಾವಣೆ ನಿರ್ಮಾಣಕ್ಕೆ ಎಂಡಿಎ ಸಿದ್ಧತೆ ನಡೆಸಿದೆ.

ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತರೆಡ್ಡಿ ಮಾತನಾಡಿ, ಶೇ. 50:50ರಷ್ಟು ಅನುಪಾತದಲ್ಲಿ ಬಡಾವಣೆ ನಿರ್ಮಿಸಲು ಉದ್ದೇಶಿಸಲಾಗಿದೆ. ರೈತರು ಸ್ವಯಂ ಪ್ರೇರಿತರಾಗಿ ನೀಡುವ ಜಮೀನನ್ನು ಬಡಾವಣೆಯಾಗಿ ಪರಿವರ್ತಿಸುವ ಕೆಲಸವನ್ನು ಪ್ರಾಧಿಕಾರ ಮಾಡಲಿದೆ. ಒಟ್ಟು ನಿವೇಶನಗಳಲ್ಲಿ ಶೇ.50ರಷ್ಟು ಎಂಡಿಎ ಇಟ್ಟುಕೊಂಡು, ಉಳಿದ ಶೇ.50ರ ಷ್ಟನ್ನು ಭೂ ಮಾಲೀಕರಿಗೆ ನೀಡಲಿದೆ, ಎಂದು ಮಾಹಿತಿ ನೀಡಿದರು.

**ಎಂಡಿಎ ಚೊಚ್ಚಲ ಬಜೆಟ್:** ಮುಡಾದಿಂದ ಎಡಿಎಯಾಗಿ ಬದಲಾದ ಬಳಿಕ ಚೊಚ್ಚಲ ಬಜೆಟ್ ಮಂಡನೆಯಾಯಿತು. ಮೊದಲ ಬಜೆಟ್‌ನಲ್ಲೇ ಒಟ್ಟು 799.90 ಕೋಟಿ ರೂ. ಆದಾಯವನ್ನು ಪ್ರಾಧಿಕಾರವು ನಿರೀಕ್ಷಿಸಿದೆ. ಇದರಲ್ಲಿ ಆಡಳಿತ ನಿರ್ವಹಣೆ ಜತೆಗೆ ನಾನಾ ಯೋಜನೆಗಳಿಗಾಗಿ ಒಟ್ಟು 579.18 ಕೋಟಿ ರೂ. ವಿನಿಯೋಗಿಸಲು ಯೋಜಿಸಲಾಗಿದೆ. 220.72 ಕೋಟಿ ರೂ. ಉಳಿತಾಯವಾಗಲಿದ್ದು, ಇದು ನಿಶ್ಚಿತ ಠೇವಣಿ ರೂಪದಲ್ಲಿ ಮುಂದುವರಿಯಲಿದೆ. ಪ್ರಾಧಿಕಾರದ ಸದಸ್ಯರಾದ ಸೆಸ್ಕ್ ಮುಖ್ಯ ಇಂಜಿನಿಯರ್ ಎ.ಎ.ಸುನಿಲ್‌ಕುಮಾರ್, ಎಂಡಿಎ ನಗರ ಯೋಜನಾ ಸದಸ್ಯ ಶಿವರಾಮಯ್ಯ, ಇಂಜಿನಿಯರ್ ಸದಸ್ಯ ಸಿ.ಎಸ್.ಮಂಜು ಹಾಗೂ ಕಾರ್ಯದರ್ಶಿ ಕೆ.ಜಾನ್ಸನ್ ಹಾಜರಿದ್ದರು. ಒಳಚರಂಡಿ ಮಂಡಳಿ ಮುಖ್ಯ ಎಂಜಿನಿಯರ್ ಸುಭಾಷ್ ನಾಯಕವಾಡ ಆನ್‌ಲೈನ್ ಮೂಲಕ ಹಾಜರಾದರು.

**ಕನಿಷ್ಠ 1 ಸಾವಿರ ಎಕರೆ ಖಾತ್ರಿಯಾದ ಬಳಿಕ ಸರಕಾರದ ಒಪ್ಪಿಗೆ**

**ರೈತರಿಗೆ ಹಣ ನೀಡಬೇಕಾದ ಅವಶ್ಯಕತೆ ಇಲ್ಲದ್ದರಿಂದ ಭೂ ಸ್ವಾಧೀನಕ್ಕೆ ಯಾವುದೇ ಖರ್ಚು ಇರುವುದಿಲ್ಲ. ಆದರೆ, ಬಡಾವಣೆ ನಿರ್ಮಾಣಕ್ಕೆ ಬೇಕಾಗುವ ಖರ್ಚನ್ನು ಬಜೆಟ್‌ನಲ್ಲಿ ತೆಗೆದಿರಿಸಲಾಗಿದೆ. ಈಗಾಗಲೇ 500 ಎಕರೆಯಷ್ಟು ಭೂಮಾಲೀಕರು ಯೋಜನೆಗೆ ಒಪ್ಪಿಗೆ ಸೂಚಿಸಿದ್ದಾರೆ. ಕನಿಷ್ಠ 1 ಸಾವಿರ ಎಕರೆ ಖಾತ್ರಿಯಾದ ಬಳಿಕ ಸರಕಾರದ ಒಪ್ಪಿಗೆ ಪಡೆದು ಯೋಜನೆ ಆರಂಭಿಸುತ್ತೇವೆ.**

**- ಜಿ.ಲಕ್ಷ್ಮಿಕಾಂತರೆಡ್ಡಿ, ಜಿಲ್ಲಾಧಿಕಾರಿ**

**ಕೆರೆಗಳ ಪುನರುಜ್ಜೀವನ**

**ಇಲವಾಲ, ಸಾಹುಕಾರಹುಂಡಿ, ಬೊಮ್ಮೇನಹಳ್ಳಿ, ಭುಗತಹಳ್ಳಿ, ಚಿಕ್ಕಹಳ್ಳಿ, ನಾಡನಹಳ್ಳಿ ಕೆರೆಗಳು ಹಾಗೂ ಕೂರ್ಗಳ್ಳಿಯಲ್ಲಿನ ಕಲ್ಯಾಣಿ ಹಾಗೂ ಕೆರೆ ಅಭಿವೃದ್ಧಿಗೆ ಪ್ರಾಧಿಕಾರವು 64.21 ಕೋಟಿ ರೂ. ವಿನಿಯೋಗಿಸಲಿದೆ. ಪ್ರಾಧಿಕಾರ ವ್ಯಾಪ್ತಿಯಲ್ಲಿನ ವಿವಿಧ ವಾಣಿಜ್ಯ ಸಂಕೀರ್ಣ, ಕ್ರೀಡಾ ಸಂಕೀರ್ಣ ಹಾಗೂ ಇನ್ನಿತರ ಅಭಿವೃದ್ಧಿ ಕಾಮಗಾರಿಗಳಿಗೆ 31.9 ಕೋಟಿ ಮೀಸಲಿಡಲಾಗಿದೆ. ಕಬಿನಿ ನೀರು ಸರಬರಾಜು ಯೋಜನೆಯ ಎರಡನೇ ಹಂತದ ಉನ್ನತೀಕರಣ ಕಾಮಗಾರಿ ಕೈಗೆತ್ತಿಕೊಳ್ಳಲು 3.5 ಕೋಟಿ ಕಾಯ್ದಿರಿಸಲಾಗಿದೆ.**

**-ಕೆ.ಆರ್.ರಕ್ಷಿತ್, ಆಯುಕ್ತ**

## ವೈದ್ಯರು, ನೌಕರರ ಮುಷ್ಕರ

ಮಿನಿ ನ್ಯೂಸ್

• ಉದಯವಾಹಿನಿ, ಚಿಂತಾಮಣಿ

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಅಧಿಕಾರಿಗಳು ನೌಕರರ ಬೇಡಿಕೆ ಈಡೇರಿಸುವಲ್ಲಿ ವಿಫಲರಾಗಿದ್ದಾರೆಂದು ಆರೋಪಿಸಿ ರಾಜ್ಯ ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಇಲಾಖೆ ಅಧಿಕಾರಿಗಳು, ನೌಕರರ ಸಂಘದ ತಾಲ್ಲೂಕು ಘಟಕ ಮಾರ್ಚ್ 11ರಿಂದ ಅನಿರ್ದಿಷ್ಟಾವಧಿ ಮುಷ್ಕರ ನಡೆಸುವುದಾಗಿ ಎಚ್ಚರಿಕೆ ನೀಡಿದೆ.

ಸಂಘದ ನಿಯೋಗ ತಹಶೀಲ್ದಾರ್ ಸುದರ್ಶನ ಯಾದವ್ ಅವರಿಗೆ ಮನವಿ ಸಲ್ಲಿಸಿತು. ಇಲಾಖೆಯಲ್ಲಿ 36,397 ನೌಕರರಿದ್ದು, 6 ಕೋಟಿ ಜನರಿಗೆ ಸೇವೆ ಸಲ್ಲಿಸುತ್ತಿದ್ದಾರೆ. ಖಾಲಿ ಹುದ್ದೆಗಳನ್ನು ಭರ್ತಿ ಮಾಡುವುದು. ಸಕಾಲಕ್ಕೆ ಔಷಧ ಪೂರೈಕೆ, ಕಳೆದ 5 ವರ್ಷಗಳಿಂದ ಬಾಕಿ ಇರುವ ಮುಂಬಡ್ತಿ ನೀಡುವುದು, ಗುತ್ತಿಗೆ ನೌಕರರಿಗೆ ಸೇವಾ ಭದ್ರತೆ ಒದಗಿಸುವುದು ಸೇರಿದಂತೆ ಹಲವು ಬೇಡಿಕೆಗಳನ್ನು ಮನವಿಯಲ್ಲಿ ಪ್ರಸ್ತಾಪಿಸಲಾಗಿದೆ. ಪ್ರಥಮ ಹಂತದಲ್ಲಿ ಮಾರ್ಚ್ 11 ರಿಂದ 15ರವರೆಗೆ ಕಪ್ಪುಪಟ್ಟಿ ಧರಿಸಿ ಹೊರ ರೋಗಿ ವಿಭಾಗವನ್ನು ಬಹಿಷ್ಕರಿಸಿ ತುರ್ತು ಸೇವೆ ಮಾತ್ರ ನೀಡಲಾಗುವುದು. ಬೇಡಿಕೆ ಈಡೇರದಿದ್ದರೆ ಮಾರ್ಚ್ 16ರಿಂದ ಎರಡನೇ ಹಂತದ ಅನಿರ್ದಿಷ್ಟಾವಧಿ ಮುಷ್ಕರ ಆರಂಭಿಸುವುದಾಗಿ ಸಂಘ ಮುಖಂಡರು ತಿಳಿಸಿದ್ದಾರೆ.

## ಬೇರಂಬಾಡಿ ವಾಲ್ಮೀಕಿ ಸಮುದಾಯದ ಬೀದಿಯಲ್ಲಿ ಚರಂಡಿ ಅವ್ಯವಸ್ಥೆ ಗ್ರಾಮಪಂಚಾಯತಿ ವಿರುದ್ಧ ಸ್ಥಳೀಯರ ಕಿಡಿ

• ಉದಯವಾಹಿನಿ, ಗುಂಡ್ಲುಪೇಟೆ

ಗಬ್ಬೆದ್ದು ನಾರುತ್ತಿರುವ ಚರಂಡಿ ಅವ್ಯವಸ್ಥೆಗೆ ಸಿಲುಕಿರುವ ತಾಲ್ಲೂಕಿನ ಬೇರಂಬಾಡಿ ಗ್ರಾಮದ ವಾಲ್ಮೀಕಿ ಸಮುದಾಯದ ಜನರು ಸಾಂಕ್ರಾಮಿಕ ರೋಗದ ಭೀತಿಯಲ್ಲಿದ್ದು ಗ್ರಾಮಪಂಚಾಯತಿ ವಿರುದ್ಧ ತೀವ್ರ ಅಸಮದಾನ ಹೊರಹಾಕಿದ್ದಾರೆ. ಬೇರಂಬಾಡಿ ಗ್ರಾಮದ ವಾಲ್ಮೀಕಿ ಸಮುದಾಯದ ಬೀದಿಯಲ್ಲಿನ ಚರಂಡಿಗಳು ಕಸಕಡ್ಡಿ ತ್ಯಾಜ್ಯದಿಂದ ತುಂಬಿಹೋಗಿದ್ದು ಕೆಟ್ಟ ವಾಸನೆ ಬೀರುತ್ತಿರುವುದರಿಂದ ಸ್ಥಳೀಯರು ಮೂಗು ಮುಚ್ಚಿಕೊಂಡು ಓಡಾಡುವ ಪರಿಸ್ಥಿತಿ ನಿರ್ಮಾಣವಾಗಿದೆ, ಜನರ ಆರೋಗ್ಯದ ಹಿತದೃಷ್ಟಿಯಿಂದ ಸ್ವಚ್ಚತಾ ಕಾಳಜಿವಹಿಸಬೇಕಿದ್ದ ಗ್ರಾಮಪಂಚಾಯತಿ ಕಸ ವಿಲೇವಾರಿಗೂ ಮುಂದಾಗದೆ ಅಶುಚಿತ್ವ ವಾತಾವರಣ ನಿರ್ಮಾಣಕ್ಕೆ ಕಾರಣವಾಗಿದೆ ಎಂದು ಗ್ರಾಮಸ್ಥರು ಆರೋಪಿಸಿದ್ದಾರೆ.


ಉದಯವಾಹಿನಿ ಚಿತ್ರ

ಪಂಚಾಯತಿ ಕೂಗಳತೆ ಅಂತರದಲ್ಲಿರುವ ವಾಲ್ಮೀಕಿ ಸಮುದಾಯದ ಬೀದಿಯಲ್ಲಿನ ಅದ್ವಾನವನ್ನ ಪರಿಶೀಲಿಸದೆ ನಿರ್ಲಕ್ಷ್ಯ ತೋರಿದ ಅಧಿಕಾರಿಗಳ ನಡೆಯಿಂದ ಡೆಂಗ್ಯೂ, ಚಿಕುನ್ ಗುನ್ಯಾ ಇತರ ಖಾಯಿಲೆಗಳಿಗೆ ತುತ್ತಾಗಬೇಕಾಗುತ್ತದೆ ಎಂಬ ಆತಂಕವನ್ನ ಮುಖಂಡರು ವ್ಯಕ್ತಪಡಿಸಿದ್ದಾರೆ. ಬೀದಿಯಲ್ಲಿನ ಚರಂಡಿಗಳು ಸಂಪೂರ್ಣವಾಗಿ ತುಂಬಿಹೋಗಿರುವುದರಿಂದ ದುರ್ವಾಸನೆ ಬೀರುತ್ತಿದೆ, ಶಾಲಾ ಮಕ್ಕಳು, ವಯಸ್ಕರು ಓಡಾಡಲು ಸಹ ವ್ಯಥೆ ಪಡುವಂತಾಗಿದ್ದು ಕೂಡಲೇ ಸ್ವಚ್ಚತಾ ಕಾರ್ಯಕ್ಕೆ ಗ್ರಾಮಪಂಚಾಯತಿ ಮುಂದಾಗಬೇಕು ಎಂದು ನಿವಾಸಿ ಪುನೀತ್ ಕುಮಾರ್ ಆಗ್ರಹಿಸಿದ್ದಾರೆ.

**ಗ್ರಾಮಪಂಚಾಯತಿ ಚುನಾಯಿತ ಸದಸ್ಯರ ಅಧಿಕಾರ ಅವಧಿ ಪೂರ್ಣಗೊಂಡ ಬಳಿಕ ಆಡಳಿತಾಧಿಕಾರಿಗಳನ್ನ ನೇಮಕ ಮಾಡಲಾಗಿದೆ, ಸ್ವಚ್ಚತಾ ಕಾರ್ಯ ಹಾಗೂ ಇನ್ನಿತರ ಸೌಲಭ್ಯಗಳನ್ನ ಒದಗಿಸಲು ಅಧಿಕಾರಿಗಳ ಜೊತೆ ಚರ್ಚಿಸಿ ಶೀಘ್ರದಲ್ಲೇ ಸ್ವಚ್ಚತಾ ಕಾರ್ಯಕ್ಕೆ ಮುಂದಾಗಲಾಗುವುದು.**

**-ರವಿಚಂದ್ರ, ಪಿಡಿಓ , ಬೇರಂಬಾಡಿ**

## ಭೂಮಿಗಾಗಿ ದಲಿತರ ಹೋರಾಟ

• ಉದಯವಾಹಿನಿ, ತುರುವೇಕೆರೆ

ದಲಿತರಿಗೆ ಮಂಜೂರಾಗಿರುವ ಜಮೀನಿನಲ್ಲಿ ದಲಿತರನ್ನು ಉಳುಮೆ ಮಾಡಲು ಬಿಡದೆ ತಾಲ್ಲೂಕು ಆಡಳಿತ ಹಾಗೂ ದಂಡಿನಶಿವರ ಪೊಲೀಸರು ಒಕ್ಕಲೆಬ್ಬಿಸುವ ಕೆಲಸ ಮಾಡುತ್ತಿದ್ದಾರೆ ಎಂದು ಆರೋಪಿಸಿ ದಲಿತ ಸಂಘರ್ಷ ಸಮಿತಿ ಕುಣಿಕೇನಹಳ್ಳಿ ಜಗದೀಶ್ ನೇತೃತ್ವದಲ್ಲಿ ಹಂಪಲಾಪುರ ಸಮೀಪದ ಜಮೀನಿನಲ್ಲಿ ಪ್ರತಿಭಟನೆ ನಡೆಸಲಾಯಿತು.

ದಲಿತ ರೈತರು ಸುಮಾರು ವರ್ಷಗಳಿಂದ ಉಳಿಮೆ ಮಾಡಿಕೊಂಡು ಮಂಜೂರು ಚೀಟಿ ಪಡೆದಿದ್ದಾರೆ. ಆದರೆ ತಾಲ್ಲೂಕು ಆಡಳಿತ ದಲಿತರಿಗೆ ಮಂಜೂರಾಗಿರುವ ಜಮೀನುಗಳು ಅರಣ್ಯಕ್ಕೆ ಸೇರಿದೆ ಎಂದು ಹೇಳಿ ಒಕ್ಕಲೆಬ್ಬಿಸುವ ಕೆಲಸ ಮಾಡುತ್ತಿದೆ. ದಂಡಿನಶಿವರ ಪೊಲೀಸರು ದಲಿತರಿಗೆ ರಕ್ಷಣೆ ಕೊಡದೇ ದಲಿತರ ಜಮೀನಲ್ಲಿ ಕೆಲಸ ಮಾಡಲು ಬಂದಿದ್ದ ಟ್ರ್ಯಾಕ್ಟರ್‌ಗಳನ್ನು ವಾಪಸ್ ಕಳಿಸಿ ದಲಿತ ವಿರೋಧಿ ನೀತಿ ಅನುಸರಿಸುತ್ತಿದ್ದಾರೆ ಎಂದು ಆರೋಪಿಸಿದರು.


ಉದಯವಾಹಿನಿ ಚಿತ್ರ

ದಂಡಿನಶಿವರ ಹೋಬಳೀಯ ಬಿಸಿ ಕಾವಲ್ ಸರ್ವೆ ನಂಬರ್‌ನಲ್ಲಿ ಸಾವಿರಾರು ಎಕರೆ ಜಮೀನು ಇದೆ. ನೂರಾರು ರೈತರು ಜಮೀನು ಮಂಜೂರು ಮಾಡಿಕೊಂಡು ಕೃಷಿ ಮಾಡಿಕೊಂಡಿದ್ದಾರೆ. ಆದರೆ ಮೇಲ್ವರ್ಗದ ಜನರು ಉಳುಮೆ ಮಾಡುವ ರೈತರನ್ನು ತಾಲ್ಲೂಕು ಆಡಳಿತ ಯಾವುದೇ ತಕರಾರು ಮಾಡದೇ ಕೇವಲ ದಲಿತರು ಉಳುಮೆ ಮಾಡುತ್ತಿದ್ದ ಜಮೀನು ಅರಣ್ಯಕ್ಕೆ ಮೀಸಲಾಗಿದೆ ಇಲ್ಲಿ ಯಾವುದೇ ಕೃಷಿ ಚಟುವಟಿಕೆ ಮಾಡಬಾರದು ಎಂದು ಬೆದರಿಸಿ ಒತ್ತಡ ಹೇರುತ್ತಿದೆ ಎಂದರು. ದಲಿತರಿಗೆ ಮಂಜೂರಾಗಿರುವ ಜಮೀನು ಮಾಡಿಕೊಡಬೇಕು. ಪೊಲೀಸರು ರಕ್ಷಣೆ ಕೊಡಬೇಕು ಎಂದು ಸರ್ಕಾರ ಸ್ಪಷ್ಟವಾಗಿ ಹೇಳಿದ್ದರು ದಲಿತರಿಗೆ ನ್ಯಾಯ ಸಿಗುತ್ತಿಲ್ಲ. ಆದ್ದರಿಂದ ನ್ಯಾಯ ಸಿಗುವವರೆಗೂ ಅಹೋರಾತ್ರಿ ಪ್ರತಿಭಟನೆ ನಡೆಸಲಾಗುವುದು ಎಂದರು.

## ಮೀಸಲಾತಿ ಹೆಚ್ಚಿಸಿ ನೇಮಕ ಮಾಡಿ ವಾಲ್ಮೀಕಿ ಸಮುದಾಯದ ಒತ್ತಾಯ

• ಉದಯವಾಹಿನಿ, ತುಮಕೂರು

ರಾಜ್ಯ ಸರ್ಕಾರದ ನೇಮಕಾತಿಯಲ್ಲಿ ಪರಿಶಿಷ್ಟ ಪಂಗಡದವರಿಗೆ ಶೇ 7ರಷ್ಟು ಮೀಸಲಾತಿ ಕಲ್ಪಿಸಬೇಕು. ಹಿಂದಿನ ಮೀಸಲಾತಿಗೆ ಅನುಗುಣವಾಗಿ ನೇಮಕಾತಿ ಮಾಡಬಾರದು ಎಂದು ಜಿಲ್ಲಾ ವಾಲ್ಮೀಕಿ ಸಮುದಾಯದ ಮುಖಂಡರು ಒತ್ತಾಯಿಸಿದ್ದಾರೆ.

ನಗರದಲ್ಲಿ ವಾಲ್ಮೀಕಿ ವಿದ್ಯಾವರ್ಧಕ ಸಂಘದ ಕಚೇರಿಯಲ್ಲಿ ಸಮುದಾಯದ ಮುಖಂಡರ ಸಭೆ ನಡೆಯಿತು. ಜಿಲ್ಲೆಯ ವಿವಿಧ ತಾಲ್ಲೂಕುಗಳಿಂದ ಬಂದಿದ್ದ ಪ್ರಮುಖರು, ಹೊಸದಾಗಿ ಹೆಚ್ಚಳ ಮಾಡಿರುವ ಮೀಸಲಾತಿ ಅನುಸರಿಸಿ ನೇಮಕ ಮಾಡಿಕೊಳ್ಳಬೇಕು ಎಂದು ಆಗ್ರಹಿಸಿದರು. ಶೇ 7ರಷ್ಟು ಮೀಸಲಾತಿ ಅನ್ವಯ ಸರ್ಕಾರ ನೇಮಕಾತಿ ಮಾಡುವುದನ್ನು ಬಿಟ್ಟು, ಹಿಂದಿನಂತೆ ಶೇ 3ರಷ್ಟು ಮೀಸಲಾತಿ ಅನ್ವಯಿಸಿ 56 ಸಾವಿರ ಹುದ್ದೆಗಳ ನೇಮಕಾತಿಗೆ ಮುಂದಾಗಿರುವುದನ್ನು ಪ್ರಮುಖರು ಖಂಡಿಸಿದರು.

ಮುಖಂಡ ಕುದ್ದೂರ್ ಶ್ರೀಧರ್, ಮೀಸಲಾತಿ ಹೆಚ್ಚಳಕ್ಕೆ ಆಗ್ರಹಿಸಿ ಮೂರು ದಶಕಗಳ ಕಾಲ ಹೋರಾಟ ನಡೆಸಲಾಗಿದೆ. ಇದರ ಪರಿಣಾಮವಾಗಿ ಮೀಸಲಾತಿ ಪ್ರಮಾಣವನ್ನು ಶೇ 7ಕ್ಕೆ ಹೆಚ್ಚಿಸಲಾಗಿದೆ. ನಾಗಮೋಹನ್ ದಾಸ್ ವರದಿಯಂತೆ ಜನಸಂಖ್ಯೆಯಗೆ ಅನುಗುಣವಾಗಿ ಮೀಸಲಾತಿ ಪ್ರಮಾಣವನ್ನು ಶೇ 3ರಿಂದ 7ಕ್ಕೆ ಹೆಚ್ಚಿಸಲು ರಾಜ್ಯ ಸರ್ಕಾರ ನಿರ್ಧರಿಸಿತ್ತು. ಇದನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿ, 9ನೇ ಶೆಡ್ಯೂಲ್‌ನಲ್ಲಿ ಸೇರಿಸುವಂತೆ ಕೇಳಿಕೊಂಡಿತ್ತು. ಆದರೆ ಈವರೆಗೂ ಈ ಬಗ್ಗೆ ಕೇಂದ್ರ ಕ್ರಮ ಕೈಗೊಂಡಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

## ವರ್ಷದಲ್ಲಿ ರಸ್ತೆ ಅಭಿವೃದ್ಧಿ ಸಂಪೂರ್ಣ: ಸಚಿವ

• ಉದಯವಾಹಿನಿ, ನಾಗಮಂಗಲ

ಮುಂದಿನ ಒಂದು ವರ್ಷದಲ್ಲಿ ದೇವಲಾಪುರ ಗ್ರಾಮ ಪಂಚಾಯತಿ ವ್ಯಾಪ್ತಿಯ ಎಲ್ಲಾ ಗ್ರಾಮಗಳ ರಸ್ತೆ ಅಭಿವೃದ್ಧಿ ಕೆಲಸಗಳು ಪೂರ್ಣಗೊಳ್ಳಲಿವೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎನ್. ಚಲುವರಾಯಸ್ವಾಮಿ ಹೇಳಿದರು.

ತಾಲ್ಲೂಕಿನ ದೇವಲಾಪುರ ಗ್ರಾಮ ಪಂಚಾಯತಿ ವ್ಯಾಪ್ತಿಯ ಅರಕೆರೆ ಗ್ರಾಮದಲ್ಲಿ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆ, ತಾಲ್ಲೂಕು ಪಂಚಾಯತಿ ಹಾಗೂ ಸ್ಥಳೀಯ ಗ್ರಾಮ ಪಂಚಾಯಿತಿ ಅನುದಾನದಲ್ಲಿ ನಿರ್ಮಾಣಗೊಂಡಿರುವ 15 ಲಕ್ಷ ವೆಚ್ಚದ ಶುದ್ಧ ಕುಡಿಯುವ ನೀರಿನ ಘಟಕ ಉದ್ಘಾಟಿಸಿದ ಬಳಿಕ ಅರಕೆರೆಯಿಂದ ಶೆಟ್ಟಹಳ್ಳಿ, ತಿಬ್ಬನಹಳ್ಳಿ ಗ್ರಾಮಗಳಿಗೆ ಸಂಪರ್ಕ ಕಲ್ಪಿಸುವ 4.95 ಕೋಟಿ ವೆಚ್ಚದ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿ ಅವರು ಮಾತನಾಡಿದರು. ಒಂದು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಎಲ್ಲಾ ಗ್ರಾಮಗಳ ರಸ್ತೆ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೆತ್ತಿಕೊಂಡು ಒಂದು ಅವಧಿಯಲ್ಲಿಯೇ ಪೂರ್ಣಗೊಳಿಸುತ್ತಿರುವುದು ರಾಜ್ಯದಲ್ಲಿಯೇ ಇದೇ ಮೊದಲು. ಇಷ್ಟೆಲ್ಲಾ ಅಭಿವೃದ್ಧಿ ಕೆಲಸಗಳು ಮುಗಿದ ನಂತರ ಜನರ ಪ್ರೀತಿ ವಿಶ್ವಾಸ ಹೇಗಿರುತ್ತದೆ ಎಂಬುದನ್ನು ನೋಡಬೇಕಿದೆ ಎಂದರು. ರಾಜ್ಯ ಸರ್ಕಾರ ಗ್ಯಾರಂಟಿ ಯೋಜನೆಗಳಿಗೆ ಸೀಮಿತವಾಗಿಲ್ಲ. ಗ್ರಾಮೀಣ ಪ್ರದೇಶದ ಜನರಿಗೆ ಕುಡಿಯುವ ನೀರು, ರಸ್ತೆ ಚರಂಡಿಯಂತಹ ಮೂಲ ಸೌಕರ್ಯಗಳೂ ಸೇರಿದಂತೆ ಹಳ್ಳಿಗಳ ಸರ್ವತೋಮುಖ ಅಭಿವೃದ್ಧಿಗೆ ವಿಶೇಷ ಆದ್ಯತೆ ನೀಡುತ್ತಿದೆ. ಜನರು ಇದನ್ನು ಅರ್ಥೈಸಿಕೊಳ್ಳಬೇಕು ಎಂದರು. ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆಯು ಹಲವು ರೀತಿಯ ಜನಪರ ಯೋಜನೆಗಳನ್ನು ಅನುಷ್ಠಾನಗೊಳಿಸುವ ಮೂಲಕ ಜನರ ಹಿತ ಕಾಯುವ ಕೆಲಸ ಮಾಡುತ್ತಿರುವುದು ನಿಜಕ್ಕೂ ಶ್ಲಾಘನೀಯ. ಸರ್ಕಾರ ಹಾಗೂ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆಯ ಸೌಲಭ್ಯಗಳನ್ನು ಸದ್ಬಳಕೆ ಮಾಡಿಕೊಂಡು ಜನರು ಶಾಂತಿ ನೆಮ್ಮದಿಯ ಜೀವನ ನಡೆಸಬೇಕು ಎಂದರು.



## ಸಾಜದ ಉನ್ನತಿಗೆ ಮಹಿಳಾ ಸಬಲೀಕರಣ ಅಗತ್ಯ : ಅನ್ನಧಾನೇಶ್ವರ ಸ್ವಾಮೀಜಿ

• ಉದಯವಾಹಿನಿ, ರಾಮನಗರ

ಹೆಣ್ಣು ಶಕ್ತಿ ಮತ್ತು ಮಾತೃತ್ವದ ಸಂಕೇತವಾಗಿದ್ದು ಸಮಾಜದ ಉನ್ನತಿಗೆ ಮಹಿಳಾ ಸಬಲೀಕರಣ ಅನಿವಾರ್ಯವಾಗಿದೆ. ಸಮಾನತೆ ಇರುವಲ್ಲಿ ಮಾತ್ರ ದೇಶ ಬಲಶಾಲಿಯಾಗಲು ಸಾಧ್ಯ ಎಂದು ಆದಿಚುಂಚನಗಿರಿ ರಾಮನಗರ ಶಾಖಾ ಮಠದ ಶ್ರೀ ಅನ್ನದಾನೇಶ್ವರನಾಥ ಸ್ವಾಮೀಜಿ ಹೇಳಿದರು.


ಉದಯವಾಹಿನಿ ಚಿತ್ರ

ನಗರದ ಪಟೇಲ್ ಆಂಗ್ಲಶಾಲೆಯ ಆವರಣದಲ್ಲಿ ಆಯೋಜಿಸಲಾಗಿದ್ದ ರಾಮನಗರ ತಾಲ್ಲೂಕು ನೇಗಿಲಯೋಗಿ ಮಹಿಳಾ ಘಟಕ ಪ್ರಾರಂಭೋತ್ಸವ ಹಾಗೂ ನೂತನ ಪದಾಧಿಕಾರಿಗಳಿಗೆ ನೇಮಕಾತಿ ಆದೇಶ ವಿತರಿಸಿ ಮಾತನಾಡಿದ ಅವರು ಆಚರಿಸಲಾಗುವ ಅಂತರರಾಷ್ಟ್ರೀಯ ಮಹಿಳಾ ದಿನವು ಮಹಿಳೆಯರ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಮತ್ತು ರಾಜಕೀಯ ಸಾಧನೆಗಳನ್ನು ಗೌರವಿಸುವ ಮತ್ತು ಲಿಂಗ ಸಮಾನತೆಗಾಗಿ ಜಾಗೃತಿ ಮೂಡಿಸುವ ದಿನವಾಗಿದೆ ಎಂದರು.

ಮಹಿಳಾ ಹಕ್ಕುಗಳ ಹೋರಾಟವನ್ನು ನೆನಪಿಸುತ್ತಾ, ಸಮಾನ ಅವಕಾಶಗಳು, ಶಿಕ್ಷಣ, ಸಬಲೀಕರಣದ ಮೂಲಕ ಉತ್ತಮ ಭವಿಷ್ಯ ನಿರ್ಮಿಸಲು ನಮಗೆ ಸ್ಫೂರ್ತಿ ನೀಡುತ್ತದೆ. ಎಂದು ಹೇಳಿದರು.

ಎಲ್ಲಿ ಮಹಿಳೆಯರನ್ನು ಪೂಜಿಸಿ ಗೌರವಿಸುತ್ತಾರೋ ಅಲ್ಲಿ ದೇವತೆಗಳು ನೆಲೆಸಿರುತ್ತಾರೆ ಎಂಬ ಮಾತಿದೆ. ಮಹಿಳೆಯ ರಕ್ಷಣೆ, ಹಕ್ಕುಗಳು, ಮುಂತಾದ ವಿಷಯಗಳ ಕುರಿತು ಜಾಗೃತಿ ಮೂಡಿಸುವ ಕೆಲಸಕ್ಕೆ ನೇಗಿಲಯೋಗಿ ಮಹಿಳಾ ಘಟಕ ಮುಂದಾಗಬೇಕು, ಮಹಿಳೆಯರು ಸಂಘಟಿತರಾಗಿ ತಮ್ಮ ಹಕ್ಕುಗಳಿಗೆ ಹೋರಾಟ ಮಾಡಬೇಕು ಎಂದರು. ನೇಗಿಲಯೋಗಿ ರಾಮನಗರ ಜಿಲ್ಲಾ ಘಟಕದ ಅಧ್ಯಕ್ಷ ಪಟೇಲ್ ಸಿ. ರಾಜು ಮಾತನಾಡಿ ನೇಗಿಲಯೋಗಿ ಸಮಾಜ ಸೇವಾ ಟ್ರಸ್ಟ್ ಕಳೆದ ಐದು ವರ್ಷಗಳಿಂದ ಸಮಾಜಮುಖಿ ಕೆಲಸಗಳನ್ನು ಮಾಡುತ್ತಾ ಬರುತ್ತಿದೆ. ನಮ್ಮ ಜಿಲ್ಲೆಯಲ್ಲಿ ಮಹಿಳಾ ಘಟಕವನ್ನು ಅಸ್ತಿತ್ವಕ್ಕೆ ತಂದಿದ್ದು, ನಮ್ಮ ಟ್ರಸ್ಟ್ ಜೊತೆಯಲ್ಲಿ ಸಾಮಾಜಿಕ ಕಾರ್ಯದಲ್ಲಿ ತೊಡಗಿ, ಸೇವೆಯನ್ನು ಮಾಡಲು ಮುಂದಾಗಿರುವ ಮಹಿಳಾ ಘಟಕದ ಪದಾಧಿಕಾರಿಗಳಿಗೆ ಶುಭವಾಗಲಿ ಎಂದು ಆಶಿಸಿದರು.

ಇದೇ ಸಂದರ್ಭದಲ್ಲಿ ಶ್ರೀ ಅನ್ನದಾನೇಶ್ವರನಾಥ ಸ್ವಾಮೀಜಿಗಳು ನೂತನ ಪದಾಧಿಕಾರಿಗಳಿಗೆ ನೇಮಕಾತಿ ಪತ್ರ ವಿತರಿಸಿ, ಸನ್ಮಾನಿಸಿ ಗೌರವಿಸಿದರು. ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯ ಪ್ರಯುಕ್ತ ಸಾವಿತ್ರಿ ಬಾಯಿ ಪುಲೆ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಲಾಯಿತು.

## ಸರ್ಕಾರಿ ಶಾಲೆ ಮುಚ್ಚುವುದನ್ನು ವಿರೋಧಿಸಿ ಪ್ರತಿಭಟನೆ

• ಉದಯವಾಹಿನಿ, ಶಿರಾ

ತಾಲ್ಲೂಕಿನ ಬರಗೂರು ಗ್ರಾ.ಪಂ ವ್ಯಾಪ್ತಿಯ ಕದಿರೇಹಳ್ಳಿ, ಯಲಪೇನಹಳ್ಳಿ ಮತ್ತು ಯಲಪೇನಹಳ್ಳಿ ಗೊಲ್ಲರಹಟ್ಟಿಯ ಸರ್ಕಾರಿ ಶಾಲೆಗಳನ್ನು ಕೆಪಿಎಸ್ ಮ್ಯಾಗ್ನೆಟ್ ಹೆಸರಿನಲ್ಲಿ ಮುಚ್ಚುತ್ತಿರುವುದನ್ನ ವಿರೋಧಿಸಿ ಎಐಡಿಎಸ್‌ಒ ನೇತೃತ್ವದಲ್ಲಿ ಗ್ರಾಮದ ವಿದ್ಯಾರ್ಥಿಗಳು ಮತ್ತು ಪೋಷಕರು ಪ್ರತಿಭಟನೆ ನಡೆಸಿದರು. ಎಐಡಿಎಸ್‌ಒ ಜಿಲ್ಲಾ ಸೆಕ್ರೆಟರಿಯೇಟ್ ಸದಸ್ಯ ಭರತ್ ಮಾತನಾಡಿ, ರಾಜ್ಯದಲ್ಲಿ ಇದುವರೆಗೂ ಅಧಿಕಾರ ನಡೆಸಿದ ಸರ್ಕಾರಗಳು ಶಿಕ್ಷಣವನ್ನು ಮಾರಾಟದ ವಸ್ತುವನ್ನಾಗಿ ಮಾಡಿವೆ.

ಶಿಕ್ಷಕರಿಗೆ ಶೈಕ್ಷಣಿಕ ಕೆಲಸಕ್ಕಿಂತ ಹೆಚ್ಚಾಗಿ ಜನಗಣತಿ, ಬೀದಿನಾಯಿಗಳ ಎಣಿಕೆಯಂತಹ ಕೆಲಸಗಳನ್ನು ನೀಡುವ ಮೂಲಕ ಸರ್ಕಾರಿ ಶಿಕ್ಷಣ ವ್ಯವಸ್ಥೆಯನ್ನು ದುರ್ಬಲಗೊಳಿಸುತ್ತಿವೆ. ಸರಿಯಾದ ಮೂಲಸೌಕರ್ಯ ಮತ್ತು ಶಿಕ್ಷಕರನ್ನು ನೀಡದೆ ಸರ್ಕಾರಿ ಶಾಲೆಗಳಲ್ಲಿ ದಾಖಲಾತಿ ಕಡಿಮೆ ಇದೆ ಎಂಬ ನೆಪವೊಡ್ಡಿ ಪ್ರತಿ ಗ್ರಾಮ ಪಂಚಾಯಿತಿಗೆ ಒಂದು ಕೆಪಿಎಸ್ -ಮ್ಯಾಗ್ನೆಟ್ ಶಾಲೆ ಸ್ಥಾಪಿಸಿ ರಾಜ್ಯದ 40 ಸಾವಿರ ಶಾಲೆಗಳನ್ನು ಮುಚ್ಚಲು ಸರ್ಕಾರ ಮುಂದಾಗಿದೆ ಎಂದರು.

ಶಿರಾ ತಾಲ್ಲೂಕಿನ ಬರಗೂರು ಶಾಲೆಯನ್ನು ಕೆಪಿಎಸ್ ಮ್ಯಾಗ್ನೆಟ್ ಎಂದು ಗುರುತಿಸಿ, ಅದರ ವ್ಯಾಪ್ತಿಯಲ್ಲಿ ಬರುವ 9 ಹಳ್ಳಿಯ ಸರ್ಕಾರಿ ಶಾಲೆ ಮುಚ್ಚಲು ಮುಂದಾಗಿದ್ದು, ಈ ನೀತಿಯು ರೈತ-ಕಾರ್ಮಿಕರ ಮಕ್ಕಳಿಗೆ ಮಾಡುವ ದೊಡ್ಡ ದ್ರೋಹ ಎಂದು ಆಕ್ರೋಶ ವ್ಯಕ್ತಪಡಿಸಿದರು. ಯಾವುದೇ ಕಾರಣಕ್ಕೂ ನಮ್ಮ ಊರಿನ ಸರ್ಕಾರಿ ಶಾಲೆಯನ್ನ ನಾವು ಮುಚ್ಚಲು ಬಿಡುವುದಿಲ್ಲ. ಇಲ್ಲಿಂದ ಬರಗೂರಿಗೆ ಹೋಗುವುದಕ್ಕೆ ಸರಿಯಾದ ಸಾರಿಗೆ ಸಂಪರ್ಕ ಇಲ್ಲ. ಚಿಕ್ಕ ಮಕ್ಕಳು ಹೇಗೆ ಹೋಗಲು ಸಾಧ್ಯ ಎಂದು ಊರಿನ ಗ್ರಾಮಸ್ಥರು ಆಕ್ರೋಶ ಹೊರ ಹಾಕಿದರು.

## ಡಿಜಿಟಲ್ ಪಾವತಿಗಳನ್ನು ಮಾಡುವಾಗ ಸರಿಯಾದ ಕ್ರಮಗಳನ್ನು ಅನುಸರಿಸಲು ಕರೆ

• ಉದಯವಾಹಿನಿ, ರಾಮನಗರ

ಇತ್ತೀಚಿನ ದಿನಗಳಲ್ಲಿ ಜನರಿಗೆ ಅನುಕೂಲವಾಗುವಂತೆ ಡಿಜಿಟಲ್ ಪೇಮೆಂಟ್ ಬಳಸುವುದರಿಂದ ಜನಗಳಿಗೆ ಸಮಯದ ಉಳಿತಾಯವಾಗುತ್ತದೆ. ಡಿಜಿಟಲ್ ಪಾವತಿಗಳನ್ನು ಮಾಡುವಾಗ ಸರಿಯಾದ ಕ್ರಮವನ್ನು ಅನುಸರಿಸುವಂತೆ ಜಿಲ್ಲಾ ಮಾರ್ಗದರ್ಶಿ ಬ್ಯಾಂಕ್‌ನ ಮುಖ್ಯ ವ್ಯವಸ್ಥಾಪಕರಾದ ಮೋಹನ್ ಕುಮಾರ್ ವೈ.ಎನ್. ಅವರು ತಿಳಿಸಿದರು.



ಉದಯವಾಹಿನಿ ಚಿತ್ರ

ಅವರು ಮಂಗಳವಾರ ನಗರದ ಸಾಯಿಪಾರ್ಟಿ ಹಾಲ್‌ನಲ್ಲಿ ಭಾರತೀಯ ರಿಸರ್ವ್ ಬ್ಯಾಂಕ್, ಜಿಲ್ಲಾ ಪಂಚಾಯಿತಿ ಹಾಗೂ ಜಿಲ್ಲಾ ಮಾರ್ಗದರ್ಶಿ ಬ್ಯಾಂಕ್ ವತಿಯಿಂದ ಮಹಿಳೆಯರಿಗೆ ಡಿಜಿಟಲ್ ಪಾವತಿಗಳ ಕುರಿತು ಆಯೋಜಿಸಲಾಗಿದ್ದ ಜಾಗೃತಿ ಸಪ್ತಾಹ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ಅಪರಿಚಿತ ಕರೆಗಳಿಗೆ ಉತ್ತರಿಸಬೇಡಿ, ನಿಮ್ಮ ಓಟಿಪಿಯನ್ನು ಯಾರಿಗೂ ಹೇಳಬಾರದು ಎಂದು ಜನಗಳಲ್ಲಿ ಅರಿವು ಮೂಡಿಸಿದರು. ಭಾರತೀಯ ರಿಸರ್ವ್ ಬ್ಯಾಂಕ್‌ನ ಸಹಾಯಕ ಮುಖ್ಯ ಪ್ರಬಂಧಕರಾದ ಸುಧೀರ್ ಕೇಸರವಾಣಿ ಮಾತನಾಡಿ, ಭಾರತವು ಡಿಜಿಟಲ್ ಪಾವತಿಗಳಲ್ಲಿ ಮುಂಚೂಣಿ ರಾಷ್ಟ್ರವಾಗಿದ್ದು ಅದರಲ್ಲಿ ಕರ್ನಾಟಕದ ಪಾತ್ರವು ಮಹತ್ವದಾಗಿರುತ್ತದೆ, ಡಿಜಿಟಲ್ ಪಾವತಿಗಳನ್ನು ಬಳಕೆ ಮಾಡುವಾಗ ಆಯಾ ಬ್ಯಾಂಕ್‌ಗಳ ಆಪ್‌ಗಳನ್ನು ಉಪಯೋಗಿಸುವುದು ಬಹಳ ಉತ್ತಮ ಎಂದು ಮಹಿಳೆಯರಿಗೆ ತಿಳಿಸಿದರು. ಭಾರತೀಯ ರಿಸರ್ವ್ ಬ್ಯಾಂಕ್ ಈ ವರ್ಷ ಡಿಜಿಟಲ್ ಪಾವತಿಗಳ ಜಾಗೃತಿ ಸಪ್ತಾಹ ಕಾರ್ಯಕ್ರಮದ ಅಂಗವಾಗಿ ಸ್ವಲ್ಪ ಗಮನವಿಟ್ಟು ಎಂಬ ಧ್ಯೇಯ ವಾಕ್ಯದಡಿ ಇಡೀ ಭಾರತದಾದ್ಯಂತ ಈ ಸಪ್ತಾಹ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು. ಜಿಲ್ಲಾ ಪಂಚಾಯ್ತಿಯ ಲೆಕ್ಕಾಧಿಕಾರಿ ಡಾ. ನಂದೀಶ್ ಎಚ್.ಡಿ. ಅವರು ಮಾತನಾಡಿ ಸ್ವಸಹಾಯ ಸಂಘದ ಮಹಿಳೆಯರು ಹೆಚ್ಚಿನವರು ಡಿಜಿಟಲ್ ಯುಗದಲ್ಲಿ ಡಿಜಿಟಲ್ ಪಾವತಿಗಳ ಬಗ್ಗೆ ತಿಳಿದುಕೊಳ್ಳುವುದು ಬಹಳ ಮುಖ್ಯ, ಇದರಿಂದ ಜನರಿಗೆ ತುಂಬಾ ಸಹಾಯವಾಗುತ್ತದೆ ಅದರ ಅನುಕೂಲ, ಅನಾನುಕೂಲಗಳ ಬಗ್ಗೆ ತಿಳಿದುಕೊಳ್ಳುವುದು ಬಹಳ ಮುಖ್ಯ, ಅದಕ್ಕೆ ಇವತ್ತಿನ ಕಾರ್ಯಕ್ರಮ ನಿಮ್ಮೆಲ್ಲರಿಗೂ ಕೂಡ ತುಂಬಾ ಉಪಯುಕ್ತವಾಗಿದೆ ಎಂದು ತಿಳಿಸಿದರು. ಈ ಕಾರ್ಯಕ್ರಮದ ಅಂಗವಾಗಿ ಬಿತ್ತಿ ಪತ್ರಗಳನ್ನು ಅನಾವರಣ ಮಾಡಲಾಯಿತು. ಲೀಡ್ ಬ್ಯಾಂಕ್‌ನ ಎಫ್.ಎಲ್.ಸಿಗಳಾದ ಸುಮಲತಾ.ಕೆ, ರೂಪಲಕ್ಷ್ಮೀ, ಮಹಾಂತೇಶ್ ಭಾಗವಹಿಸಿದ್ದರು.

### ಸಿಎಂ ಸಿದ್ದರಾಮಯ್ಯ ರಾಮನಗರಕ್ಕೆ ಘೋಷಿಸಿದ ಸಿಲ್ಕ್ ಪಾರ್ಕ್‌ನಿಂದ ಬೆಳೆಗಾರರಿಗೆ ಸಿಗುವ ಅನುಕೂಲಗಳೇನು?

## ರೇಷ್ಮೆ ಉದ್ದಿಮೆ ಅಭಿವೃದ್ಧಿಗೆ ಸುವರ್ಣ ಕಾಲ

• ಉದಯವಾಹಿನಿ, ರಾಮನಗರ:

ಕರ್ನಾಟಕದ ರೇಷ್ಮೆ ರಾಜಧಾನಿ ಎಂದೇ ಹೆಸರುವಾಸಿಯಾಗಿರುವ ರಾಮನಗರ ಇದೀಗ ವಿಶ್ವ ಮಟ್ಟದಲ್ಲಿ ತನ್ನ ಖ್ಯಾತಿಯನ್ನು ವಿಸ್ತರಿಸಿಕೊಳ್ಳಲು ಸಜ್ಜಾಗಿದೆ. ರಾಜ್ಯದಲ್ಲಿ ರೇಷ್ಮೆ ಉದ್ದಿಮೆಯ ಅಭಿವೃದ್ಧಿಗೆ ಸುವರ್ಣ ಕಾಲ ಒದಗಿಬಂದಿದ್ದು, ರೇಷ್ಮೆ ನಗರಿ ರಾಮನಗರ ದೇಶದಲ್ಲಿಯೇ ರೇಷ್ಮೆ ಉದ್ದಿಮೆಯ ಮಹತ್ವದ ಕೇಂದ್ರವಾಗಿ ಹೊರಹೊಮ್ಮುವ ಹಾದಿಯಲ್ಲಿ ಸಾಗುತ್ತಿದೆ.

**ಏಷ್ಯಾದಲ್ಲೇ ದೊಡ್ಡ ಮಾರುಕಟ್ಟೆ:** ರಾಮನಗರದಲ್ಲಿರುವ ರೇಷ್ಮೆ ಮಾರುಕಟ್ಟೆ ಏಷ್ಯಾದಲ್ಲಿಯೇ ಅತ್ಯಂತ ದೊಡ್ಡ ರೇಷ್ಮೆ ಮಾರುಕಟ್ಟೆ ಎನ್ನುವ ಹೆಗ್ಗಳಿಕೆಯನ್ನು ಗಳಿಸಿದೆ. ಪ್ರತಿದಿನ ಈ ಮಾರುಕಟ್ಟೆಗೆ ರಾಜ್ಯದ ಬೇರೆ ಬೇರೆ ಜಿಲ್ಲೆಗಳಿಂದ ಮಾತ್ರವಲ್ಲದೇ, ಹೊರರಾಜ್ಯಗಳಿಂದ ಒಟ್ಟು 40-50 ಮೆಟ್ರಿಕ್ ಟನ್ ರೇಷ್ಮೆಗೂಡುಗಳು ಬರುತ್ತಿವೆ. ಕೆಲವು ಬಾರಿ 60 ರಿಂದ 70 ಮೆಟ್ರಿಕ್ ಟನ್ ರೇಷ್ಮೆ ಗೂಡು ಬಂದಿದ್ದೂ ಇದೆ. ಆದರೆ ಇಲ್ಲಿಅಷ್ಟೊಂದು ಪ್ರಮಾಣದ ರೇಷ್ಮೆಗೂಡಿನ ಹರಾಜು ಪ್ರಕ್ರಿಯೆ ನಡೆಸಲು ಸ್ಥಳಾವಕಾಶ ಇರಲಿಲ್ಲ. ಜತೆಗೆ ಬೆಳೆಗಾರರು ವಿಶ್ರಾಂತಿ ಪಡೆಯಲು ಕೊಣೆ, ತಂಗಲು ವ್ಯವಸ್ಥೆ ಸೇರಿದಂತೆ ಸಾಕಷ್ಟು ವ್ಯವಸ್ಥೆಗಳು ಇರಲಿಲ್ಲ. ಈ ಎಲ್ಲಾ ಕೊರತೆಗಳನ್ನು ನೀಗಿಸುವ ನಿಟ್ಟಿನಲ್ಲಿ ಹೈಟೆಕ್ ರೇಷ್ಮೆ ಮಾರುಕಟ್ಟೆ ತಲೆ ಎತ್ತುತ್ತಿದೆ.

**200 ಕೋಟಿ ವೆಚ್ಚದಲ್ಲಿ ಹೈಟೆಕ್ ಮಾರುಕಟ್ಟೆ:** ರಾಮನಗರ ಚನ್ನಪಟ್ಟಣ ಅವಳಿ ನಗರದ ನಡುವೆ ವಂದಾರುಗುಪ್ಪೆ ಬಳಿ ಹೈಟೆಕ್ ರೇಷ್ಮೆ ಮಾರುಕಟ್ಟೆ ನಿರ್ಮಾಣವಾಗುತ್ತಿದೆ. ಬರೋಬ್ಬರಿ 200 ಕೋಟಿ ರೂಪಾಯಿ ವೆಚ್ಚದಲ್ಲಿ ನಿರ್ಮಾಣಗೊಳ್ಳುತ್ತಿರುವ ಈ ಹೈಟೆಕ್ ಮಾರುಕಟ್ಟೆ ಎಲ್ಲಾ ರೀತಿಯ ಆಧುನಿಕ ಸೌಲಭ್ಯ ಹೊಂದಿರಲಿದೆ. ಆಗಸ್ಟ್ ಹೊತ್ತಿಗೆ ಮೊದಲ ಹಂತದ ಕಾಮಗಾರಿ


ಉದಯವಾಹಿನಿ ಚಿತ್ರ

**ರೇಷ್ಮೆ ಮಾರುಕಟ್ಟೆ ತಲೆ ಎತ್ತುತ್ತಿದೆ**

ಪೂರ್ಣ ಹೈಟೆಕ್ ರೇಷ್ಮೆ ಮಾರುಕಟ್ಟೆ ಕಾಮಗಾರಿ ಎರಡು ಹಂತಗಳಲ್ಲಿನಡೆಯುತ್ತಿದ್ದು, ಭರದಿಂದ ಸಾಗಿದೆ. ಮೊದಲ ಹಂತದ ಕಾಮಗಾರಿಗಳಿಗೆ 75 ಕೋಟಿ ರೂಪಾಯಿ ಅನುದಾನ ನೀಡಲಾಗಿತ್ತು. ಎರಡನೇ ಹಂತದ ಕಾಮಗಾರಿಗಳು ಬರೋಬ್ಬರಿ 125 ಕೋಟಿ ರೂಪಾಯಿ ವೆಚ್ಚದಲ್ಲಿನಡೆಯುತ್ತಿವೆ. ಮೊದಲ ಹಂತದ ಕಾಮಗಾರಿಗಳು ಬಹುತೇಕ ಮುಕ್ತಾಯಗೊಂಡಿದ್ದು ಮುಂಬರುವ ಆಗಸ್ಟ್ ಅಥವಾ ಸೆಪ್ಟೆಂಬರ್ ತಿಂಗಳಿನಲ್ಲಿಮೊದಲ ಹಂತದ ಕಾಮಗಾರಿಗಳು ಪೂರ್ಣಗೊಂಡು ಮಾರುಕಟ್ಟೆ ಚಾಲನೆ ದೊರೆಯಲಿದೆ ಎನ್ನುವ ಭರವಸೆ ನೀಡುತ್ತಾರೆ ರಾಮನಗರ ರೇಷ್ಮೆ ಮಾರುಕಟ್ಟೆ ಉಪನಿರ್ದೇಶಕ ಮಲ್ಲಿಕಾರ್ಜುನಸ್ವಾಮಿ.

**100 ಮೆಟ್ರಿಕ್ ಟನ್ ಸಾಮರ್ಥ್ಯ:** ವಂದಾರುಗುಪ್ಪೆ ಬಳಿ ನಿರ್ಮಾಣವಾಗುತ್ತಿರುವ ಹೈಟೆಕ್ ರೇಷ್ಮೆ ಮಾರುಕಟ್ಟೆ 100 ಮೆಟ್ರಿಕ್ ಟನ್ ಸಾಮರ್ಥ್ಯವನ್ನು ಹೊಂದಿದೆ. 2ನೇ ಹಂತದಲ್ಲಿಪ್ರಮುಖವಾಗಿ ರೇಷ್ಮೆ ಗೂಡು ಹರಾಜು ಕೇಂದ್ರ, ಆಡಳಿತ ಕಚೇರಿಗಳು, ಬೆಳೆಗಾರರ ತಂಗುದಾಣ, ಕ್ಯಾಂಟೀನ್ ಮತ್ತು ಕನ್ವೇಯರ್‌ಗಳ ನಿರ್ಮಾಣ ಕಾಮಗಾರಿ ನಡೆಯಬೇಕಿದೆ

**ಸಿಲ್ಕ್ ಪಾರ್ಕ್ ನಿಂದ ಏನಾಗುತ್ತೆ?**

- ರೇಷ್ಮೆ ನೂಲು ಉತ್ಪಾದನೆ, ಗುಣಮಟ್ಟದಲ್ಲಿ ಗಣನೀಯ ಸುಧಾರಣೆ
- ಉತ್ಪಾದನಾ ವೆಚ್ಚ ಕಡಿತ, ಆದಾಯ ವೃದ್ಧಿ
- ಸಾವಿರಾರು ನೇರ, ಪರೋಕ್ಷ ಉದ್ಯೋಗಾವಕಾಶ ಸೃಷ್ಟಿ
- ರೇಷ್ಮೆ ವಲಯದಲ್ಲಿ ಮೌಲ್ಯವರ್ಧನೆಗೆ ಮತ್ತಷ್ಟು ಉತ್ತೇಜನ

**ಸಾರಿಗೆ ವೆಚ್ಚ ಹೆಚ್ಚಳದಿಂದ ರೈತರಿಗೆ ಲಾಭ**

**ಸಿದ್ದರಾಮಯ್ಯ ಅವರು ಇತ್ತೀಚೆಗೆ ಘೋಷಿಸಿರುವ ಬಜೆಟ್‌ನಲ್ಲಿ ರೇಷ್ಮೆಗೂಡಿನ ಸಾಗಣೆ ವೆಚ್ಚವನ್ನು 10 ರೂಪಾಯಿಯಿಂದ 20 ರೂಪಾಯಿಗೆ ಹೆಚ್ಚಿಸಿರುವುದಾಗಿ ಘೋಷಿಸಿದ್ದಾರೆ. ಇದರಿಂದ ರೇಷ್ಮೆ ಬೆಳೆಗಾರರಿಗೆ ಬಹಳಷ್ಟು ನೆರವಾಗಲಿದೆ. ಹೆಚ್ಚುತ್ತಿರುವ ಉತ್ಪಾದನಾ ವೆಚ್ಚದ ನಡುವೆಯೂ ರೈತರಿಗೆ ಸ್ವಲ್ಪ ಮಟ್ಟಿನ ಆರ್ಥಿಕ ಭದ್ರತೆ ಒದಗಿಸಲು ಈ ಕ್ರಮ ಸಹಾಯಕವಾಗಲಿದೆ ಎಂದು ಬೆಳೆಗಾರರು ಅಭಿಪ್ರಾಯಪಟ್ಟಿದ್ದಾರೆ. ಒಟ್ಟಿನಲ್ಲಿ ಹೈಟೆಕ್ ರೇಷ್ಮೆ ಮಾರುಕಟ್ಟೆ, ಸಿಲ್ಕ್ ಪಾರ್ಕ್ ನಂತಹ ಸರಕಾರದ ಹೊಸ ನೀತಿಗಳಿಂದ ರಾಮನಗರ ರೇಷ್ಮೆ ಉದ್ಯಮಕ್ಕೆ ಹೊಸ ಚೈತನ್ಯ ಸಿಗುವ ನಿರೀಕ್ಷೆ ವ್ಯಕ್ತವಾಗಿದೆ. ಈ ಯೋಜನೆಗಳು ಸಮರ್ಪಕವಾಗಿ ಜಾರಿಗೆ ಬಂದರೆ ರಾಮನಗರವು ದೇಶ ಮಾತ್ರವಲ್ಲ, ವಿಶ್ವದಲ್ಲಿಯೇ ಪ್ರಮುಖ ರೇಷ್ಮೆ ವಾಣಿಜ್ಯ ಕೇಂದ್ರವಾಗಿ ಬೆಳೆಯುವ ಸಾಧ್ಯತೆ ಇದೆ.**

ಎಂದು ಎಂದು ಅವರು ಮಾಹಿತಿ ನೀಡಿದರು.

**ರಾಮನಗರಕ್ಕೆ ಬರಲಿದೆ ಸಿಲ್ಕ್ ಪಾರ್ಕ್:** ಒಂದು ಕಡೆ ಜಿಲ್ಲೆಯಲ್ಲಿ ಹೈಟೆಕ್ ಮಾದರಿಯ ರೇಷ್ಮೆ ಮಾರುಕಟ್ಟೆ ಕಾಮಗಾರಿ ಭರದಿಂದ ಸಾಗುತ್ತಿದ್ದರೆ, ಇನ್ನೊಂದು ಕಡೆ ಈ ಬಾರಿಯ ಬಜೆಟ್‌ನಲ್ಲಿ ಸಿಲ್ಕ್ ಪಾರ್ಕ್ ಸಹ ಘೋಷಣೆಯಾಗಿರುವುದು ಜಿಲ್ಲೆಯ ರೇಷ್ಮೆ ಉದ್ಯಮಕ್ಕೆ ಹೊಸ ಭರವಸೆ ಮೂಡಿಸಿದೆ.

**ಹೈಟೆಕ್ ಮಾರುಕಟ್ಟೆಯಲ್ಲಿ ಏನೇನಿರುತ್ತೆ?:** ರಾಮನಗರ-ಚನ್ನಪಟ್ಟಣ ನಡುವೆ ವಂದಾರುಗುಪ್ಪೆಯಲ್ಲಿ ನಿರ್ಮಾಣವಾಗುತ್ತಿರುವ ಹೈಟೆಕ್ ರೇಷ್ಮೆ ಮಾರುಕಟ್ಟೆ ದೇಶದಲ್ಲಿಯೇ ಅತಿ ದೊಡ್ಡ ಹಾಗೂ ಆಧುನಿಕ ಮಾರುಕಟ್ಟೆಗಳಲ್ಲಿಒಂದಾಗಲಿದೆ.

**ಏನಿದು ಸಿಲ್ಕ್ ಪಾರ್ಕ್?:** ಸಿಎಂ ಸಿದ್ದರಾಮಯ್ಯ ತಮ್ಮ ದಾಖಲೆಯ 17ನೇ ಬಜೆಟ್‌ನಲ್ಲಿ ಘೋಷಣೆ ಮಾಡಿರುವ ಸಿಲ್ಕ್ ಪಾರ್ಕ್, ರೇಷ್ಮೆ ನೂಲು ಬಿಚ್ಚಾಣಿಕೆ (ರೀಲಿಂಗ್ ಯುನಿಟ್‌ಗಳು), ಟ್ವಿಸ್ಟಿಂಗ್ ಮತ್ತು ಡೈಯಿಂಗ್ ಘಟಕಗಳು, ಗುಣಮಟ್ಟ ಪರೀಕ್ಷೆ, ರೇಷ್ಮೆ ಉತ್ಪನ್ನ ತಯಾರಿಕಾ ಘಟಕಗಳು, ಪ್ಯಾಕಿಂಗ್ ಮತ್ತು ಮಾರುಕಟ್ಟೆ ಸೌಲಭ್ಯ ಎಲ್ಲವನ್ನೂ ಒದಗಿಸುವ ಸಮಗ್ರ ಯೋಜನೆಯಾಗಿದೆ. ಇದರಿಂದ ರೇಷ್ಮೆ ಉದ್ದಿಮೆಗೆ ಉತ್ತೇಜನ ಸಿಗುವುದರ ಜತೆಗೆ ಸಾವಿರಾರು ಉದ್ಯೋಗಾವಕಾಶಗಳು ಸಹ ಸೃಷ್ಟಿಯಾಗುವ ನಿರೀಕ್ಷೆಯಿದೆ.

ಅಂತರಾಳದಿಂದ..
EDITORIAL

# ಟಿ20 ವಿಶ್ವಕಪ್ ಅಪೂರ್ವ ಗೆಲುವು ಸಾಂಘಿಕ ಶಕ್ತಿಗೆ ಒಲಿದ ಯಶಸ್ಸು



ಸಾಬರಮತಿ ನದಿ ದಂಡೆಯಲ್ಲಿರುವ ಅಹಮದಾಬಾದ್ ನಗರದ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಭಾನುವಾರ ರಾತ್ರಿ ನಡೆದ 'ಐಸಿಸಿ ಟಿ20 ವಿಶ್ವಕಪ್' ಪಂದ್ಯದ ಫೈನಲ್‌ನಲ್ಲಿ ನ್ಯೂಜಿಲೆಂಡ್ ವಿರುದ್ಧ ಭಾರತ ಗೆಲುವು ಸಾಧಿಸುವುದರೊಂದಿಗೆ, ಕ್ರಿಕೆಟ್ ಜಗತ್ತಿನಲ್ಲಿ ಹೊಸ ದಾಖಲೆಗಳು ಸೃಷ್ಟಿಯಾಗಿವೆ. ಚುಟುಕು ಕ್ರಿಕೆಟ್‌ನಲ್ಲಿ ಭಾರತದ ಯುವ ಕ್ರಿಕೆಟಿಗರು ಸಾಧಿಸಿರುವ ಪಾರಮ್ಯವನ್ನು ಈ ಗೆಲುವು ಸಂಕೇತಿಸುವಂತಿದೆ. ಸೂರ್ಯಕುಮಾರ್ ಯಾದವ್ ನಾಯಕತ್ವದ ಭಾರತ ತಂಡದ ಅಧಿಕಾರಯುತ ಗೆಲುವಿನೊಂದಿಗೆ, ಸುಮಾರು ಎರಡು ದಶಕಗಳ ಟಿ20 ವಿಶ್ವಕಪ್ ಟೂರ್ನಿಯ ಇತಿಹಾಸದಲ್ಲಿ ಪ್ರಶಸ್ತಿ ಗೆದ್ದ ಮೊದಲ ಆತಿಥೇಯ ತಂಡ, ಮೂರನೇ ಬಾರಿ ಪ್ರಶಸ್ತಿಗಳಿಸಿದ ಏಕೈಕ ದೇಶ ಮತ್ತು ಸತತ ಎರಡು ವರ್ಷ ಚಾಂಪಿಯನ್ ಪಟ್ಟ ಅಲಂಕರಿಸಿದ ಹಿರಿಮೆಯ ದಾಖಲೆಗಳು ಸೃಷ್ಟಿಯಾಗಿವೆ. 2023ರಲ್ಲಿ ಆಸ್ಟ್ರೇಲಿಯಾ ಎದುರಿನ ಏಕದಿನ ವಿಶ್ವಕಪ್ ಫೈನಲ್‌ನಲ್ಲಿ ಸೋತ ಕ್ರೀಡಾಂಗಣದಲ್ಲಿಯೇ ಈ ಸಾಧನೆ ಮೂಡಿಬಂದಿರುವುದು ಗಮನಾರ್ಹ. ಒಂದು ಲಕ್ಷಕ್ಕೂ ಹೆಚ್ಚು ಪ್ರೇಕ್ಷಕರ ಸಮ್ಮುಖದಲ್ಲಿ ಕ್ರೀಡಾಂಗಣವನ್ನು ಸ್ತಬ್ಧಗೊಳಿಸುವುದಾಗಿ ಹೇಳಿದ್ದ ಕಿವೀಸ್ ಬಳಗದ ನಾಯಕ ಮಿಚೆಲ್ ಸ್ಯಾಂಟನರ್ ಮತ್ತು ಅವರ ಬಳಗಕ್ಕೆ ಚೊಚ್ಚಿಲ ಪ್ರಶಸ್ತಿಗೆ ಭಾಜನರಾಗುವುದು ಸಾಧ್ಯವಾಗಿಲ್ಲ. ಭಾರತ ತಂಡದ ಆಡಳಿತ ತನ್ನ ಆಟಗಾರರ ಮೇಲೆ ಇಟ್ಟ ವಿಶ್ವಾಸ, ನೀಡಿದ ಪ್ರೋತ್ಸಾಹ ಯಶಸ್ಸಿನಲ್ಲಿ ಪ್ರಮುಖ ಪಾತ್ರವಹಿಸಿದೆ. ಅಸ್ಥಿರ ಪ್ರದರ್ಶನದಿಂದ ಟೀಕೆಗೊಳಗಾಗಿದ್ದ ಬ್ಯಾಟರ್‌ಗಳಾದ ಅಭಿಷೇಕ್ ಶರ್ಮಾ ಮತ್ತು ಸಂಜು ಸ್ಯಾಮ್ಸನ್ ಹಾಗೂ ಹೆಚ್ಚು ರನ್‌ಗಳನ್ನು ಕೊಟ್ಟು ದುಬಾರಿಯಾಗಿದ್ದ ಸ್ಪಿನ್ನರ್ ವರುಣ್ ಚಕ್ರವರ್ತಿ ಅವರಿಗೆ ಸಾಕಷ್ಟು ಅವಕಾಶಗಳನ್ನು ಕೊಡಲಾಯಿತು. ತಮ್ಮ ಮೇಲಿನ ನಂಬಿಕೆ ಹುಸಿಗೊಳಿಸದ ಸಂಜು ಅವರಂತೂ, ನಿರ್ಣಾಯಕ ಎಂಟರ ಘಟ್ಟದ ಪಂದ್ಯದಿಂದ ಫೈನಲ್‌ವರೆಗೆ ಅತ್ಯುತ್ತಮ ಬ್ಯಾಟಿಂಗ್ ಪ್ರದರ್ಶಿಸಿದರು. ಅಭಿಷೇಕ್ ಫೈನಲ್‌ನಲ್ಲಿ ತಮ್ಮ ಸಾಮರ್ಥ್ಯ ಮೆರೆದರು. ತಂಡದ ಪರ ಹೆಚ್ಚು ವಿಕೆಟ್ ಗಳಿಸಿದ ಹಿರಿಮೆಯನ್ನು ಬೂಮ್ರಾ ಜೊತೆ ವರುಣ್ ಹಂಚಿಕೊಂಡರು.

ಭಾರತ ತಂಡದ ಯಶಸ್ಸು ಒಬ್ಬಿಬ್ಬರು ಆಟಗಾರರ ಮೇಲೆ ಅವಲಂಬಿತಆಗಿರಲಿಲ್ಲ. ಟೂರ್ನಿಯುದ್ದಕ್ಕೂ ಎಲ್ಲಾ ಪಂದ್ಯಗಳಲ್ಲಿಯೂ ಸಂದರ್ಭಕ್ಕನುಗುಣವಾಗಿ ಪ್ರತಿಯೊಬ್ಬರೂ ತಮ್ಮ ಕಾಣಿಕೆ ನೀಡಿದ್ದಾರೆ. ಸೂರ್ಯಕುಮಾರ್, ಶಿವಂ ದುಬೆ, ಹಾರ್ದಿಕ್ ಪಾಂಡ್ಯ, ಇಶಾನ್ ಕಿಶನ್, ಅಕ್ಷರ್ ಪಟೇಲ್ ಅವರ ಆಟ ಕ್ರೀಡಾಪ್ರಿಯರ ನೆನಪಿನಲ್ಲಿ ದೀರ್ಘಕಾಲ ಉಳಿಯುವಂತಹದ್ದು. ವೇಗದ ಬೌಲರ್ ಜಸ್‌ಪ್ರೀತ್ ಬೂಮ್ರಾ ಅವರಂತೂ ನಿರ್ಣಾಯಕ ಹಂತದಲ್ಲಿ ಭಾರತದ ಗೆಲುವಿಗೆ ದಿಕ್ಸೂಚಿಯಾದರು. ಮುಖ್ಯ ಕೋಚ್ ಗೌತಮ್ ಗಂಭೀರ್ ಮಾರ್ಗದರ್ಶನದಲ್ಲಿ ಸೂರ್ಯಕುಮಾರ್ ಅವರು ತಮ್ಮ ತಂಡದ ಪ್ರತಿಭಾನ್ವಿತರನ್ನು ದುಡಿಸಿಕೊಂಡ ರೀತಿ ಗಮನಸೆಳೆಯುವಂತಿತ್ತು. 2024ರಿಂದ ಇಲ್ಲಿಯವರೆಗೆ ಪುರುಷರ ವಿಭಾಗದಲ್ಲಿ ಎರಡು ಟಿ20 ವಿಶ್ವಕಪ್, ಚಾಂಪಿಯನ್ಸ್ ಟ್ರೋಫಿ, 19 ವರ್ಷದೊಳಗಿನವರ ವಿಶ್ವಕಪ್ ಹಾಗೂ ಮಹಿಳೆಯರ ವಿಭಾಗದಲ್ಲಿ ಏಕದಿನ ಚಾಂಪಿಯನ್‌ಷಿಪ್ ಮತ್ತು 19 ವರ್ಷದೊಳಗಿನವರ ವಿಶ್ವಕಪ್ ಕಿರೀಟಗಳನ್ನು ಭಾರತ ಜಯಿಸಿದೆ. ಈ ಮೂಲಕ ಜಾಗತಿಕ ಕ್ರಿಕೆಟ್‌ನ ಶಕ್ತಿಕೇಂದ್ರವಾಗಿ ಹೊರಹೊಮ್ಮಿದೆ.

ಟೂರ್ನಿಯ ಆರಂಭದಿಂದಲೂ ಭಾರತ ಪ್ರಶಸ್ತಿಗಳಿಸುವ ನೆಚ್ಚಿನ ತಂಡವಾಗಿತ್ತು. ಆದರೆ, ದಕ್ಷಿಣ ಆಫ್ರಿಕಾ, ವೆಸ್ಟ್ ಇಂಡೀಸ್, ನ್ಯೂಜಿಲೆಂಡ್ ತಂಡಗಳ ಪ್ರದರ್ಶನವೂ ಗಮನಾರ್ಹವಾಗಿತ್ತು. ವೆಸ್ಟ್ ಇಂಡೀಸ್ ತಂಡವಂತೂ ತನ್ನ ಗತವೈಭವವನ್ನು ನೆನಪಿಸುವಂತೆ ಪ್ರದರ್ಶನ ನೀಡಿದೆ. ಜಿಂಬಾಬ್ವೆ ತಂಡ ನೀಡಿದ ಪೈಪೋಟಿಯೂ ಗಮನಾರ್ಹ. ಅಫ್ಘಾನಿಸ್ತಾನವೂ ಎದುರಾಳಿಗಳಿಗೆ ಉತ್ತಮ ಪೈಪೋಟಿಯೊಡ್ಡಿತು. ಆಸ್ಟ್ರೇಲಿಯಾದಂತಹ ಬಲಾಢ್ಯ ತಂಡ ಗುಂಪು ಹಂತದಲ್ಲಿಯೇ ನಿರ್ಗಮಿಸಿದ್ದು ಅಚ್ಚರಿ ಮೂಡಿಸಿತು. ಉದಯೋನ್ಮುಖ ತಂಡಗಳಾದ ನೇಪಾಳ, ಇಟಲಿ, ನಮೀಬಿಯಾ, ಅಮೆರಿಕ, ನೆದರ್ಲೆಂಡ್ಸ್ ತಂಡಗಳು ತಮ್ಮ ಹೆಜ್ಜೆಗುರುತು ಮೂಡಿಸಿರುವುದು ಜಾಗತಿಕವಾಗಿ ಕ್ರಿಕೆಟ್ ಬೆಳವಣಿಗೆಗೆ ಆಶಾದಾಯಕ ಬೆಳವಣಿಗೆಯಾಗಿದೆ. ಆದರೆ, ಈ ಟೂರ್ನಿಯೂ ರಾಜಕೀಯ ಹಸ್ತಕ್ಷೇಪದಿಂದ ಮುಕ್ತವಾಗಿರಲಿಲ್ಲ. ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಟೂರ್ನಿಯಿಂದ ಬಾಂಗ್ಲಾದ ಆಟಗಾರ ಮುಸ್ತಫಿಜುರ್ ರೆಹಮಾನ್ ಅವರನ್ನು ಹೊರಹಾಕಿದ್ದನ್ನು ವಿರೋಧಿಸಿ ಆ ದೇಶವು ವಿಶ್ವಕಪ್ ಟೂರ್ನಿಯನ್ನು ಬಹಿಷ್ಕರಿಸಿತು. ಬಾಂಗ್ಲಾ ಬೆಂಬಲಕ್ಕೆ ನಿಂತ ಪಾಕಿಸ್ತಾನವು ಭಾರತದ ಎದುರಿನ ಪಂದ್ಯ ಆಡುವುದಿಲ್ಲವೆಂದು ಘೋಷಿಸಿತು. ನಂತರ ನಿಲುವು ಬದಲಿಸಿ ಆಡಿದರೂ, ಗಮನಾರ್ಹ ಸಾಧನೆಯನ್ನು ಮಾಡುವುದು ಪಾಕ್ ತಂಡಕ್ಕೆ ಸಾಧ್ಯವಾಗಲಿಲ್ಲ. ಈ ಬಾರಿಯೂ ಭಾರತ–ಪಾಕಿಸ್ತಾನ ತಂಡಗಳ ಆಟಗಾರರು ಹಸ್ತಲಾಘವ ಮಾಡದಿರುವ ಮೂಲಕ ಕ್ರೀಡಾಸ್ಫೂರ್ತಿಗೆ ವಿರುದ್ಧವಾಗಿ ಮತ್ತೊಮ್ಮೆ ನಡೆದುಕೊಂಡರು. ಕಳೆದ ವರ್ಷ ಟೆಸ್ಟ್ ಕ್ರಿಕೆಟ್‌ನಲ್ಲಿ ಭಾರತ ಅನುಭವಿಸಿದ್ದ ವೈಫಲ್ಯದಿಂದಾಗಿ ಅಪಾರ ಟೀಕೆಗೆ ಒಳಗಾಗಿದ್ದ ಕೋಚ್ ಗೌತಮ್ ಗಂಭೀರ್ ಅವರಿಗೆ ಪ್ರಸಕ್ತ ಗೆಲುವು ಹುಮ್ಮಸ್ಸು ತುಂಬುವಂತಿದೆ. ವಿಶ್ವಕಪ್ ಜಯವನ್ನು ಅವರು ನಿಕಟಪೂರ್ವ ಕೋಚ್ ರಾಹುಲ್ ದ್ರಾವಿಡ್ ಮತ್ತು ಬೆಂಗಳೂರಿನ ಬಿಸಿಸಿಐ ಶ್ರೇಷ್ಠತಾ ಕೇಂದ್ರದ ಮುಖ್ಯಸ್ಥ ವಿವಿಎಸ್ ಲಕ್ಷ್ಮಣ್ ಅವರಿಗೆ ಅರ್ಪಿಸಿರುವುದು ಅರ್ಥಪೂರ್ಣವಾಗಿದೆ.

# ರಾಮಾಯಣ



## ಸುಗ್ರೀವನು ಕಪಿಗಳನ್ನು ಪಡುವಣ ದಿಕ್ಕಿಗೆ ಕಳುಹಿಸಿದ್ದು

• ಹಿಂದಿನ ಸಂಚಿಕೆಯಿಂದ 121ನೆಯ ಅಧ್ಯಾಯ

ಆ ಸಮುದ್ರತೀರದಲ್ಲಿರುವ ಜಟೀಪರಿ ಅವಂತೀ ಪಟ್ಟಣಗಳಲ್ಲಿಯೂ ಆ ದೇಶಗಳಲ್ಲಿರುವ ವಿಶಾಲವಾದ ಪಟ್ಟಣಗಳಲ್ಲಿಯೂ ವನಾಂತರಗಳಲ್ಲಿಯೂ ಸಿಂಧೂನದಿ ಸಮುದ್ರ ಸಂಗಮದಲ್ಲಿಯೂ ಸೋಮಗಿರಿಯೆಂಬ ಪರ್ವತದಲ್ಲಿಯೂ ಆ ಪರ್ವತದ ತಪ್ಪಲುಗಳಲ್ಲಿಯೂ ಪಾರಿಯನೆಂಬ ಪರ್ವತದಲ್ಲಿಯೂ ನೋಡಿ, ಆ ಪರ್ವತದಲ್ಲಿ ಇಪ್ಪತ್ತುನಾಲ್ಕು ಕೋಟಿ ಗಂಧರ್ವರಿರುವರು ಅವರು ಕಾಮರೂಪಿಗಳಾಗಿ ಮಹಾಭಯಂಕರಾಕಾರರಾಗಿ ಯಜ್ಞ ಪುರುಷನಿಗೆ ಸಮಾನವಾದ ತನುಕಾಂತಿಯುಳ್ಳವರಾಗಿರುವರು. ಅವರ ಸಮೀಪಕ್ಕೆ ಹೋಗಬೇಡಿ. ಅವರು ಸತ್ತ್ವಗುಣವುಳ್ಳವರು; ಮಹಾಬಲವಂತರು : ಯಾರಿಗೂ ಸಾಧ್ಯವಾಗದವರಾಗಿ ಆ ಸ್ಥಳಗಳಲ್ಲಿ ಕಂದಮೂಲ ಫಲಗಳನ್ನು ರಕ್ಷಿಸಿಕೊಂಡಿರುವರು. ಅವರ ಎಲ್ಲೆಯೊಳಗೆ ಕಂದಮೂಲ ಫಲಗಳನ್ನು ಮುಟ್ಟದೆ ಉಪಾಯದಿಂದ ಸೀತಾದೇವಿಯನ್ನರಸಿ ಕಾಣಬೇಕು. ಅಲ್ಲಿ ನಾನಾಪ್ರಕಾರವಾದ ವೃಕ್ಷಗಳಿಂದ ಇಟ್ಟಣಿಸಿದ ವಜ್ರಗಿರಿಯೆಂಬ ಪರ್ವತವಿದೆ. ಆ ಪರ್ವತವು ನೂರುಗಾವುದ ಉನ್ನತವೂ ನೂರುಗಾವುದ ಹರಡೂ ಉಳ್ಳದ್ದಾಗಿರುವುದು. ಅದರಲ್ಲಿ ಅನೇಕ ಗುಹೆಗಳಿರುವುವು. ಆ ಗುಹೆಗಳಲ್ಲಿ ಸೀತಾದೇವಿಯನ್ನು ಸಮುದ್ರದ ಅಗ್ರಭಾಗದಲ್ಲಿ ಚಕ್ರವಾಕವೆಂಬ ಪರ್ವತವಿರುವುದು. ಆ ಪರ್ವತದಲ್ಲಿ ವಿಶ್ವಕರ್ಮನು ಸಾವಿರ ಅಲಗುಗಳುಳ್ಳ ಸುದರ್ಶನವೆಂಬ ಚಕ್ರವನ್ನು ನಿರ್ಮಿಸಿದನು. ಪುರುಷೋತ್ತಮನಾದ ನಾರಾಯಣನು ಆ ಗಿರಿಯಲ್ಲಿ ಪಂಚಜನನೆಂಬ ದಾನವನನ್ನೂ ಹಯಗ್ರೀವನೆಂಬ ದಾನವನನ್ನೂ ಕೊಂದು ಪಾಂಚಜನ್ಯವೆಂಬ ಶಂಖವನ್ನೂ ಸುದರ್ಶನವೆಂಬ ಚಕ್ರವನ್ನೂ ತಂದನು. ಚಕ್ರವಾಕಗಿರಿಯ ತಪ್ಪಲುಗಳಲ್ಲಿ ವಿಶಾಲವಾದ ಗುಹೆಗಳಿವೆ. ಅವುಗಳಲ್ಲಿ ರಾವಣನನ್ನೂ ಸೀತಾದೇವಿಯನ್ನೂ ಹುಡುಕಿ ಇನ್ನೂ ಪಡುವಲಾಗಿ ನಡೆದರೆ ಅರುವತ್ತು ಸಾವಿರ ಸುವರ್ಣಮಯವಾದ ಪರ್ವತಗಳು ಬಾಲಸೂರ್ಯನಂತೆ ಅತಿಪ್ರಕಾಶಮಾನವಾಗಿ ಒಪ್ಪುತ್ತಿರುವುವು.

ಮನೋಹರ ಅಲ್ಲಿ ಸುವರ್ಣಮಯವಾದ ವೃಕ್ಷಗಳು ಸದಾಕಾಲದಲ್ಲೂ ಪುಷ್ಪಫಲಗಳಿಂದ ವಾಗಿರುವುವು ಆ ಅರುವತ್ತು ಸಾವಿರ ಪರ್ವತಗಳ ಮಧ್ಯದಲ್ಲಿ ಪರ್ವತರಾಜನಾದ ಮಹಾಮೇರು ಪರ್ವತವಿರುವುದು. ಆ ವರ್ವತಕ್ಕೆ ಪೂರ್ವದಲ್ಲಿ ಆದಿತ್ಯನು ಎಲ್ಲೆ ಪರ್ವತರಾಜನೆ, ನಿನ್ನಲ್ಲಿ ಆಶ್ರಯಮಾಡಿಕೊಂಡಿರುವ ಭಕ್ತಾದಿಗಳೆಲ್ಲವೂ ಸುವರ್ಣದಂತೆ ತನುಕಾಂತಿಯುಳ್ಳವಾಗಲಿ! ನಿನ್ನ ಸಮೀಪಕ್ಕೆ ಬಂದು ನಿನ್ನಲ್ಲಿ ವಾಸಮಾಡುವವರೂ ಸುವರ್ಣದಂತೆ ದಿವ್ಯಕಾಂತಿಯುಳ್ಳವರಾಗಲಿ ಎಂದು ವರವನ್ನು ಕೊಟ್ಟನು ಮಹಾಮೇರುಪರ್ವತಕ್ಕೆ ವಿಶ್ವದೇವತೆಗಳು ಅಷ್ಟವಸ್ತುಗಳು ಮೊದಲಾದವರು ಬಂದು ಸಾಯಂಕಾಲ ಸಂಧ್ಯಾವಂದನೆಗಳನ್ನು ಮಾಡಿಸೂ ವಾಸನವನ್ನು ಮಾಡುವರು. ಆಮೇಲೆ ಸೂರ್ಯನು ಆ ದೇವತೆಗಳು ಮಾಡಿದ ಪೂಜೆಯನ್ನು ಕೈಕೊಂಡು ಆ ಪರ್ವತದ ಪಡುವಣ ದಿಕ್ಕಿನಲ್ಲಿ ಮರೆಯಾಗಿ ಅಸ್ತಂಗತನಾಗುವನು ಸೂರನು ಹತ್ತು ಸಾವರ ಗಾವುದಗಳ ದಾರಿಯನ್ನು ಅರ್ಧ ಮುಹೂರ್ತದಲ್ಲಿ ದಾಟುವನು ಮಹಾಮೇರು ಪರ್ವತವ ಪಡುವಣ ದಿಕ್ಕಿನ ಕೋಡುಗಲ್ಲಿನ ಮೇಲೆ ವಿಶ್ವಕರ್ಮನಿಂದ ನಿರ್ಮಿಸಲ್ಪಟ್ಟ ರತ್ನ ಖಚಿತವೂ ಸುವರ್ಣಮಯವೂ ಆದ ದಿವ್ಯಗೃಹ ಒಂದುಂಟು ಅದು ಮಹಾತ್ಮನಾದ ವರುಣನ ಅರಮನೆ ಆ ಅರಮನೆಯು ನಾನಾ ಪ್ರಕಾರವಾದ ಉಪ್ಪರಿಗೆಗಳಿಂದಲೂ ಚಿತ್ರಗಳಿಂದಲೂ ರಮಣೀಯವಾಗಿರುವುದು. ಅದರಲ್ಲಿಯೂ ಅಲ್ಲಲ್ಲಿರುವ ದುರ್ಘಟವಾದ ಸ್ಥಳಗಳಲ್ಲಿಯೂ ಸೀತಾದೇವಿಯನ್ನರಸಿ ಕಾಣಿರಿ. ಮಹಾ ಮೇರುಪರ್ವತದಲ್ಲಿ ಬ್ರಹ್ಮದೇವನಿಗೆ ಸಮಾನನಾಗಿ ಧರ್ಮರಹಸ್ಯವನ್ನು ಬಲ್ಲ ತಪಸ್ವಿಯಾದ ಮೇರುಸಾವರ್ಣಿಯೆಂಬ ಋಷೀಶ್ವರನಿರುವನು.

ಮುಂದುವರಿಯುವುದು...

# ಅಣುಯುದ್ಧದಿಂದಾಗಿ ಉಂಟಾಗುವ ಮಾಲಿನ್ಯದಿಂದ ರಕ್ಷಣೆಗೆ ಉಪಾಯ : ಅಗ್ನಿಹೋತ್ರ

• ಶ್ರೀ. ವಿನೋದ್ ಕಾಮತ್



ತ್ರಿಕಾಲಜ್ಞಾನಿ ಸಂತರು ಹೇಳಿರುವಂತೆ, ಈಗ ಮುಂದೆ ಭೀಷಣ ಆಪತ್ಕಾಲವಿದೆ,ಅದರಲ್ಲಿ ಜಗತ್ತಿನಾದ್ಯಂತ ಅಪಾರ ಜನಸಂಖ್ಯೆಯು ನಾಶವಾಗಲಿದೆ. ಆಪತ್ಕಾಲವು ಆರಂಭವಾಗಿದೆ. ಅನಿಷ್ಟ ಶಕ್ತಿಗಳ ಪ್ರಕೋಪವು ಹೆಚ್ಚಾಗಿರುವ ಕಲಿಯುಗದಲ್ಲಿ 3ನೇ ಮಹಾಯುದ್ಧವು ಆರಂಭವಾಗಲಿದೆ. ಅಗ್ನಿಹೋತ್ರವು ಭಯೋತ್ಪಾದಕ ವ್ಯವಸ್ಥೆಯಿಂದ ಸಂಪೂರ್ಣ ದೇಶ, ಸಮಾಜ, ಅದರೊಂದಿಗೆ ಸ್ವಂತದ ರಕ್ಷಣೆಗಾಗಿ, ಅಗ್ನಿಯ ಸಹಾಯದಿಂದ ಬ್ರಹ್ಮಾಂಡಮಂಡಲದಲ್ಲಿನ ಆಯಾ ದೇವತೆಗಳ ಲಹರಿಗಳನ್ನು ಭೂಮಂಡಲದ ಕಡೆಗೆ ಆಕರ್ಷಿಸುವ ಹಾಗೂ ಸ್ತ್ರೀ, ಪುರುಷರು, ಮಕ್ಕಳು ಹೀಗೆ ಎಲ್ಲರೂ ಮಾಡಬಹುದಾದ ಸುಲಭ ಸಾಧನ.

**ಮೂರನೇ ಮಹಾಯುದ್ಧದ ಭೀಕರತೆ ಮತ್ತು ಅದರ ಮೇಲಿನ ಉಪಾಯ:** ಮೂರನೇ ಮಹಾಯುದ್ಧದಲ್ಲಿ ಅಣುಬಾಂಬನ ವಿಕಿರಣಗಳಿಂದ ಮಾಲಿನ್ಯ ಉಂಟಾಗಲಿದೆ. ಎರಡನೇ ಮಹಾಯುದ್ಧಕ್ಕಿಂತಲೂ ಈಗ ಜಗತ್ತಿನಲ್ಲಿರುವ ಹೆಚ್ಚಿನ ಎಲ್ಲಾ ದೇಶಗಳ ಬಳಿ ಮಹಾಸಂಹಾರಕ ಅಣ್ವಸ್ತ್ರಗಳಿವೆ. ಇದರಿಂದಾಗಿ ಅವರಲ್ಲಿ ಪರಸ್ಪರರ ವಿರುದ್ಧ ಕಾವೇರುವುದು. ಈ ಯುದ್ಧಗಳಲ್ಲಿ ಜೀವಂತವಾಗಿ ಉಳಿಯಬೇಕಾದರೆ ಅಣ್ವಸ್ತ್ರಗಳನ್ನು ವಿಫಲಗೊಳಿಸುವ, ಹಾಗೆಯೇ ಆ ಅಣ್ವಸ್ತ್ರಗಳಿಂದ ಹೊರಡುವ ವಿಕಿರಣಗಳನ್ನು ನಾಶಗೊಳಿಸುವ ಉಪಾಯವೂ ಬೇಕು. ಇದಕ್ಕಾಗಿ ಸ್ಥೂಲದಲ್ಲಿನ ಉಪಾಯಗಳು ವಿಫಲವಾಗುತ್ತವೆ; ಏಕೆಂದರೆ ಅಣುಬಾಂಬ್ ಸಾದಾ ಬಾಂಬ್‌ಗಿಂತಲೂ ಸೂಕ್ಷ್ಮವಾಗಿದೆ. ಸ್ಥೂಲ, ಸ್ಥೂಲ ಅಧಿಕ ಸೂಕ್ಷ್ಮ, ಸೂಕ್ಷ್ಮತರ ಮತ್ತು ಸೂಕ್ಷ್ಮತಮ ಹೀಗೆ ಹೆಚ್ಚು ಹೆಚ್ಚು ಪ್ರಭಾವಶಾಲಿ ಹಂತಗಳಿರುತ್ತವೆ. ಸ್ಥೂಲಕ್ಕಿಂತಲೂ ಸೂಕ್ಷ್ಮವು ಎಷ್ಟೋ ಪಟ್ಟು ಪ್ರಭಾವಿಯಾಗಿರುತ್ತದೆ. ಅಣುಬಾಂಬ್‌ನಂತಹ ಪ್ರಭಾವಿ ಸಂಹಾರಕದ ವಿಕಿರಣವನ್ನು ತಡೆಯಲು ಸೂಕ್ಷ್ಮದಲ್ಲಿ ಏನಾದರೂ ಮಾಡಬೇಕಾಗುತ್ತದೆ. ಇದಕ್ಕಾಗಿ ಋಷಿಮುನಿಗಳು ಯಜ್ಞಗಳ ಪ್ರಥಮ ಅವತಾರವಾದ 'ಅಗ್ನಿಹೋತ್ರ'ದ ಉಪಾಯವನ್ನು ಹೇಳಿದ್ದಾರೆ. ಇದು ಮಾಡಲು ಅತ್ಯಂತ ಸುಲಭವಾಗಿದೆ ಮತ್ತು ಅತ್ಯಂತ ಕಡಿಮೆ ಸಮಯ ತೆಗೆದುಕೊಳ್ಳುತ್ತದೆ, ಹಾಗೆಯೇ ಪ್ರಭಾವಿಯಾಗಿರುವ ಸೂಕ್ಷ್ಮದ ಪರಿಣಾಮವನ್ನು ಸಾಧಿಸುವ ಉಪಾಯವಾಗಿದೆ. ಇದರಿಂದ ವಾತಾವರಣವು ಚೈತನ್ಯದಾಯಕವಾಗುತ್ತದೆ ಹಾಗೂ ಸಂರಕ್ಷಣಾಕವಚವೂ ನಿರ್ಮಾಣವಾಗುತ್ತದೆ.

ಅಗ್ನಿಹೋತ್ರ ಯಜ್ಞವು ಬಂಧನಮುಕ್ತವಾಗಿರುವುದರಿಂದ ಇದನ್ನು ಸ್ತ್ರೀ, ಪುರುಷರು, ಮಕ್ಕಳು ಹೀಗೆ ಯಾರು ಬೇಕಾದರೂ ಸಹಜವಾಗಿಮಾಡಬಹುದು ಅಗ್ನಿಹೋತ್ರವು ಆಕಾಶ ಮಂಡಲದಲ್ಲಿನ ಸೂಕ್ಷ್ಮದೇವತೆಗಳ ತತ್ತ್ವಗಳನ್ನು ಜಾಗೃತಗೊಳಿಸಿ ಅವರ ಲಹರಿಗಳನ್ನು ಭೂಮಿಮಂಡಲದ ಮೇಲೆ ಸೆಳೆಯುವ ಒಂದು ಪ್ರಭಾವಿ ಮಾಧ್ಯಮವಾಗಿದೆ. ಅಗ್ನಿಹೋತ್ರದಿಂದ ವಾಯುಮಂಡಲದಲ್ಲಿ ಸಿದ್ಧವಾಗುವ ದಿವ್ಯ ತೇಜೋಮಂಡಲವು ಪಾರದರ್ಶಕ ಗಾಜಿನ ತೇಜೋಗೋಲದಂತಿರುತ್ತದೆ. ಅಣುಬಾಂಬನಲ್ಲಿರುವ ಅಪಾರ ಸೂಕ್ಷ್ಮ ಸಂಹಾರಕ ಕಿರಣಗಳಿಗೂ ಈ ವಾಯುಮಂಡಲವನ್ನು ಭೇದಿಸಲು ಸಾಧ್ಯವಾಗುವುದಿಲ್ಲ. ಇದರಿಂದಾಗಿ ಸಂಹಾರಕ ಘಟಕಗಳಿಂದಲೂ ಜೀವ ಮತ್ತು ಆಯಾ ಸೂಕ್ಷ್ಮವಾಯುಮಂಡಲದ ರಕ್ಷಣೆಯಾಗಬಲ್ಲುದು.ಸಾಮಾನ್ಯರು ಇಷ್ಟು ಮಾಡಿದರೂ ಸಾಕು. ಇದರಿಂದಲೂ ಪ್ರಭಾವಿ, ಅಂದರೆ ಸೂಕ್ಷ್ಮ ಉಪಾಯವೆಂದರೆ ಸಾಧನೆ ಮಾಡುವುದು. ಸಾಧನೆಯಿಂದ ಆತ್ಮಬಲ ಸಿಗುತ್ತದೆ, ನಮ್ಮ ಕಾರ್ಯಕ್ಕೆ ಬಲ ದೊರೆಯುತ್ತದೆ. ಸಾಮಾನ್ಯ ವ್ಯಕ್ತಿಗೆ ಅಗ್ನಿಹೋತ್ರದಿಂದ ದೊರೆಯುವ ಲಾಭವು ಸಾಧನೆಯನ್ನು ಮಾಡುವ, ಶೇ. 60ರಷ್ಟು ಆಧ್ಯಾತ್ಮಿಕ ಮಟ್ಟ ಹೊಂದಿರುವ ಸಾಧಕನಿಗೆ ಕೇವಲ ಪ್ರಾರ್ಥನೆಯಿಂದಲೇ ದೊರೆಯುತ್ತದೆ.

**ಅಣುಯುದ್ಧದಿಂದಾಗಿ ಉಂಟಾಗುವ ಮಾಲಿನ್ಯದಿಂದ ರಕ್ಷಣೆಯಾಗಲು ಮಾಡಬೇಕಾದ ಉಪಾಯ:** ಈ ಸಂಹಾರಕಾಲದಲ್ಲಿ ಹೆಚ್ಚಿನವರ ಬಳಿ ದೇವತೆಗಳ ತೇಜರೂಪಿ ಶಕ್ತಿಯಿಲ್ಲ; ಆದುದರಿಂದ ದುರ್ಜನರು ಅತ್ಯುಚ್ಚ ಮಟ್ಟದ ಅಪಾರ ಪ್ರಮಾಣದಲ್ಲಿ ವಿಧ್ವಂಸ ಮಾಡುವ ತೇಜರೂಪಿ ಶಕ್ತಿಯನ್ನು ಉತ್ಪಾದಿಸುವ ಸ್ಫೋಟಕಗಳನ್ನು ಸಿದ್ಧಪಡಿಸಿ ಅವುಗಳ ಬಳಕೆಯ ಆಯೋಜನೆ ಮಾಡುತ್ತಾರೆ. ಇದರಿಂದ ಪ್ರಕ್ಷೇಪಿತವಾಗುವ ತೇಜರೂಪಿ ರಜತಮಾತ್ಮಕ ಶಕ್ತಿಯು ವಾಯುಮಂಡಲದಲ್ಲಿ ಅಳಿದುಳಿದ ಸಾತ್ತ್ವಿಕತೆಯನ್ನೂ ನುಂಗಿಹಾಕುತ್ತದೆ. ಆದುದರಿಂದಲೇ ಬಾಂಬಸ್ಫೋಟವನ್ನು ಭಸ್ಮಾಸುರ ಎಂದು ಕರೆಯಲಾಗುತ್ತದೆ. ಅಣುಯುದ್ಧದಿಂದ ಉಂಟಾಗುವ ಮಾಲಿನ್ಯವು ವಾಯುಮಂಡಲದಲ್ಲಿ ಭಯಂಕರ ಪ್ರಮಾಣದಲ್ಲಿ ರಜತಮಾತ್ಮಕ ಚಂಡಮಾರುತವನ್ನು ನಿರ್ಮಾಣ ಮಾಡುತ್ತದೆ, ಆದುದರಿಂದ ಆ ಸಂದರ್ಭದಲ್ಲಿ ಮಾನವನು ಈಗಿನಿಂದಲೇ ಹೆಜ್ಜೆ ಇಡಬೇಕು. ಇಲ್ಲದಿದ್ದರೆ ಈ ಮಾಲಿನ್ಯವು ಅನೇಕ ಮಾನವೀ ಜೀವಗಳ ಸಂಹಾರದ ಕಾರಣವಾಗುತ್ತದೆ. ಶ್ರೀರಾಮನು 14 ಸಾವಿರ ವರ್ಷಗಳ ವರೆಗೆ ಮಾಡಿರುವ ರಾಜ್ಯ, ಯುಧಿಷ್ಠಿರನು ಮಾಡಿದ 2 ರಾಜಸೂಯ ಯಜ್ಞಗಳಿಂದ ವಿಕಿರಣಗಳ ಪರಿಣಾಮವು ನಾಶವಾಯಿತು. ಈಗ ಕಲಿಯುಗದಲ್ಲಿ ನಾವು ಏನು ಮಾಡಬಹುದು ? ಮೇಲೆ ಉಲ್ಲೇಖಿಸಲಾದ ಸಾಲು ಮುಂಬರುವ ಮಹಾಸಂಹಾರಕ ಕಾಲದ ನಾಂದಿಯನ್ನು ದರ್ಶಿಸುತ್ತಿದ್ದರೂ ಅದರಿಂದ ಕಲ್ಯಾಣದ ಸ್ತರದಲ್ಲಿ ಉಪಾಯವನ್ನೂ ಹೇಳಲಾಗಿದೆ. ಆದುದರಿಂದ ಮಾನವನು ಅದಕ್ಕಾಗಿ ಪ್ರಯತ್ನಿಸುವುದು ಅತ್ಯಂತ ಆವಶ್ಯಕವಾಗಿದೆ. ಈ ಪ್ರಯತ್ನವು ತೇಜ–ನಿರ್ಮಿತಿಯದ್ದಾಗಿದ್ದರೆ ಮಾತ್ರ ರಜತಮಾತ್ಮಕವಾದ ಬಾಂಬ್ ಸ್ಫೋಟದಿಂದ ಹರಡುವ ಭಯಂಕರ ವಿನಾಶಕಾರಿ ತೇಜವನ್ನು ಎದುರಿಸಿ ಮಾನವನ ದೇಹದಲ್ಲಿನ ಚೇತನದ ರಕ್ಷಣೆಯಾಗಬಲ್ಲುದು ಅಗ್ನಿಹೋತ್ರ ಸಾಧನೆ ಮಾಡುವುದೇ ಇದಕ್ಕೆ ಇರುವ ಉಪಾಯವಾಗಿದೆ.

# ಪತಿ ಪತ್ನಿಯರ ಬಾಂಧವ್ಯ

**ಮದುವೆ ಎಂಬುದು ಪೂರ್ವಜನ್ಮದಲ್ಲಿ ನಿರ್ಣಯವಾದ ಒಂದು ಪವಿತ್ರ ಸಂಬಂಧ ಗಂಡು ಹೆಣ್ಣನ್ನು ಬೆಸೆಯುವ ಸಂಪ್ರದಾಯ ಸಂಬಂಧವೇ ಇದು. ಸಂಬಂಧಕ್ಕೆ ಬೆಲೆ ನೀಡುತ್ತ ಮಕ್ಕಳನ್ನು ಸಾಕಿರಿ ಜೀವನದಲ್ಲಿ ಒಳ್ಳೆಯ ಸಂಸ್ಕಾರವನ್ನು ಕಲಿಸಿರಿ ಪ್ರೀತಿ ವಿಶ್ವಾಸಕ್ಕೆ ಬೆಲೆ ಇಲ್ಲದ ಸಂಸಾರ ಬೇಕೆ? ನಂಬಿಕೆಯ ನೆಲೆಯಲಿ ಮದುವೆಯಾಗಬೇಕು' ಜಗತ್ತಿನಲ್ಲಿ ಮದುವೆಗೆ ವಿಶೇಷ ಸ್ಥಾನವಿದೆ. ಲಿವಿಂಗ್ ಟು ಗೆದರ್ ಎಂಬ ಕೆಟ್ಟ ಸಂಸ್ಕೃತಿಯನ್ನು ಬಿಟ್ಟುಬಿಡಿ ಸಂಸ್ಕೃತಿಗೆ ವಿರುದ್ಧವಾಗಿ ನಡೆಯದಿರಿ. ಎಲ್ಲರಿಗೂ ಸ್ಪೂರ್ತಿದಾಯಕ ರಾಗಿ ಬಾಳಿರಿ**





ಸಾಮಾಜಿಕ ಕಳಕಳಿ
ಹೆಚ್.ಎಸ್. ಪ್ರತಿಮಾ ಹಾಸನ್
ಲೇಖಕರು
ಸಾಮಾಜಿಕ ಚಿಂತಕಿ ಹಾಗೂ ಶಿಕ್ಷಕಿ, ಹಾಸನ

ಇದು ಸ್ಪರ್ಧಾತ್ಮಕ ಜಗತ್ತು. ಹಾಗೆಂದು ನಮ್ಮ ಸಂಸ್ಕೃತಿಯನ್ನು ಮರೆಯಲು ಸಾಧ್ಯವಿಲ್ಲ. ನಮ್ಮ ಸಂಸ್ಕೃತಿಯಲ್ಲಿ ಗಂಡ ಹೆಂಡತಿ ಎಂದರೆ ವಿಶೇಷವಾದ ಸ್ಥಾನವಿದೆ. ಈ ಸಂಬಂಧ ಮುಂದುವರೆಯುತ್ತ ಎಲ್ಲಾ ಸಂಬಂಧಗಳ ಹೆಸರು ನೀಡುತ್ತ ಸಂಬಂಧ ಗಟ್ಟಿಯಾಗುತ್ತದೆ. ಮದುವೆ ಎಂಬ ಪವಿತ್ರ ಬಂಧನದಲ್ಲಿ ಸಿಲುಕಿದಾಗ ಮಾತ್ರ. ಸಂಬಂಧಗಳ ಜನನವಾಗುತ್ತದೆ. ಇತಿಹಾಸದಿಂದಲೂ ನಡೆದು ಬಂದ ಒಂದು ಪ್ರತೀತಿಯಾಗಿದೆ.

ದಯಮಾಡಿ ಈ ಸಂಬಂಧಕ್ಕೆ ಮಸಿ ಬೆಳೆಯುವಂತಹ ಕೆಲಸಗಳನ್ನು ಬಿಟ್ಟುಬಿಡಿ. ಆದಷ್ಟು ನಾವು ಸಂಸ್ಕೃತಿಗೆ ಬೆಲೆ ನೀಡೋಣ. ಧರ್ಮಕ್ಕೆ ಬೆಲೆ ನೀಡೋಣ. ಸಂಸ್ಕೃತಿ ಧರ್ಮವನ್ನು ಉಳಿಸೋಣ, ಕಲಿಸೋಣ. ಮುಂದಿನ ಪೀಳಿಗೆಗೆ ಮಾರ್ಗದರ್ಶಿಯಾಗೋಣ ಎಂದು ಹೇಳುತ್ತಾ ಸಂಸ್ಕೃತಿಗೆ ನೆಲೆಯಾಗಿರುವ ಭಾರತೀಯರು ನಾವು ನಮ್ಮನ್ನು ನೋಡಿ ಇತರ ದೇಶದವರು ಬದಲಾಗಬೇಕೆ ಹೊರತು. ನಾವು ಅವರಂತೆ ಬದಲಾವಣೆ ಆಗುವುದು ಬೇಡ. ಏಕೆಂದರೆ ನಮ್ಮ ನಾಡು–ನುಡಿ, ಜಲ, ಪರಿಸರದಿಂದ ಹಿಡಿದು ಎಲ್ಲವೂ ಸಾಂಸ್ಕೃತಿಕವಾಗಿದೆ. ನಮ್ಮ ದೇಶವು ಸಂಸ್ಕೃತಿಗೆ ಹೆಸರುವಾಸಿಯಾಗಿರುವುದು ವಿವಾಹ ಪದ್ಧತಿಯಲ್ಲಿ ಹೆಚ್ಚು ಉಡುಗೆ ತೊಡುಗೆಯ ರೀತಿ ನೀತಿಗಳು. ಪೂಜೆ ಪುನಸ್ಕಾರಗಳು. ಎಲ್ಲವೂ ಅಳವಡಿಸಿಕೊಂಡಿದ್ದಾರೆ.

ಇತ್ತೀಚಿನ ದಿನಗಳಲ್ಲಿ ಪತಿ ಪತ್ನಿಯರ ಸಂಬಂಧವು ಬಹಳಷ್ಟು ಹದಗೆಡುತ್ತಿದೆ. ವಿಚ್ಛೇದನ ಎಂಬ ಸಂಬಂಧ ಮುರಿಯುವುದರ ಬಗ್ಗೆ ಹೆಚ್ಚು ಒಲವನ್ನು ನೀಡುತ್ತಿದ್ದಾರೆ. ಈ ವಿಚಾರದಿಂದ ಹೊರಬರಬೇಕು ಬದುಕಿನ ವಿಚಾರ ವಿಮರ್ಶೆಗಳತ್ತ ಗಮನ ಹರಿಸಬೇಕು, ಬದುಕಿನಲ್ಲಿ ತಂದೆ ತಾಯಿ ಆಗಿ ಮಕ್ಕಳನ್ನು ಸಂಸ್ಕಾರವಂತರಾಗಿ ಬೆಳೆಸುವುದು ಮುಖ್ಯವಾಗಿದೆ.

ಹಿಂದೆ ಆಚಾರ ವಿಚಾರ ಸಂಸ್ಕೃತಿಗೆ ನೀಡುತ್ತಿದ್ದ ಬೆಲೆಯೂ ಇಂದಿನ ಪ್ರಸ್ತುತ ದಿನಮಾನಗಳಲ್ಲಿ ನಡೆಯುತ್ತಿಲ್ಲ. ಪ್ರತಿಯೊಂದು ಸಂಬಂಧಕ್ಕೂ ಅದರದೇ ಆದ ವಿಶೇಷತೆ ಇದೆ. ಅದನ್ನು ಅರಿತು ಬಾಳಿದರೆ ಜೀವನ ಶಾಸ್ತ್ರವಾಗುತ್ತದೆ.

ಸಂಸ್ಕೃತಿಯನ್ನು ಉಳಿಸೋಣ, ಬೆಳೆಸೋಣ, ಕಲಿಯೋಣ, ಕಲಿಸೋಣ, ಎನ್ನುತ್ತಾ ಜಾಲತಾಣಗಳ ಬಳಕೆಯನ್ನು ಕಡಿಮೆ ಮಾಡುತ್ತಾ ಒಳ್ಳೆಯ ವಿಚಾರಗಳನ್ನು ಪಡೆಯೋಣ ಕೆಟ್ಟ ವಿಚಾರಗಳನ್ನ ದೂರ ಬಿರಿಸುತ್ತಾ ಬಾಳೋಣ ಎಂದು ಹೇಳುತ್ತಾ ಈ ಲೇಖನಕ್ಕೆ ವಿರಾಮವನ್ನು ಹಾಕುತ್ತಿದ್ದಾನೆ.


**ಜೈ ಹಿಂದ್ ಜೈ ಭಾರತ ಮಾತೆ**

# ಪಾರ್ಶ್ವವಾಯು ಬಳಿಕ ಚೇತರಿಕೆಗೆ ಹೋಮಿಯೋಪತಿ ಸಹಾಯವಾಗಬಹುದೇ..?

ಪಾರ್ಶ್ವವಾಯು ಎಂದ ಕೂಡಲೇ ಜನತೆಯಲ್ಲಿ ಭಯದ ವಾತಾವರಣ ನಿರ್ಮಾಣವಾಗುವುದು ಸಹಜ. ಪಾರ್ಶ್ವವಾಯುನಿಂದ ಗೆದ್ದ ಬಳಿಕ ಕುಟುಂಬದ ಸದಸ್ಯರು ಮತ್ತು ಜನ ನಿಟ್ಟುಸಿರು ಬಿಡುತ್ತಾರೆ. ಆದರೆ ಪಾರ್ಶ್ವವಾಯುನಿಂದ ಬದುಕುಳಿದ ವ್ಯಕ್ತಿ ಮೊದಲಿನಂತೆ ದೇಹ ಸ್ಥಿತಿ ಮರುಕಳಿಸುವುದಿಲ್ಲ. ಸಾಮಾನ್ಯದ ಕ್ರಿಯೆಗಳಾದ ಕಪ್ ಹಿಡಿಯುವುದು ಕಷ್ಟಕರ, ವಕ್ರವಾಗಿ ನಡೆದಾಡುವಿಕೆ, ಅಸ್ಪಷ್ಟ ಮಾತು, ಹಠಾತ್ ಬೀಳುವಿಕೆ, ದೈಹಿಕ ಹೋರಾಟದಲ್ಲಿ ತೊಂದರೆಗಳಾಗುವುದು ಪಾರ್ಶ್ವವಾಯುಯಿಂದ ಆಗುವ ತೊಂದರೆಗಳಾಗಿವೆ.



ಪಾರ್ಶ್ವವಾಯು ಒಳಗಾದ ವ್ಯಕ್ತಿಗೆ ಭಯ, ಅಸಹನೆ, ದುಃಖ, ನೆನಪಿನ ದುರ್ಬಲತೆ ಮತ್ತು ಸ್ವಾತಂತ್ರ್ಯ ಕಳೆದುಕೊಂಡ ಭಾವನೆ ಮೂಡುವುದು ಸಹಜ. ಹಲವಾರು ಮಂದಿ ಪಾರ್ಶ್ವವಾಯುನಿಂದ ಬದುಕುಳಿದವರು ''ನಾನು ಹಿಂದಿನಂತಿಲ್ಲ ಎಂಬ ಅನುಭವವನ್ನು ಹಂಚಿಕೊಂಡಿದ್ದಾರೆ. ಪಾರ್ಶ್ವವಾಯು ಗೆದ್ದ ನಂತರ ಫಿಸಿಯೋಥೆರಪಿ, ಸ್ಪೀಚ್ ಥೆರಪಿ, ನಿಯಮಿತ ವೈದ್ಯಕೀಯ ಆರೈಕೆ ಅತ್ಯಂತ ಅಗತ್ಯ. ಆದರೆ ಭಾವನಾತ್ಮಕ, ಮಾನಸಿಕವಾಗಿ ಗುಣಮುಖರಾಗುವುದು ತಡವಾಗುತ್ತದೆ. ಮನಸ್ಥಿತಿ ಬದಲಾವಣೆಗಳು, ಮತ್ತೊಮ್ಮೆ ಪಾರ್ಶ್ವವಾಯು ಆಗಬಹುದೆಂಬ ಆತಂಕ, ನಿದ್ರಾಹೀನತೆ, ಹಾಗೆಯೇ ಮನೋವ್ಯಾಧಿ ಸಹ ಸಾಮಾನ್ಯ ಮನಸ್ಸು ಭಾರವಾಗಿದ್ದರೆ, ದೇಹದ ಚೇತರಿಕೆಯೂ ನಿಧಾನವಾಗಬಹುದು. ದೇಹದ ಚೇತರಿಕೆ ನಿಧಾನವಾಗುವುದು ಅಥವಾ ಒಂದು ಹಂತದಲ್ಲಿ ನಿಂತಂತೆ ಕಾಣಿಸುವುದು ಹಾಗೂ ಮಾನಸಿಕ ಆರೋಗ್ಯದ ಸಮಸ್ಯೆಗಳು ಇವುಗಳ ಕಾರಣದಿಂದ ಹಲವಾರು ರೋಗಿಗಳು, ಅವರ ಕುಟುಂಬಗಳು ಪರ್ಯಾಯ ವೈದ್ಯಕೀಯ ಪದ್ಧತಿಗಳತ್ತ ಗಮನ ಹರಿಸುತ್ತಾರೆ. ಹೋಮಿಯೋಪತಿಯಲ್ಲಿ ಪಾರ್ಶ್ವವಾಯುವಿಗೆ ಔಷಧಿಗಳು ಇವೆ. ಅವು ತೀವ್ರ, ದೀರ್ಘಕಾಲಿಕ ನರ ಸಂಬಂಧಿತ ಸಮಸ್ಯೆಗಳಿಗೂ ಉಪಯೋಗ ಆಗಬಹುದು ಎಂದು ಹೇಳಲಾಗುತ್ತದೆ. ಇದು ಕೇವಲ ದುರ್ಬಲವಾದ ಸ್ನಾಯುಗಳು, ನರ ಹಾನಿಯನ್ನಷ್ಟೇ ಗಮನಿಸುವುದಿಲ್ಲ. ವ್ಯಕ್ತಿಯನ್ನು ಸಮಗ್ರವಾಗಿ ಪರಿಗಣಿಸುತ್ತದೆ. ಅವರು ಭಾವನಾತ್ಮಕವಾಗಿ ಹೇಗಿದ್ದಾರೆ, ಹೇಗೆ ನಿದ್ರೆ ಮಾಡುತ್ತಾರೆ, ಶಕ್ತಿಯ ಮಟ್ಟ ಹೇಗೆ ಬದಲಾಗುತ್ತದೆ, ಪಾರ್ಶ್ವವಾಯು ನಂತರ ಅವರ ವ್ಯಕ್ತಿತ್ವದಲ್ಲಿ ಏನೆಲ್ಲ ಬದಲಾವಣೆಗಳಾಗಿವೆ ಎಂಬುದನ್ನೂ ಒಳಗೊಂಡಿದೆ. ಪ್ರತಿ ಪಾರ್ಶ್ವವಾಯು ಅನುಭವವೂ ವಿಭಿನ್ನ. ಕೆಲವರು ದೇಹದ ಒಂದು ಭಾಗದಲ್ಲಿ ಗಟ್ಟಿತನ, ಸುಮ್ಮನಾಗಿರುವ ಭಾವನೆ ಅನುಭವಿಸಬಹುದು. ಕೆಲವರಿಗೆ ನಿರಂತರ ದಣಿವು ಕಾಡಬಹುದು.



ಇನ್ನೂ ಕೆಲವರು ಅತಿಯಾಗಿ ಭಾವನಾತ್ಮಕ ಖಿನ್ನತೆಗೆ ಒಳಗಾಗಿರಬಹುದು. ಇಂತಹ ಲಕ್ಷಣಗಳಿಗೆ ಹೋಮಿಯೋಪಥಿಕ್ ಚಿಕಿತ್ಸೆ ಸಹಕಾರಿಯಾಗಲಿದೆ ಎಂದು ಕೆಲವರು ನಂಬುತ್ತಾರೆ. ದೈಹಿಕವಾಗಿ, ಸ್ನಾಯು ಗಟ್ಟಿತನ, ದುರ್ಬಲತೆ, ದೇಹ ಬೆವರುವಿಕೆ, ನರ ಸಂಬಂಧಿತ ಅಸ್ವಸ್ಥತೆಗಳಿಗೆ, ಥೆರಪಿಯ ಜತೆಗೆ ಹೋಮಿಯೋಪಥಿಯನ್ನು ಬಳಸಬಹುದು ಎಂದು ಹೇಳಲಾಗುತ್ತದೆ. ಸಾಮಾನ್ಯ ಚಿಕಿತ್ಸೆಯ ನಂತರ ನಿಂತಂತಾಗಿದ್ದ ಚಲನೆಯ ವ್ಯಾಪ್ತಿ, ಮಾತಿನ ಸುಧಾರಣೆ, ಹೋಮಿಯೋಪಥಿ ಪ್ರಾರಂಭಿಸಿದ ನಂತರ ಮತ್ತೆ ಕಾಣಿಸಿಕೊಳ್ಳಬಹುದು ಎಂದು ತಿಳಿಸಿದ್ದಾರೆ.



# ಪಾಲಕ್ ಪೂರಿ ಒಮ್ಮೆ ಟ್ರೈ ಮಾಡಿ

ರುಚಿಯಾದ, ಆರೋಗ್ಯಕರವಾದ ಆಹಾರವನ್ನು ಸವಿಯಲು ಪ್ರತಿಯೊಬ್ಬರು ಇಷ್ಟಪಡುತ್ತಾರೆ. ಹೀಗಿರುವಾಗ ನೀವು ಇಂದು ಮನೆಯಲ್ಲಿ ಪಾಲಕ್ ಪೂರಿಯನ್ನು ಮಾಡಲು ಪ್ರಯತ್ನಿಸಿ.

**ಬೇಕಾಗುವ ಸಾಮಗ್ರಿಗಳು:** ಗೋಧಿ ಹಿಟ್ಟು 2ಕಪ್, ಹಸಿಮೆಣಸಿನ ಕಾಯಿ 5, ಪಾಲಾಕ್ ಸೊಪ್ಪು 3 ಕಟ್ಟು, ಜೀರಿಗೆ 2 ಟೀ ಸ್ಪೂನ್, ಕೊತ್ತಂಬರಿ ಸೊಪ್ಪು ಸ್ವಲ್ಪ, ರುಚಿಗೆ ತಕ್ಕಷ್ಟು ಉಪ್ಪು, ಅಡುಗೆ ಎಣ್ಣೆ –2 ಕಪ್

**ಮಾಡುವ ವಿಧಾನ:** ಮೊದಲಿಗೆ ಪಾಲಕ್ ಸೊಪ್ಪಿಗೆ ಉಪ್ಪು, ಬೆರೆಸಿ ನೀರಿನಲ್ಲಿ ಚೆನ್ನಾಗಿ ತೊಳೆಯಿರಿ, ನಂತರ ಬಾಣಲೆಯಲ್ಲಿ ಪಾಲಕ್ ಸೊಪ್ಪು, ನೀರು ಹಾಕಿ ಬೇಯಿಸಿಕೊಳ್ಳಿ. ಬೇಯಿಸಿದ ಪಾಲಕ್ ಸೊಪ್ಪು ಜೀರಿಗೆ, ಹಸಿಮೆಣಸಿನ ಕಾಯಿ, ಕೊತ್ತಂಬರಿ ಸೊಪ್ಪನ್ನು ಹಾಕಿ ನುಣ್ಣಗೆ ರುಬ್ಬಿಕೊಳ್ಳಿ. ನಂತರ ಗೋಧಿ ಹಿಟ್ಟಿಗೆ ಈ ಪಾಲಾಕ್ ಮಿಶ್ರಣವನ್ನು ಸೇರಿಸಿ ಪೂರಿ ಹಿಟ್ಟನ್ನು ನಾದಿಕೊಳ್ಳಿ. ಈ ಹಿಟ್ಟಿನಿಂದ ಪೂರಿಯನ್ನು ಸಿದ್ಧಪಡಿಸಿಕೊಂಡು ಎಣ್ಣೆಯಲ್ಲಿ ಕರಿದರೆ ರುಚಿಯಾದ ಪಾಲಾಕ್ ಪೂರಿ ಸವಿಯಲು ಸಿದ್ಧವಾಗುತ್ತದೆ.

# ಇಂದಿನ ಮಕ್ಕಳಿಗೆ ಕಷ್ಟದ ಮೌಲ್ಯ ತಿಳಿಯಬೇಕಾದ ಅಗತ್ಯ



ವಿಶ್ವಾಸ್.ಡಿ.ಗೌಡ
• ಉದಯವಾಹಿನಿ, ವಿಶೇಷ

ಇಂದಿನ ಕಾಲದಲ್ಲಿ ಮಕ್ಕಳನ್ನು ನಾವು ತುಂಬಾ ಆರಾಮದಾಯಕವಾಗಿ ಬೆಳೆಸುತ್ತಿದ್ದೇವೆ. ಅವರಿಗೆ ಬೇಕಾದ ಬಹುತೇಕ ಎಲ್ಲವನ್ನೂ ಸುಲಭವಾಗಿ ಕೊಡುತ್ತೇವೆ. ಉತ್ತಮ ಶಿಕ್ಷಣ, ಸುಂದರ ಮನೆ, ಆಧುನಿಕ ಸಾಧನಗಳು, ಮನರಂಜನೆ ಈ ಎಲ್ಲಾ ಸೌಲಭ್ಯಗಳನ್ನು ಒದಗಿಸುತ್ತೇವೆ. ಇದು ಪೋಷಕರ ಪ್ರೀತಿ ಮತ್ತು ಕಾಳಜಿಯ ಸಂಕೇತವೇ ಸರಿ. ಆದರೆ ಈ ಆರಾಮದಾಯಕ ಜೀವನಶೈಲಿಯ ನಡುವೆ ಮಕ್ಕಳಿಗೆ ''ಕಷ್ಟ'' ಎಂಬ ಪದದ ಅರ್ಥವೇ ತಿಳಿಯದಂತೆ ಮಾಡುತ್ತಿರುವುದೇನೋ ಎಂಬ ಆತಂಕವೂ ನಮ್ಮ ಮುಂದೆ ಮೂಡುತ್ತಿದೆ.

ಹಿಂದಿನ ಪೀಳಿಗೆಯವರು ತಮ್ಮ ಬಾಲ್ಯವನ್ನು ನೆನಪಿಸಿಕೊಳ್ಳುವಾಗ ಅನೇಕ ಕಷ್ಟ–ಸಂಕಷ್ಟಗಳ ನಡುವೆ ಬೆಳೆದದ್ದನ್ನು ಹೇಳುತ್ತಾರೆ. ಸರಿಯಾದ ಸೌಲಭ್ಯಗಳಿಲ್ಲದಿದ್ದರೂ ಅವರು ಧೈರ್ಯ, ಶ್ರಮ ಮತ್ತು ಸಹನೆಯ ಮೂಲಕ ಬದುಕಿನ ಪಾಠಗಳನ್ನು ಕಲಿತಿದ್ದರು. ಶಾಲೆಗೆ ದೂರ ನಡೆದು ಹೋಗುವುದು, ಮನೆಯ ಕೆಲಸಗಳಲ್ಲಿ ಸಹಾಯ ಮಾಡುವುದು, ಹಣದ ಮೌಲ್ಯ ತಿಳಿದುಕೊಳ್ಳುವುದು ಇವೆಲ್ಲವೂ ಅವರಿಗೆ ಜೀವನದ ಪಾಠಗಳನ್ನು ಕಲಿಸಿದವು. ಆ ಅನುಭವಗಳು ಅವರನ್ನು ಬಲಿಷ್ಠರನ್ನಾಗಿಸಿತು. ಆದರೆ ಇಂದಿನ ಮಕ್ಕಳ ಜೀವನದಲ್ಲಿ ಈ ರೀತಿಯ ಅನುಭವಗಳು ಕಡಿಮೆಯಾಗುತ್ತಿವೆ.

ಇಂದಿನ ಮಕ್ಕಳು ಅನೇಕ ಸೌಲಭ್ಯಗಳ ನಡುವೆ ಬೆಳೆಯುತ್ತಿದ್ದಾರೆ. ಮೊಬೈಲ್ ಫೋನ್, ಟ್ಯಾಬ್ಲೆಟ್, ಇಂಟರ್ನೆಟ್, ಟಿವಿ ಇವುಗಳು ಅವರ ದಿನನಿತ್ಯದ ಜೀವನದ ಭಾಗವಾಗಿವೆ. ಬೇಕಾದ ವಸ್ತುಗಳು ಸುಲಭವಾಗಿ ದೊರಕುತ್ತವೆ. ಕೆಲವೊಮ್ಮೆ ಮಕ್ಕಳಿಗೆ ನಾವು ಕೇಳುವ ಮೊದಲುಲೇ ಎಲ್ಲವನ್ನೂ ಕೊಡುತ್ತೇವೆ. ಇದರ ಪರಿಣಾಮವಾಗಿ ಅವರಿಗೆ ''ಅಭಾವ'' ಅಥವಾ ''ಕೊರತೆ'' ಎಂಬ ಅನುಭವವೇ ಇಲ್ಲದಂತಾಗುತ್ತದೆ. ಆದರೆ ಜೀವನದಲ್ಲಿ ಸದಾ ಎಲ್ಲವೂ ಸುಲಭವಾಗಿ ಸಿಗುವುದಿಲ್ಲ. ಕೆಲವೊಮ್ಮೆ ಕಷ್ಟಗಳನ್ನು ಎದುರಿಸಲೇಬೇಕು. ಅದನ್ನು ಎದುರಿಸಲು ಮಾನಸಿಕ ಶಕ್ತಿಯೂ ಅಗತ್ಯ. ಮಕ್ಕಳಿಗೆ ಕಷ್ಟದ ಮೌಲ್ಯ ತಿಳಿಸಬೇಕೆಂದರೆ ಮೊದಲನೆಯದಾಗಿ ಅವರಿಗೆ ಜೀವನದ ನಿಜವಾದ ಪರಿಸ್ಥಿತಿಯನ್ನು ಪರಿಚಯಿಸಬೇಕು. ಉದಾಹರಣೆಗೆ, ಹಣದ ಮೌಲ್ಯವನ್ನು ತಿಳಿಸಬೇಕು. ಪ್ರತಿಯೊಂದು ವಸ್ತುವಿಗೂ ಬೆಲೆ ಇದೆ ಮತ್ತು ಅದನ್ನು ಸಂಪಾದಿಸಲು ಶ್ರಮ ಬೇಕು ಎಂಬುದನ್ನು ಅವರು ಅರ್ಥಮಾಡಿಕೊಳ್ಳಬೇಕು. ಕೆಲವೊಮ್ಮೆ ಮಕ್ಕಳಿಗೆ ಬೇಕಾದ ಪ್ರತಿಯೊಂದು ವಸ್ತುವನ್ನೂ ತಕ್ಷಣ ಕೊಡುವುದಕ್ಕಿಂತ, ಅದಕ್ಕಾಗಿ ಕಾಯಲು ಅಥವಾ ಶ್ರಮಿಸಲು ಪ್ರೇರೇಪಿಸಬಹುದು.

ಮನೆಯಲ್ಲಿಯೂ ಮಕ್ಕಳಿಗೆ ಕೆಲವು ಜವಾಬ್ದಾರಿಗಳನ್ನು ನೀಡುವುದು ಬಹಳ ಮುಖ್ಯ. ಸಣ್ಣ ಸಣ್ಣ ಕೆಲಸಗಳನ್ನು ಮಾಡುವಂತೆ ಹೇಳಬಹುದು ಉದಾಹರಣೆಗೆ ತಮ್ಮ ವಸ್ತುಗಳನ್ನು ಸರಿಯಾಗಿ ಇಡುವುದು, ಮನೆಯ ಕೆಲಸಗಳಲ್ಲಿ ಸಹಾಯ ಮಾಡುವುದು, ತಮ್ಮ ಓದಿಗೆ ಸ್ವತಃ ಜವಾಬ್ದಾರಿಯಾಗುವುದು. ಈ ರೀತಿಯ ಅಭ್ಯಾಸಗಳು ಮಕ್ಕಳಲ್ಲಿ ಶಿಸ್ತು ಮತ್ತು ಹೊಣೆಗಾರಿಕೆಯನ್ನು ಬೆಳೆಸುತ್ತವೆ.

ಇನ್ನೊಂದು ಮುಖ್ಯ ವಿಷಯವೆಂದರೆ ಸಾಮಾಜಿಕ ಅರಿವು. ಮಕ್ಕಳನ್ನು ಕೆಲವೊಮ್ಮೆ ಸಮಾಜದ ವಿವಿಧ ಸ್ಥಿತಿಗಳನ್ನು ನೋಡಲು ಅವಕಾಶ ನೀಡಬೇಕು. ಉದಾಹರಣೆಗೆ, ಬಡವರ ಜೀವನ, ಕಷ್ಟಪಟ್ಟು ಕೆಲಸ ಮಾಡುವ ಜನರ ಬದುಕು ಇವೆಲ್ಲವನ್ನು ನೋಡಿದಾಗ ಮಕ್ಕಳಿಗೆ ತಮ್ಮ ಜೀವನದ ಸೌಲಭ್ಯಗಳ ಮೌಲ್ಯ ತಿಳಿಯುತ್ತದೆ. ಇದರಿಂದ ಅವರಲ್ಲಿ ಕರುಣೆ ಮತ್ತು ಮಾನವೀಯತೆ ಬೆಳೆಯುತ್ತದೆ. ಪೋಷಕರು ಮಕ್ಕಳಿಗೆ ಕೇವಲ ಸೌಲಭ್ಯಗಳನ್ನು ನೀಡುವುದಕ್ಕಿಂತ, ಜೀವನದ ಪಾಠಗಳನ್ನು ಕಲಿಸುವುದು ಅತ್ಯಂತ ಮುಖ್ಯ. ಕಷ್ಟಗಳನ್ನು ಎದುರಿಸುವ ಧೈರ್ಯ, ಸಹನೆ, ಶ್ರಮ ಮತ್ತು ಸರಳ ಜೀವನದ ಮೌಲ್ಯಗಳನ್ನು ತಿಳಿಸಿದಾಗ ಮಾತ್ರ ಮಕ್ಕಳು ಭವಿಷ್ಯದಲ್ಲಿ ದೃಢ ವ್ಯಕ್ತಿತ್ವವನ್ನು ಹೊಂದುವರು.

ಒಟ್ಟಿನಲ್ಲಿ, ಮಕ್ಕಳಿಗೆ ಪ್ರೀತಿ ಮತ್ತು ಸೌಲಭ್ಯಗಳನ್ನು ನೀಡುವುದು ತಪ್ಪಲ್ಲ. ಆದರೆ ಅದೇ ಸಮಯದಲ್ಲಿ ಅವರಿಗೆ ಜೀವನದ ಸತ್ಯಗಳನ್ನು ತಿಳಿಸುವುದು ಕೂಡ ಪೋಷಕರ ಕರ್ತವ್ಯ. ಕಷ್ಟದ ಮೌಲ್ಯವನ್ನು ಅರಿತ ಮಕ್ಕಳು ಮಾತ್ರ ಭವಿಷ್ಯದಲ್ಲಿ ಬಲಿಷ್ಠರಾಗುತ್ತಾರೆ ಮತ್ತು ಸಮಾಜಕ್ಕೆ ಉತ್ತಮ ನಾಗರಿಕರಾಗುತ್ತಾರೆ. ಆದ್ದರಿಂದ ಮಕ್ಕಳಿಗೆ ಸೌಲಭ್ಯಗಳ ಜೊತೆಗೆ ಕಷ್ಟದ ಪಾಠವನ್ನೂ ಕಲಿಸುವುದು ಅತ್ಯಗತ್ಯ.



• ನಿರ್ವಹಣೆ ಕೊರತೆ: ಸೊರಗಿದ ನವಿಲುಧಾಮ, ಮೂಲ ಸೌಕರ್ಯವಿಲ್ಲದೇ ಪರದಾಟ

# ಕಳೆಗುಂದಿದ ಬಂಕಾಪುರದ ಐತಿಹಾಸಿಕ ಕೋಟೆ

• ಉದಯವಾಹಿನಿ ಹಾವೇರಿ

ತುಕ್ಕು ಹಿಡಿದ ಪ್ರವೇಶ ದ್ವಾರ. ಪಾಳು ಬಿದ್ದ ವಸ್ತು ಸಂಗ್ರಹಾಲಯದ ಕಟ್ಟಡ. ಕಿತ್ತುಹೋದ ಪಾದಚಾರಿ ಮಾರ್ಗದ ಟೈಲ್ಸ್‌ಗಳು-ಚಾವಣಿಗಳು. ಕಳಚಿ ಬಿದ್ದ ವಿದ್ಯುತ್ ತಂತಿಗಳು. ಬಾವುಲಿಗಳ ಆಶ್ರಯ ತಾಣವಾದ ಐತಿಹಾಸಿಕ ಸ್ಮಾರಕಗಳು. ಡಾಂಬರ್ ಕಾಣದ ರಸ್ತೆಗಳು. ಭದ್ರತೆ ಇಲ್ಲದೇ ಭಯದಲ್ಲಿ ಓಡಾಡುವ ಪ್ರವಾಸಿಗರು...

ಜಿಲ್ಲೆಯ ಶಿಗ್ಗಾವಿ ತಾಲ್ಲೂಕಿನ ಬಂಕಾಪುರದಲ್ಲಿರುವ ಐತಿಹಾಸಿಕ ಕೋಟೆ ಹಾಗೂ ನವಿಲುಧಾಮದ ಸದ್ಯದ ದುಸ್ಥಿತಿಯಿದು. ಜಿಲ್ಲಾ ಕೇಂದ್ರ, ಹಾವೇರಿಯಿಂದ 21 ಕಿ.ಮೀ. ಹಾಗೂ ತಾಲ್ಲೂಕು ಕೇಂದ್ರ, ಶಿಗ್ಗಾವಿಯಿಂದ 10 ಕಿ.ಮೀ. ದೂರದಲ್ಲಿರುವ ಬಂಕಾಪುರದ ಕೋಟೆ, ನವಿಲುಗಳ ವಾಸಸ್ಥಳವಾಗಿ ಪ್ರಸಿದ್ಧಿ ಪಡೆದಿದೆ. ಆದರೆ, ಇತ್ತೀಚಿನ ದಿನಗಳಲ್ಲಿ ಕೋಟೆಯ ಅಂದ ಹಾಳಾಗುತ್ತಿದೆ. ನಿರ್ವಹಣೆ ಕೊರತೆ ನವಿಲುಧಾಮವು ಸೊರಗುತ್ತಿದೆ.

ಬಂಕಾಪುರ ಕೋಟೆಯನ್ನು ನವಿಲು ಸಂರಕ್ಷಣಾ ಪ್ರದೇಶವೆಂದು 2006ರ ಜೂನ್ 9ರಂದು ಸರ್ಕಾರ ಘೋಷಣೆ ಮಾಡಿದೆ. ಕೋಟೆಯ 139 ಎಕರೆ 10 ಗುಂಟೆ ಪ್ರದೇಶವನ್ನು ಪಶು ಸಂಗೋಪನಾ ಇಲಾಖೆಯ ಖಿಲಾರ್ ತಳಿ ಗೋವು ಸಂವರ್ಧನಾ ಕೇಂದ್ರದ ಸುಪರ್ದಿಗೆ ನೀಡಿದೆ. ಈ ಕೋಟೆಯು ನವಿಲುಗಳ ಸಂತಾನೋತ್ಪತ್ತಿ ಹಾಗೂ ವಾಸಕ್ಕೆ ಹೇಳಿಮಾಡಿಸಿದ ಜಾಗವಾಗಿದೆ. ನವಿಲು ಮಾತ್ರವಲ್ಲದೇ ಕಾಡುಹಂದಿ, ಮುಳ್ಳುಹಂದಿ, ಚಿಪ್ಪು ಹಂದಿ, ಪುನುಗು ಬೆಕ್ಕು, ಮುಂಗುಸಿ, ಅಳಿಲು, ಕಪ್ಪುನಾಪೆಡ್ ಮೂಲಕ, ಬಾನೆಟ್ ಕೋತಿ ಸೇರಿದಂತೆ ಇತ್ಯಾದಿ ಪ್ರಾಣಿ-ಪಕ್ಷಿಗಳು ಇಲ್ಲಿ ಬದುಕುತ್ತಿವೆ.


ಉದಯವಾಹಿನಿ ಚಿತ್ರ

ಬಿಳಿ ಜಾಲಿ, ಕರಿ ಜಾಲಿ, ಹುಣಸೆ, ಅಗಾನಿಶಿಖೆ, ಬೇವು, ಅಲ, ಅರಳಿ, ನೀಲಗಿರಿ, ಶ್ರೀಗಂಧ, ತುಗ್ಗಲಿ, ಸೀಮೆತಂಗಡಿ. ಜಟ್ರೋಪ, ಸೈಕಸ್ ಸೇರಿದಂತೆ ವಿವಿಧ ಜಾತಿಯ ಮರಗಳು ಕೋಟೆ ಪ್ರದೇಶದಲ್ಲಿ ಕಾಣಬಹುದು. ಆಗಾಗ ಮರಗಳನ್ನು ಕಡಿದು ಅಕ್ರಮವಾಗಿ ಸಾಗಿಸುತ್ತಿರುವ ಆರೋಪಗಳಿವೆ.


ಕೋಟೆ ಪ್ರವೇಶಿಸುತ್ತಿದ್ದಂತೆ ನವಿಲುಗಳ ಧ್ವನಿ ಕಿವಿಗೆ ಇಂಪು ನೀಡುತ್ತದೆ. ಒಳಗಡೆ ಹೋದಂತೆ, ನವಿಲುಗಳ ದರ್ಶನವಾಗುತ್ತದೆ. 2006ರ ಸಂದರ್ಭದಲ್ಲಿ 500ಕ್ಕೂ ಹೆಚ್ಚು ನವಿಲುಗಳು ಕೋಟೆಯಲ್ಲಿದ್ದವು. ನೀರು ಹಾಗೂ ಆಹಾರ ಸಿಗುತ್ತಿತ್ತು. ಈಗ ನೀರು ಸಿಗುವುದು ದುಸ್ತರವಾಗಿದೆ. ಆಹಾರಕ್ಕೂ ನವಿಲುಗಳು ಪರದಾಡುತ್ತಿವೆ.

ಖಿಲಾರ್ ತಳಿ ಗೋವು ಸಂವರ್ಧನಾ ಕೇಂದ್ರದಿಂದ ಮೇವು ಬೆಳೆಯಲಾಗುತ್ತಿದೆ. ಇದೇ ಸ್ಥಳದಲ್ಲಿ ನವಿಲುಗಳು ಆಹಾರಕ್ಕಾಗಿ ಹುಡುಕಾಟ ನಡೆಸುವ ದೃಶ್ಯಗಳು ಕಾಣಸಿಗುತ್ತಿವೆ. ಕೋಟೆ ವ್ಯಾಪ್ತಿಯನ್ನು ಮೀರಿ ನವಿಲುಗಳು ಪಕ್ಕದ ಜಮೀನುಗಳಿಗೆ ಹೋಗುತ್ತಿವೆ. ಬಿತ್ತಿದ ಬೀಜಗಳನ್ನು ತಿನ್ನುತ್ತಿವೆ. ರಾಸಾಯನಿಕ ಮಿಶ್ರಣ ಮಾಡಿದ ಬೀಜಗಳನ್ನು ತಿಂದು ನವಿಲುಗಳು ಸತ್ತಿರುವ ಘಟನೆಗಳೂ ನಡೆದಿವೆ.

'ಪಶು ಸಂಗೋಪನಾ ಇಲಾಖೆಯೂ ಕೇವಲ, ಗೋವುಗಳ ಸಂವರ್ಧನೆಗಷ್ಟೇ ಕೋಟೆ ಪ್ರದೇಶವನ್ನು ಬಳಸಿಕೊಳ್ಳುತ್ತಿದೆ. ನವಿಲುಧಾಮವನ್ನು ಪ್ರವಾಸೋದ್ಯಮ ಹಾಗೂ ಅರಣ್ಯ ಇಲಾಖೆ ಅಭಿವೃದ್ಧಿಪಡಿಸಬೇಕು. ನಗರೇಶ್ವರ ದೇವಸ್ಥಾನ ಹಾಗೂ ಸುತ್ತಮುತ್ತಲಿನ ಪರಿಸರವನ್ನು ಭಾರತೀಯ ಪುರಾತತ್ವ ಇಲಾಖೆ ನಿರ್ವಹಣೆ ಮಾಡಬೇಕು. ಆದರೆ, ಜವಾಬ್ದಾರಿ ಇರುವ ಇಲಾಖೆಗಳು ಮೌನ ಆಗಿವೆ. ಹಿರಿಯ ಅಧಿಕಾರಿಗಳು ಸ್ಥಳಕ್ಕೆ ಬರುವುದೇ ಇಲ್ಲ. ಇದರಿಂದಲೇ ನವಿಲುಧಾಮ ಸೊರಗುತ್ತಿದೆ ಎಂದು ಸ್ಥಳೀಯರು ದೂರಿದರು.

**ಸೌಕರ್ಯ ಮರೀಚಿಕೆ:** ಜಿಲ್ಲೆಯ ಪ್ರಮುಖ ಪ್ರವಾಸಿ ತಾಣಗಳಲ್ಲಿ ನವಿಲುಧಾಮವೂ ಒಂದು. ನಿತ್ಯವೂ ಪ್ರವಾಸಿಗರು ಬಂದು ಹೋಗುತ್ತಾರೆ. ಆದರೆ, ಸ್ಥಳದಲ್ಲಿ ಮೂಲ ಸೌಕರ್ಯ ಇಲ್ಲದಿರುವುದು ನಿರಾಸೆ ಮೂಡಿಸುತ್ತಿದೆ. ಆಮ್ಲಜನಕ ಯಥೇಚ್ಛವಾಗಿ ಸಿಗುವ ಕೋಟೆ ಪ್ರದೇಶವು ವಾಯುವಿಹಾರಿಗಳಿಗೂ ಹೇಳಿಮಾಡಿಸಿದ ಜಾಗವಾಗಿದೆ. ನಿತ್ಯವೂ ಬೆಳಿಗ್ಗೆ ಹಾಗೂ ಸಂಜೆ ವಾಯುವಿಹಾರಿಗಳನ್ನು ಕಾಣಬಹುದು. ಅವರು ನಡೆದುಕೊಂಡು ಹೋಗಲು ಪಾದಚಾರಿ ಮಾರ್ಗ ನಿರ್ಮಿಸಲಾಗಿದ್ದು, ಅದರ ಟೈಲ್ಸ್ ಹಾಗೂ ಚಾವಣಿ ಕಿತ್ತು ಹೋಗಿದೆ. ಕುಡಿಯುವ ನೀರು ಹಾಗೂ ಶೌಚಾಲಯದ ವ್ಯವಸ್ಥೆಯಿಲ್ಲ. ಸ್ಥಳದ ವಿಶೇಷತೆ ಪಟ್ಟಿ, ಸೂಚನಾ ಫಲಕಗಳು, ಯಾವ ಸ್ಥಳದಲ್ಲಿ ಏನಿದೆ? ಎಂಬ ಫಲಕಗಳೂ ಇಲ್ಲ. ಒಳ ರಸ್ತೆಗಳೂ ಹಾಳಾಗಿದವೆ. ನವಿಲುಗಳನ್ನು ಕಣ್ಣಾರೆ ನೋಡಲು ಮಕ್ಕಳ ಸಮೇತ ಕೋಟೆಗೆ ಹೋಗುತ್ತೇನೆ. ಅಲ್ಲಲ್ಲಿ ಕಾಣುವ ನವಿಲುಗಳನ್ನು ನೋಡಿ ಮಕ್ಕಳು ಖುಷಿ ಪಡುತ್ತಾರೆ. ಆದರೆ, ಸ್ಥಳದಲ್ಲಿ ಕುಡಿಯುವ ನೀರು ಸಿಗುವುದಿಲ್ಲ. ಪ್ರವೇಶ ದ್ವಾರದಿಂದ ವಾಹನಗಳ ವ್ಯವಸ್ಥೆ ಇಲ್ಲ. ಏನಾದರೂ ಆರೋಗ್ಯ ಸಮಸ್ಯೆಯಾದರೆ, ವೈದ್ಯಕೀಯ ಸೌಲಭ್ಯವಿಲ್ಲ. ಶೌಚಾಲಯವಂತೂ ಇಲ್ಲವೇ ಇಲ್ಲ ಎಂದು ಶಿಗ್ಗಾವಿಯ ಚಂದ್ರಶೇಖರ ಹೇಳಿದರು. ನವಿಲುಧಾಮವನ್ನು ಮಾದರಿ ಪ್ರವಾಸಿ ತಾಣವನ್ನಾಗಿ ಮಾಡಬೇಕು. ದೊಡ್ಡ ಕೆಲಸಗಳ ಅಗತ್ಯವಿಲ್ಲ. ಕುಡಿಯುವ ನೀರು, ಶೌಚಾಲಯದಂಥ ಕನಿಷ್ಠ ಮೂಲ ಸೌಕರ್ಯ ಒದಗಿಸಿದರೂ ಸಾಕು. ಪ್ರವಾಸಿಗರಿಗೆ ಅನುಕೂಲವಾಗುತ್ತದೆ' ಎಂದರು.



**ಅಕ್ರಮ ಚಟುವಟಿಕೆ ತಾಣ**

'ಕೋಟೆಯ ಪ್ರಾರಂಭದಲ್ಲಿ ವಸ್ತು ಸಂಗ್ರಹಾಲಯದ ಉದ್ದೇಶದಿಂದ ಕಟ್ಟಡ ನಿರ್ಮಿಸಲಾಗಿದೆ. ಈ ಕಟ್ಟಡ ಅಕ್ರಮ ಚಟುವಟಿಕೆ ತಾಣವಾಗಿದೆ. ಮದ್ಯ ಕುಡಿದ ವ್ಯಕ್ತಿಗಳು ಬಂದು ಮಲಗುತ್ತಿದ್ದಾರೆ. ರಾತ್ರಿ ಮದ್ಯದ ಪಾರ್ಟಿ ಮಾಡುತ್ತಿದ್ದಾರೆ' ಎಂದು ಸ್ಥಳೀಯರು ದೂರಿದರು. 'ಕೋಟೆ ಕಾಯಲು ಯಾವುದೇ ಭದ್ರತಾ ಸಿಬ್ಬಂದಿಯಿಲ್ಲ. ಕೋಟೆಯಲ್ಲಿ ಬೆಳಿಗ್ಗೆ ಓಡಾಡಲು ಭಯವಾಗುತ್ತದೆ. ರಾತ್ರಿಯಂತೂ ಯಾರೂ ಓಡಾಡುವುದಿಲ್ಲ. ಕೆಲವರು ಕೋಟೆಯನ್ನು ಅಕ್ರಮದ ಅಡ್ಡೆ ಮಾಡಿಕೊಂಡಿದ್ದಾರೆ' ಎಂದರು.

**ಅವಸಾನದತ್ತ ಸ್ಮಾರಕಗಳು**

ಬಂಕಾಪುರ ಕೋಟೆಯಲ್ಲಿರುವ ಸ್ಮಾರಕದಿಂದ ಹಾನಗಲ್‌ನವರೆಗೂ ಗುಹೆ ಇರುವುದಾಗಿ ಹೇಳುತ್ತಾರೆ. ಆದರೆ ಈ ಸ್ಮಾರಕವು ಬಾವುಲಿಗಳ ಆಶ್ರಯ ತಾಣವಾಗಿದೆ. ಸ್ಮಾರಕದ ಒಳಗೆ ಬಾವುಲಿಗಳ ಸದ್ದು ಸದಾ ಕೇಳಿಸುತ್ತದೆ. ಅದರ ಬಳಿ ಹೋಗಲು ಭಯವಾಗುತ್ತದೆ. ಇದರಿಂದ ಸ್ಮಾರಕವೂ ಅವಸಾನದತ್ತ ಸಾಗಿದೆ' ಎಂದು ಸ್ಥಳೀಯರು ದೂರಿದರು.

## ಪುರುಷರಲ್ಲಿಯೂ ಸ್ತ್ರೀ ಸಂವೇದನೆಯ ನೆಲೆಗಳಿವೆ: ಡಾ.ಬಿ.ಎಂ.ಗುರುನಾಥ


ಉದಯವಾಹಿನಿ ಚಿತ್ರ

• ಉದಯವಾಹಿನಿ ಚಿತ್ರದುರ್ಗ

ಪ್ರತಿಯೊಬ್ಬ ಪುರುಷನಲ್ಲಿಯೂ ಮಾತೃತ್ವ ಮತ್ತು ಸ್ತ್ರೀ ಸಂವೇದನೆಯ ನೆಲೆಗಳಿದ್ದು ಮಹಿಳಾ ದಿನಾಚರಣೆಯನ್ನು ಸ್ತ್ರೀ-ಪುರುಷರಿಬ್ಬರೂ ಸೇರಿ ಆಚರಿಸಲ್ಪಡಬೇಕು ಎಂದು ಚಿತ್ರದುರ್ಗದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ಡಾ.ಬಿ.ಎಂ.ಗುರುನಾಥ ಅಭಿಪ್ರಾಯ ಪಟ್ಟರು.

ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಚಿನ್ಮೂಲದ್ರಿ ಸಾಹಿತ್ಯ ವೇದಿಕೆ ಚಿತ್ರದುರ್ಗ ಮತ್ತು ರೋಟರಿ ಕ್ಲಬ್ ಚಿನ್ಮೂಲದ್ರಿ, ಚಿತ್ರದುರ್ಗ ಇವರು ಸಂಯುಕ್ತವಾಗಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಲೇಖಕ ಶಿವಾನಂದರ ಕಡೆದಷ್ಟು ಕನಸುಗಳು ಕವನ ಸಂಕಲನ ಮತ್ತು ಬಾಲ ಪ್ರತಿಭೆ ಖುಷಿ ಅರ್ಶ್ ಅವರ ಪ್ರೂಫ್ ಒವರ್ ಪ್ರಿವಿಲೈಜ್ ಕಥಾ ಸಂಕಲನವನ್ನು ಬಿಡುಗಡೆಗೊಳಿಸಿ ಅವರು ಮಾತನಾಡಿದರು. ಶಿವಾನಂದರ ಕಡೆದಷ್ಟು ಕನಸುಗಳು ಕವನ ಸಂಕಲನವನ್ನು ವಿಶ್ಲೇಷಿಸಿ ಮಾತನಾಡಿದ ಅವರು ಪ್ರತಿಯೊಂದು ಕವನವು ಗ್ರಾಮೀಣ ಆಡುಭಾಷೆಯ ಸೊಗಡಿನಿಂದ ಕೂಡಿದ್ದು ಅತ್ಯಂತ ವಸ್ತುನಿಷ್ಠತೆಯಿಂದ ಕೂಡಿವೆ. ಕವಿಯ ಕನಸುಗಳು ಆಲೋಚನೆಗಳಾಗಿ ಕವನದ ರೂಪ ಪಡೆದಿದ್ದು ಪ್ರತಿಯೊಂದು ಕವನವು ಆಪ್ತವಾಗಿ ಓದಿಸಿಕೊಂಡು ಹೋಗುತ್ತವೆ ಎಂದರು.

ಕಾರ್ಯಕ್ರಮದ ಬಗ್ಗೆ ಪ್ರಾಸ್ತಾವಿಕವಾಗಿ ಚಿನ್ಮೂಲದ್ರಿ ಸಾಹಿತ್ಯ ವೇದಿಕೆಯ ಸಂಸ್ಥಾಪಕ ಅಧ್ಯಕ್ಷರಾದ ದಯಾವತಿ ಪುತ್ತೂರ್ಕರ್ ಚಿತ್ರದುರ್ಗದ ಅರವಳಿಕೆ ಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಮೇಘನಾ ಜಿ.ಎಚ್. ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ಮುಖ್ಯ ಅತಿಥಿಗಳಾಗಿ ಭಾರತೀಯ ಯೋಗ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ರವಿ ಕೆ.ಅಂಬೇಕರ್ ಪಾಲ್ಗೊಂಡು ಮಾತನಾಡಿದರು. ಖ್ಯಾತ ವಕೀಲರಾದ ಬಿ.ಕೆ.ರಹಮತ್ ಉಲ್ಲಾ, ಕವಿ ಶಿವಾನಂದ, ರೋಟರಿ ಕ್ಲಬ್ ನ ಅಧ್ಯಕ್ಷರಾದ ದಿಲ್ ಶಾದ್ ಉನ್ನಿಸಾ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಕಾರ್ಯಕ್ರಮದಲ್ಲಿ ರಸಪ್ರಶ್ನಾ ಸ್ಪರ್ಧೆಯಲ್ಲಿ ವಿಜೇತರಾದ ಶಾರದಾ ಬಿ.ಜೈರಾಂ ಮತ್ತು ಸ್ಫೂರ್ತಿ ವಿಕಲಚೇತನ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷರಾದ ತಿಪ್ಪಮ್ಮ ಅವರನ್ನು ವೇದಿಕೆಯಿಂದ ಸನ್ಮಾನಿಸಿ ಗೌರವಿಸಲಾಯಿತು.ಇದೇ ಸಂದರ್ಭದಲ್ಲಿ ಚಿನ್ಮೂಲಾದ್ರಿ ಸಾಹಿತ್ಯ ವೇದಿಕೆಯ ಮಹಿಳಾ ಸದಸ್ಯರು ಭಾರತೀಯ ಸಂಸ್ಕೃತಿ ಬಿಂಬಿಸುವ ನಾರಿಯರ ವೇಷಭೂಷಣ ತೊಟ್ಟು ಪ್ರದರ್ಶನ ಜನಾಕರ್ಷಣೆಗೊಂಡಿತು, ಇದೇ ವೇದಿಕೆಯಲ್ಲಿ ಮಹಿಳಾ ದಿನಾಚರಣೆ ಕುರಿತು ಕವಿಗೋಷ್ಠಿಯಲ್ಲಿ

ಡಾ.ಗೌರಮ್ಮ, ಎಚ್.ಸತೀಶ್ ಕುಮಾರ್, ಪಂಡ್ರಹಳ್ಳಿ ಶಿವರುದ್ರಪ್ಪ, ಡಾ.ಬಸವರಾಜ ಹರ್ತಿ, ರಶ್ಮಿ,ಮಮತಾ, ಮೀರಾ ನಾಡಿಗ್,ಡಾ.ಚಾಂದಿನಿ ಖಲೀದ್, ತಿಪ್ಪಮ್ಮ,ನಿರ್ಮಲ, ಉಷಾರಾಣಿ, ಶಶಿಕಲಾ, ಯತೀಶ್ ಎಂ ಸಿದ್ದಾಪುರ, ಕ್ಲಾಸಿಕ್ ಚಂದ್ರಶೇಖರ್, ಪಗಲಬಂಡೆ ನಾಗೇಂದ್ರಪ್ಪ, ಬಿ.ಮುರಳೀಧರ, ಜಯದೇವಮೂರ್ತಿ, ಜಯಪ್ರಕಾಶ್ ಸೇರಿದಂತೆ ಹಲವು ಉದಯೋನ್ಮುಖ ಕವಿ-ಕವಯತ್ರಿಯರು ತಮ್ಮ ಕವನಗಳನ್ನು ವಾಚಿಸಿದರು.

## 75 ಕೋಟಿ ವೆಚ್ಚದ ಪ್ರಸ್ತಾವಕ್ಕೆ ಅನುಮೋದನೆ

• ಉದಯವಾಹಿನಿ ಬೆಳಗಾವಿ

ನಗರದಲ್ಲಿ 'ಸಿಟೀಸ್ 2.0' ಯೋಜನೆ ಅನುಷ್ಠಾನಕ್ಕಾಗಿ ಮಾರ್ಪಡಿಸಿದ ಘಟಕಗಳು ಹಾಗೂ ?75 ಕೋಟಿ ವೆಚ್ಚದ ಪ್ರಸ್ತಾವಕ್ಕೆ ಅನುಮೋದನೆ ನೀಡುವ ನಿರ್ಣಯವನ್ನು ಇಲ್ಲಿ ನಡೆದ ಪಾಲಿಕೆ ಪರಿಷತ್ ಸಭೆಯಲ್ಲಿ ಕೈಗೊಳ್ಳಲಾಯಿತು. ಯೋಜನೆ ಅನುಷ್ಠಾನಕ್ಕೆ ಬರುವ ಯಾವುದೇ ಕಾನೂನು ಅಡೆತಡೆಗಳನ್ನು ಬೆಳಗಾವಿ ಸ್ಮಾರ್ಟ್‌ಸಿಟಿ ಯೋಜನೆ ಮೂಲಕ ಪರಿಹರಿಸಿಕೊಳ್ಳಲು ನಿರ್ಧರಿಸಲಾಯಿತು. ಸ್ಮಾರ್ಟ್‌ಸಿಟಿ ಯೋಜನೆ ವ್ಯವಸ್ಥಾಪಕ ನಿರ್ದೇಶಕಿ ಕವಿತಾ ವಾರಂಗಲ್, 'ಸಿಟೀಸ್ 2.0 ಅನುಷ್ಠಾನದಲ್ಲಿ ಕೆಲವು ಅಂತರಗಳನ್ನು ಟಾಟಾ ಕನ್ಸಲ್ಟೆನ್ಸಿ ಸರ್ವೀಸಸ್ ಗುರುತಿಸಿದೆ. ಹಣಕಾಸು ಮತ್ತು ತಾಂತ್ರಿಕ ಬೆಂಬಲದ ಮೂಲಕ ನಗರದಲ್ಲಿ ತ್ಯಾಜ್ಯ ನಿರ್ವಹಣೆ ಮತ್ತು ಸುಸ್ಥಿರ ಅಭಿವೃದ್ಧಿ ಹೆಚ್ಚಿಸಲು ವಸತಿ ಮತ್ತು ನಗರ ವ್ಯವಹಾರಗಳ ಸಚಿವಾಲಯಕ್ಕೆ ವರದಿ ಸಲ್ಲಿಸಿದೆ. ನಗರಾಭಿವೃದ್ಧಿ ಇಲಾಖೆ ಪ್ರಧಾನ ಕಾರ್ಯದರ್ಶಿಯೊಂದಿಗೆ ಸಭೆ ನಡೆಸಿದ ನಂತರ ಹೊಸ ಘಟಕಗಳನ್ನು ಅಂತಿಮಗೊಳಿಸಲಾಗಿದೆ' ಎಂದು ತಿಳಿಸಿದರು. ಆಡಳಿತ ಪಕ್ಷದ ಸದಸ್ಯ ರವಿ ಧೋತ್ರೆ, 'ಜನರಿಗೆ ಪ್ರಯೋಜನವಾಗುವಂತೆ ಸಿಟೀಸ್ 2.0 ಯೋಜನೆ ಕಾರ್ಯಗತಗೊಳಿಸಬೇಕು. ಆದರೆ, ಸ್ಮಾರ್ಟ್


ಉದಯವಾಹಿನಿ ಚಿತ್ರ

ಸಿಟಿ ಯೋಜನೆಯು ಪಾಲಿಕೆಯನ್ನು ಲಘುವಾಗಿ ಪರಿಗಣಿಸಿ, ಕಾಮಗಾರಿ ಅನುಷ್ಠಾನಕ್ಕೆ ನಿರ್ಣಯ ಅಂಗೀಕರಿಸಲು ಸಾಧ್ಯವಿಲ್ಲ. ಒಂದುವೇಳೆ ಹಾಗಾಗಿ ಯಾವುದೇ ಕಾನೂನು ಅಡೆತಡೆ ಬಂದರೆ ಅದೇ ನೇರ ಹೊಣೆ ಹೊರಬೇಕಾಗುತ್ತದೆ ಹೊರತು, ಪಾಲಿಕೆ ಅಲ್ಲ ಎಂದರು. ಆಯುಕ್ತ ಕಾರ್ತಿಕ್ ಎಂ., ಈ ಯೋಜನೆ ಅನುಷ್ಠಾನಗೊಳಿಸಲು ಸ್ಮಾರ್ಟ್‌ಸಿಟಿ ಯೋಜನೆಯವರು ಪಾಲುದಾರರೊಂದಿಗೆ ಸಭೆ ನಡೆಸಿಲ್ಲ. ಅದು ಸಭೆ ನಡೆಸಿ, ಪಾಲುದಾರರ ಆಕ್ಷೇಪಣೆಗಳನ್ನು ಸಹ ಕೇಳಬೇಕಿತ್ತು' ಎಂದು ಉಪಮೇಯರ್ ವಾಣಿ ಜೋಶಿ ಹೇಳಿದರು.ಆಡಳಿತ ಪಕ್ಷದ ನಾಯಕ ಹನುಮಂತ ಕೊಂಗಾಲಿ ಮಾತನಾಡಿದರು. ಮೇಯರ್ ಮಂಗೇಶ ಪವಾರ ಅವರು, ಸಿಟೀಸ್ 2.0 ಅಡಿ 8 ಪ್ರಮುಖ ಯೋಜನೆಗಳಿಗೆ ಅನುಮೋದನೆ ಕೊಟ್ಟರು.

## ಅಂತರಾಳದಿಂದ ಭಕ್ತಿಯಿದ್ದರೆ ಮಾತ್ರ ದೇವರು ಒಲಿಯುತ್ತಾನೆ; ಪೂಜ್ಯ ಡಾ.ಬಸವಲಿಂಗ ಅವಧೂತರು

• ಉದಯವಾಹಿನಿ ಚಿಂಚೋಳಿ

ಭಕ್ತರು ಅಂತರಾಳದಿಂದ ಭಕ್ತಿ ಮಾಡಿದರೆ ಮಾತ್ರ ದೇವರು ಒಲಿಯುತ್ತಾನೆ ಇಲ್ಲಾದಿದ್ದರೆ ಇಲ್ಲ ಎಂದು ದೇಗಲಮಡಿ ಮಠದ ಪೀಠಾದಿಪತಿ ಡಾ.ಬಸವಲಿಂಗ ಅವಧೂತರು ಹೇಳಿದರು.



ತಾಲ್ಲೂಕಿನ ದೇಗಲಮಡಿ ಮಠದಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು ಇಮದಿನ ಯುವಕರು, ಹಿರಿಯರು ದುಶ್ಚಟದಿಂದ ದೂರವಿದ್ದು ಅಜ್ಞಾನಿಗಳ ಜೋತೆ ಸಹವಾಸ ಮಾಡದೆ ಜ್ಞಾನಿಗಳ ಜೋತೆ ಸಹವಾಸ ಮಾಡಬೇಕು,ದೇವರಿಗೆ ಹೃದಯದಿಂದ ಭಕ್ತಿ ಮಾಡಬೇಕು, ನಾಮಕೆವಾಸ್ತೆ ಮಠಮಂದಿರಗಳಿಗೆ ಹೋಗದೆ ಅಂತರಾಳದಿಂದ ಹೃದಯದಿಂದ ದೇವರಿಗೆ ಭಕ್ತಿ ಮಾಡಿ ದ್ಯಾನ ಮಾಡಿದರೆ ದೇವರು ಕೂಡ ಒಲಿಯುತ್ತಾನೆ. ಈಗಾಗಲೇ ನಾನು 2000ಹಾಡುಗಳು ಬರೆದಿದೇನೆ,ಅನೇಕ ಪುಸ್ತಕಗಳು ಬರೆದಿದ್ದನೆ ಶೀಘ್ರದಲ್ಲೇ ಬಿಡುಗಡೆ ಮಾಡುತ್ತೇನೆ,ಭಕ್ತರಿಗೂ ಪುಸ್ತಕಗಳು ಕೋಡುತ್ತೇನೆ ಅದನ್ನು ಓದಿ ಅರ್ಥೈಸಿಕೋಂಡು ಸತ್ಯದ ದಾರಿಯಲ್ಲಿ ನಾವೆಲ್ಲರು ನಡೆಯಬೇಕು,ಪಾಲಕ ಪೋಷಕರಿಗೆ ಪೋಷಣೆ ಅರ್ಕೆ ಮಾಡಬೇಕು, ಬುದ್ದ, ಬಸವ,ಅಂಬೇಡ್ಕರ ಅವರು ಹಾಕಿಕೋಟ್ಟ ಮಾರ್ಗದಲ್ಲಿ ನಾವೆಲ್ಲರೂ ನಡೆಯಬೇಕು, ಎಲ್ಲಾ ಮಹಾಪುರುಷರ ಆದರ್ಶ ತತ್ವಗಳು ನಿಜ ಜೀವನದಲ್ಲಿ ಅಳವಡಿಸಿಕೋಳ್ಳಬೇಕು,ದೇಶದಲ್ಲಿ ಇರುವುದು ಗಂಡು ಹೆಣ್ಣು ಎರಡು ಜಾತಿಗಳು ಮಾತ್ರ ನಾವೆಲ್ಲರೂ ಯಾವುದೇ ಜಾತಿಧರ್ಮ ಮಾಡದೆ ನಾವೆಲ್ಲರೂ ಒಂದೇ ಅನ್ನುವ ಭಾವನೆಯಿಂದ ದೇಶದಲ್ಲಿ ಬಾಳಬೇಕು ಎಂದರು.

## ಕೈಗಾರಿಕಾ ಕೇಂದ್ರ ಜಂಟಿನಿರ್ದೇಶಕರಾಗಿದ್ದ ಆನಂದ್ ಅವರಿಗೆ ಆತ್ಮೀಯ ಬೀಳ್ಕೊಡುಗೆ

• ಉದಯವಾಹಿನಿ ಚಿತ್ರದುರ್ಗ

ಕರ್ನಾಟಕ ಸ್ಟೇಟ್ ಮಾರ್ಕೆಟಿಂಗ್ ಕಮ್ಯುನಿಕೇಶನ್ ಅಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್, ಬೆಂಗಳೂರು ಇಲ್ಲಿನ ವ್ಯವಸ್ಥಾಪಕ ನಿರ್ದೇಶಕರಾಗಿ ನೇಮಕಗೊಂಡ ಹಿನ್ನಲೆಯಲ್ಲಿ, ವರ್ಗಾವಣೆಗೊಂಡ ಜಿಲ್ಲಾ ಕೈಗಾರಿಕಾ ಕೇಂದ್ರದ ಜಂಟಿನಿರ್ದೇಶಕ ಬಿ. ಆನಂದ್ ಅವರಿಗೆ ಕೈಗಾರಿಕೆ ಇಲಾಖೆ ವತಿಯಿಂದ ಆತ್ಮೀಯವಾಗಿ ಬೀಳ್ಕೊಡುಗೆ ನೀಡಲಾಯಿತು.


ಉದಯವಾಹಿನಿ ಚಿತ್ರ

ಕಳೆದ ನಾಲ್ಕು ವರ್ಷಗಳ ಕಾಲ ಕೈಗಾರಿಕೆ ಇಲಾಖೆಯ ಜಂಟಿ ನಿರ್ದೇಶಕರಾಗಿ ಚಿತ್ರದುರ್ಗ ಜಿಲ್ಲೆಯಲ್ಲಿ ಸೇವೆ ಸಲ್ಲಿಸಿರುವ ಬಿ. ಆನಂದ್ ಅವರು, ಜಿಲ್ಲೆಯಲ್ಲಿ ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳು ಮಾತ್ರವಲ್ಲದೆ, ದೊಡ್ಡ ಮಟ್ಟದ ಕೈಗಾರಿಕೆಗಳ ಸ್ಥಾಪನೆಗೂ ಸಹಕಾರ ನೀಡಿ, ಇಲ್ಲಿ ಕೋಟ್ಯಾಂತರ ರೂಪಾಯಿಗಳ ಬಂಡವಾಳ ಹೂಡಿಕೆ ಹಾಗೂ ಉದ್ಯೋಗ ಸೃಜನೆಗೂ ಕಾರಣಕರ್ತರಾಗಿದ್ದರು.

ಇವರ ಗಣನೀಯ ಸೇವೆಯನ್ನು ಗುರುತಿಸಿದ ಸರ್ಕಾರ, ಇವರನ್ನು ಕರ್ನಾಟಕ ರಾಜ್ಯದ ಉದ್ಯಮ ಸಂಸ್ಥೆಯಾಗಿರುವ ಕರ್ನಾಟಕ ಸ್ಟೇಟ್ ಮಾರ್ಕೆಟಿಂಗ್ ಕಮ್ಯುನಿಕೇಶನ್ ಅಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್ (ಕೆ.ಎಸ್.ಎಂ.ಸಿ.ಎ) ಗೆ ವ್ಯವಸ್ಥಾಪಕ ನಿರ್ದೇಶಕರನ್ನಾಗಿ ನೇಮಕಗೊಳಿಸಿ, ವರ್ಗಾವಣೆಗೊಳಿಸಿದ್ದು, ಈಗಾಗಲೆ ಈ ಹುದ್ದೆಯ ಅಧಿಕಾರವನ್ನು ಆನಂದ್ ಅವರು ವಹಿಸಿಕೊಂಡಿದ್ದಾರೆ.

ಚಿತ್ರದುರ್ಗ ಕೈಗಾರಿಕೆ ಇಲಾಖೆಯ ಜಂಟಿನಿರ್ದೇಶಕರ ಹುದ್ದೆಯ ಪ್ರಭಾರವನ್ನು ಇದೇ ಕಚೇರಿಯ ಉಪ ನಿರ್ದೇಶಕರಾದ ಮಂಜುನಾಥ್ ಅವರಿಗೆ ವಹಿಸಿ ಕೊಡಲಾಗಿದೆ. ಹೀಗಾಗಿ ಚಿತ್ರದುರ್ಗ ಜಿಲ್ಲಾ ಕೈಗಾರಿಕಾ ಕೇಂದ್ರದ ಕಚೇರಿಯ ಅಧಿಕಾರಿ, ಸಿಬ್ಬಂದಿ, ವಿವಿಧ ಕೈಗಾರಿಕೋದ್ಯಮಿಗಳು ಬಿ. ಆನಂದ್ ಅವರಿಗೆ ಕೈಗಾರಿಕೆ ಇಲಾಖೆಯ ಕಚೇರಿಯಲ್ಲಿ ಏರ್ಪಡಿಸಿದ ಸಮಾರಂಭದಲ್ಲಿ ಆತ್ಮೀಯವಾಗಿ ಸನ್ಮಾನಿಸಿ, ಬೀಳ್ಕೊಡುಗೆ ನೀಡಿದರು.

## ಜಾತಿ ಕಸುಬುಗಳ ವಂಶಪಾರಂಪರ್ಯ ತಡೆಗೆ ಸಂವಿಧಾನವೇ ಮದ್ದು

• ಉದಯವಾಹಿನಿ ಜಗಳೂರು

4,635 ಜಾತಿ, ಉಪಜಾತಿಗಳಿರುವ ದೇಶದಲ್ಲಿ ಜಾತಿಗಳು ಹಾಗೂ ಕಸುಬುಗಳ ಅಸಮಾನತೆಯನ್ನು ಅರ್ಥ ಮಾಡಿಕೊಂಡಲ್ಲಿ ಸಂವಿಧಾನದ ಮಹತ್ವ ಅರ್ಥವಾಗುತ್ತದೆ ಎಂದು ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನದಾಸ್ ಅಭಿಪ್ರಾಯಪಟ್ಟರು. ತಾಲ್ಲೂಕಿನ ದೊಣೆಹಳ್ಳಿ ಶರಣಬಸವೇಶ್ವರ ಮಠದಲ್ಲಿ ದಾಸೋಹ ಸಂಸ್ಕೃತಿ ಉತ್ಸವ'ದ ಅಂಗವಾಗಿ ಹಮ್ಮಿಕೊಂಡಿದ್ದ 'ಸಂವಿಧಾನ ಸಂರಕ್ಷಣಾ ಸಮಾವೇಶ'ವನ್ನು ಉದ್ಘಾಟಿಸಿ ಅವರು ಮಾತನಾಡಿದರು.'ಇಲ್ಲಿ ಜಾತಿವಾರು ಕಸುಬುಗಳಿವೆ. ಜಾತಿಗೊಂದು ಸ್ಮಶಾನ ಇದೆ. ಒಂದೇ ಸ್ಮಶಾನದಲ್ಲಿ ಎಲ್ಲರ ಅಂತ್ಯ ಸಂಸ್ಕಾರಕ್ಕೆ ಅವಕಾಶವಿಲ್ಲ. ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಅಸಮಾನತೆಗಳಿವೆ. ದಲಿತರನ್ನು 2ನೇ ದರ್ಜೆ ಪ್ರಜೆಗಳನ್ನಾಗಿ ನಡೆಸಿಕೊಳ್ಳಲಾಗಿದೆ. ಆದರೆ, ಸಂವಿಧಾನದ ಫಲವಾಗಿ ಸ್ವಾತಂತ್ರ್ಯ ಸಂದರ್ಭದಲ್ಲಿ ಶೇ 18ರಷ್ಟಿದ್ದ ಅಕ್ಷರಸ್ಥರ ಸಂಖ್ಯೆ ಇಂದು ಶೇ 81ಕ್ಕೆ ಹೆಚ್ಚಳವಾಗಿದೆ. ಜಾತಿ, ಕಸುಬುಗಳ ವಂಶಪಾರಂಪರ್ಯ ತಡೆಗೆ ಸಂವಿಧಾನವೇ ಮದ್ದು. ಮಾಹಿತಿ ತಂತ್ರಜ್ಞಾನ, ಕೃಷಿ ಕ್ಷೇತ್ರದಲ್ಲಿ ಅಪಾರ ಪ್ರಗತಿಯಾಗಿದೆ. ದೇಶದ ಭವಿಷ್ಯ ವಿದ್ಯಾರ್ಥಿ, ಯುವಜನರ ಕೈಯಲ್ಲಿದ್ದು, ದೇಶದ ಮುಂದಿರುವ ಸವಾಲುಗಳನ್ನು ಪರಿಣಾಮಕಾರಿಯಾಗಿ ಹಿಮ್ಮೆಟ್ಟಿಸುವ ಸಾಮರ್ಥ್ಯ ಅಡಗಿದೆ ಎಂದು ಹೇಳಿದರು. ಜನಪ್ರತಿನಿಧಿಗಳು, ರಾಜಕಾರಣಿಗಳು ಕೋಟಿಗಟ್ಟಲೆ ಹಣ ಲೂಟಿ ಮಾಡುತ್ತ ಸಾಮಾಜಿಕ ಸ್ವಾಸ್ಥ್ಯವನ್ನೇ ಹಾಳು ಮಾಡುತ್ತಿದ್ದಾರೆ. ಶರಣರ ಕಾಯಕದ ಅರಿವು ಇಲ್ಲದವರಲ್ಲಿ ಭ್ರಷ್ಟತೆ ಮಿತಿ ಮೀರುತ್ತಿದೆ. ದುಡಿಮೆಯಲ್ಲಿ ವಂಚನೆ, ಮೋಸ ಸಲ್ಲದು. ಮನುಷ್ಯ ಅತಿ ಸ್ವಾರ್ಥಿ, ಅಹಂಕಾರಿ ಆಗುತ್ತಿದ್ದಾನೆ ಎಂದು ಸಾಣೇಹಳ್ಳಿ ಮಠದ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಅಸಮಾಧಾನ ವ್ಯಕ್ತಪಡಿಸಿದರು.



ಉದಯವಾಹಿನಿ ಚಿತ್ರ

# ಬಸ್ ಕೊರತೆ: ಹಗಲು-ರಾತ್ರಿ ಬಿಡುವಿಲ್ಲದ ಕಾರ್ಯಾಚರಣೆ

• ಬಸ್‌ಗಾಗಿ ಸಿಬ್ಬಂದಿಯೇ ಕಾಯಬೇಕಾದ ಸ್ಥಿತಿ • ಬಸ್ ಬಂದ ನಂತರವೇ ಡ್ಯೂಟಿ

• ಉದಯವಾಹಿನಿ ಚಿಕ್ಕಮಗಳೂರು

ಶಕ್ತಿ ಯೋಜನೆ ಜಾರಿಯಲ್ಲಿದೆ. ಮುಗಿಬಿದ್ದು ಬಸ್‌ಗಳಲ್ಲಿ ಜನ ಪ್ರಯಾಣ ಮಾಡುತ್ತಿದ್ದಾರೆ. ಆದರೆ, ಬಸ್‌ಗಳ ಕೊರತೆಯಿಂದ ಹಗಲು-ರಾತ್ರಿ ಬಿಡುವಿಲ್ಲದೆ ಬಸ್‌ಗಳು ಕಾರ್ಯಾಚರಣೆ ಮಾಡುವಂತಾಗಿದೆ.

ಜಿಲ್ಲೆಯ ಮಲೆನಾಡು ಭಾಗ ಗುಡ್ಡಗಾಡು ಪ್ರದೇಶವನ್ನು ಹೊಂದಿದೆ. ಶಕ್ತಿ ಯೋಜನೆ ಜಾರಿಯಾದ ಬಳಿಕ ಬಸ್ ಪ್ರಯಾಣಿಕರ ಸಂಖ್ಯೆ ಹೆಚ್ಚುತ್ತಲೇ ಇದೆ. ಶಕ್ತಿ ಯೋಜನೆಯಡಿ ಈವರೆಗೆ ಚಿಕ್ಕಮಗಳೂರು ವಿಭಾಗ ವ್ಯಾಪ್ತಿಯಲ್ಲಿ 6.15 ಕೋಟಿ ಟ್ರಿಪ್‌ಗಳಲ್ಲಿ ಮಹಿಳೆಯರು ಉಚಿತವಾಗಿ ಪ್ರಯಾಣಿಸಿದ್ದಾರೆ. ಕೆಎಸ್‌ಆರ್‌ಟಿಸಿಗೆ 239.24 ಕೋಟಿಯನ್ನೂ ಸರ್ಕಾರ ಜಿಲ್ಲೆಯ ಮಹಿಳಾ ಪ್ರಯಾಣಿಕರಿಗಾಗಿ ಪಾವತಿಸಿದೆ. ಆದರೆ, ಬಸ್‌ಗಳ ಕೊರತೆಯಿಂದ ಪ್ರಯಾಣಿಕರು ಪರದಾಡುವಂತಾಗಿದೆ. ಡಿಪೊಗೆ ಬರುವ ಸಿಬ್ಬಂದಿ ಕೂಡ ಬಸ್ ತೆಗೆದುಕೊಂಡು ಹೋಗಲು ಕಾಯಬೇಕಾದ ಸ್ಥಿತಿ ಇದೆ. ಡಿಪೊಗೆ ಬಸ್‌ಗಳು ಬಂದ ಕೂಡಲೇ ಸಿಬ್ಬಂದಿ ಪಡೆದು ಹೋಗುತ್ತಿದ್ದಾರೆ.



ಉದಯವಾಹಿನಿ ಚಿತ್ರ

ಕೆಲವು ಬಸ್‌ಗಳು ದಿನದ 24 ಗಂಟೆಯೂ ಸಂಚಾರ ಮಾಡುತ್ತಿವೆ. ಅವುಗಳನ್ನು ನಿರ್ವಹಣೆ ಮಾಡಲು ಸಹ ಸಮಯ ಇಲ್ಲದಂತಾಗಿದೆ. ಬೆಂಗಳೂರು, ಮೈಸೂರು ಸೇರಿ ದೂರದ ಊರುಗಳಿಗೆ ಹೋಗುತ್ತಿರುವ ಬಸ್‌ಗಳು ವಾಪಸ್ ಬಂದ ಕೂಡಲೇ ಬೇರೆ ಸಿಬ್ಬಂದಿ ಪಡೆದು ಹೋಗುತ್ತಿದ್ದಾರೆ. ಡಿಪೊ ಸಿಬ್ಬಂದಿ ಬಸ್‌ತೊಳೆದು ಸಾಮಾನ್ಯ ಚೆಕ್‌ಅಪ್ ಮಾಡಿ ಕಳುಹಿಸುತ್ತಿದ್ದಾರೆ. ವಿಶ್ರಾಂತಿಯೇ ಇಲ್ಲದೆ ಹಗಲು ರಾತ್ರಿ ಸಂಚಾರ ಮಾಡುತ್ತಿರುವ ಬಸ್‌ಗಳಲ್ಲಿ ಪ್ರಯಾಣ ಎಷ್ಟು ಸುರಕ್ಷಿತ ಎಂಬ ಪ್ರಶ್ನೆಗಳೂ ಜನರನ್ನು ಕಾಡುತ್ತಿವೆ. ಇತ್ತೀಚೆಗೆ ನಗರದ ಬೇಲೂರು ರಸ್ತೆಯಲ್ಲಿ ಬಸ್ ಒಂದರಲ್ಲಿ ಆಕಸ್ಮಿಕ ಬೆಂಕಿ ಕಾಣಿಸಿಕೊಂಡಿತು. ರಸ್ತೆಯಲ್ಲಿ ಅಲ್ಲಲ್ಲಿ ಬಸ್ ಕೆಟ್ಟು ನಿಲ್ಲುವುದು ಸಾಮಾನ್ಯ ಎಂಬಂತಾಗಿದೆ. 2 ಸಾವಿರ ಬಸ್‌ಗಳನ್ನು ಖರೀದಿ ಮಾಡುವುದಾಗಿ ಸರ್ಕಾರ ಹೇಳಿದೆ. ಬಸ್‌ಗಳು ಖರೀದಿಯಾಗಿ ಜಿಲ್ಲೆಗೆ ಬರಲು ಇನ್ನೂ ವರ್ಷಗಟ್ಟಲೆ ಸಮಯ ಬೇಕಾಗಲಿದೆ. ಅಲ್ಲಿಯ ತನಕ ನಿಗದಿತ ಮಾರ್ಗಗಳಿಗೆ ಬಸ್ ಕಳುಹಿಸುವುದೇ ಅಧಿಕಾರಿಗಳಿಗೆ ಕಷ್ಟವಾಗಿದೆ. ಬಸ್‌ಗಳ ಕೊರತೆ ಇರುವುದು ನಿಜ. ಹೊಸದಾಗಿ ಬಸ್‌ಗಳನ್ನು ನೀಡುವಂತೆ ಕೇಂದ್ರ ಕಚೇರಿಗೆ ಮನವಿ ಮಾಡಲಾಗಿದೆ ಎನ್ನುತ್ತಾರೆ ಕೆಎಸ್ ಆರ್‌ಟಿಸಿ ವಿಭಾಗೀಯ ನಿಯಂತ್ರಣಾಧಿಕಾರಿ ಸತೀಶ್.

ಮುಳ್ಳಯ್ಯನಗಿರಿ ತಪ್ಪಲಿನಲ್ಲಿರುವ ಮೇಲಿನ ಹುಲುವತ್ತಿ ಕೊಳಗಾಮೆ ಜಾಗರ ಭಾಗಕ್ಕೆ ಬಸ್ ಸಂಪರ್ಕವೇ ಇಲ್ಲವಾಗಿದೆ. ಗಿರಿಭಾಗದ ಅತ್ತಿಗುಂಡಿಯಿಂದ ಮಹಲ್ ತನಕ ಹೋಗಿ ಬರುವ ಬಸ್‌ಗಳು ಆಗಾಗ ಕೆಟ್ಟು ನಿಲ್ಲುವುದು ಸಾಮಾನ್ಯ. ಮಿನಿ ಮಾತ್ರ ತೆರಳಲು ಸಾಧ್ಯವಿರುವ ಮಾರ್ಗ ಇದಾಗಿದ್ದು ಬಸ್ ಕೆಟ್ಟರೆ ಬೇರೆ ಬಸ್ ಕಳುಹಿಸಲು ಆಗುತ್ತಿಲ್ಲ. ಇದರಿಂದ ವಿದ್ಯಾರ್ಥಿಗಳು ನಗರಕ್ಕೆ ಬರುವ ಜನ ಪರದಾಡುವುದು ಸಾಮಾನ್ಯವಾಗಿದೆ. ನರಸಿಂಹರಾಜಪುರ ತಾಲ್ಲೂಕಿನ 36 ಗ್ರಾಮ ಶೃಂಗೇರಿ ತಾಲ್ಲೂಕಿನ 33 ಕೊಪ್ಪ 37 ಮೂಡಿಗೆರೆ 20 ಅಜ್ಜಂಪುರ 43 ತರೀಕೆರೆ 36 ಕಡೂರು 17 ಮತ್ತು ಚಿಕ್ಕಮಗಳೂರು ತಾಲ್ಲೂಕಿನ 28 ಗ್ರಾಮಗಳಿಗೆ ಕೆಎಸ್‌ಆರ್‌ಟಿಸಿ ಬಸ್ ಸೇವೆ ಇಲ್ಲ.

**ಮುಗಿಬಿದ್ದು ಬಸ್‌ಗಳಲ್ಲಿ ಜನ ಪ್ರಯಾಣ**

**250 ಗ್ರಾಮಗಳಿಗೆ ಇಲ್ಲ ಬಸ್**

**ಜಿಲ್ಲೆಯ 250 ಗ್ರಾಮಗಳಿಗೆ ಇನ್ನೂ ಕೆಎಸ್‌ಆರ್‌ಟಿಸಿ ಬಸ್ ಸೇವೆಯೇ ಇಲ್ಲವಾಗಿದೆ. ಹೆದ್ದಾರಿಯಿಂದ ಆರೇಳು ಕಿಲೋ ಮೀಟರ್ ದೂರದಲ್ಲಿ ಇರುವ ಗ್ರಾಮಗಳಿಗೆ ಕೂಡ ಬಸ್ ತಲುಪಿಲ್ಲ. ಆಟೋರಿಕ್ಷಾ ಪಿಕಪ್ ಸೇರಿ ಖಾಸಗಿ ವಾಹನಗಳಲ್ಲಿ ಪ್ರಯಾಣಿಸುವ ಪರಿಸ್ಥಿತಿ ಇದೆ. ಬಸ್ ಸೇವೆ ಇಲ್ಲದ 250 ಗ್ರಾಮಗಳ ಪೈಕಿ ನಗರದಿಂದ ಆರೇಳು ಕಿಲೋ ಮೀಟರ್ ದೂರದಲ್ಲಿರುವ ಹಿರೇಕೊಳಲೆ ಚಿಕ್ಕೊಳಲೆ ಗ್ರಾಮಗಳೂ ಸೇರಿವೆ.**

## ಮಿನಿ ನ್ಯೂಸ್

### ಹನಿಟ್ರ್ಯಾಪ್: ಫ್ಯಾಷನ್ ಡಿಸೈನರ್ ಬಂಧಿಸಿದ ಟಿಳಕವಾಡಿ ಪೊಲೀಸರು

• ಉದಯವಾಹಿನಿ ಬೆಳಗಾವಿ

ಪುರುಷರಿಗೆ ಮರುಳು ಮಾಡಿ, ಲಾಡ್ಜ್‌ಗೆ ಕರೆದೊಯ್ದು ಅವರ ವಸ್ತುಗಳನ್ನು ದೋಚುತ್ತಿದ್ದ ಮಹಿಳೆಯೊಬ್ಬಳನ್ನು ಟಿಳಕವಾಡಿ ಠಾಣೆ ಪೊಲೀಸರು ಬಂಧಿಸಿದ್ದಾರೆ. ಬಾಗಲಕೋಟೆ ಜಿಲ್ಲೆಯ ಮಹಾಲಿಂಗಪುರ ಮೂಲದ, ಪ್ರಸ್ತುತ ಹುಕ್ಕೇರಿ ತಾಲ್ಲೂಕಿನ ಸಂಕೇಶ್ವರದಲ್ಲಿ ವಾಸಿಸುತ್ತಿರುವ ದೀಪಾ ಮಹಾಲಿಂಗ ಅವಟಗಿ (33) ಬಂಧಿತ ಮಹಿಳೆ. ಫ್ಯಾಷನ್ ಡಿಸೈನರ್ ಆಗಿರುವ ಈಕೆಯಿಂದ 11 ಮೊಬೈಲ್, ಒಂದು ಟ್ಯಾಬ್, 14 ಸಾವಿರ ನಗದು, 2 ಕಾರು ಸೇರಿ 32.86 ಲಕ್ಷ ಮೌಲ್ಯದ ವಸ್ತುಗಳನ್ನು ವಶಕ್ಕೆ ಪಡೆಯಲಾಗಿದೆ. ಆಕೆಯ ಸಹಚರ ತಲೆಮರೆಸಿಕೊಂಡಿದ್ದು, ಹುಡುಕಾಟ ನಡೆದಿದೆ ಎಂದು ನಗರ ಪೊಲೀಸ್ ಕಮಿಷನರ್ ಭೂಷಣ ಬೊರಸೆ ಮಂಗಳವಾರ ಸುದ್ದಿಗಾರರಿಗೆ ತಿಳಿಸಿದರು. ಸಾಮಾಜಿಕ ಮಾಧ್ಯಮ ಖಾತೆಗಳ ಮೂಲಕ ಶ್ರೀಮಂತರ ಸ್ನೇಹ ಬೆಳೆಸುತ್ತಿದ್ದಳು. ಬಳಿಕ ಲಾಡ್ಜ್ ಗಳಿಗೆ ಕರೆಯುತ್ತಿದ್ದಳು. ಫ್ರೆಶ್ ಆಗುವಂತೆ ಹೇಳುತ್ತಿದ್ದಳು. ನಂತರ ಹೊರಗಿನಿಂದ ಕೊಠಡಿ ಲಾಕ್ ಮಾಡಿ ಅವರ ವಸ್ತುಗಳನ್ನು ತೆಗೆದುಕೊಂಡು ಹೋಗುತ್ತಿದ್ದಳು ಎಂದು ಹೇಳಿದರು. ಸಂಕೇಶ್ವರ ಪಟ್ಟಣದ ನಿವಾಸಿ ಶಿವಾನಂದ ಅಲಿಯಾಸ್ ವಿನೋದ್ ಶಂಕ್ರಯ್ಯ ಮಠಪತಿ ಶ್ರೀಮಂತ ವ್ಯಕ್ತಿಗಳನ್ನು ಬಲೆಗೆ ಬೀಳಿಸಲು ಸಹಾಯ ಮಾಡುತ್ತಿದ್ದ ಎಂದರು. ಟಿಳಕವಾಡಿ ಠಾಣೆ ವ್ಯಾಪ್ತಿಯ ಎರಡು ಲಾಡ್ಜ್‌ಗಳಲ್ಲಿ ಕಳ್ಳತನವಾಗಿರುವ ಬಗ್ಗೆ ದೂರು ದಾಖಲಾಗಿತ್ತು. ಬೆಂಗಳೂರಿನಲ್ಲೂ ದೀಪಾ ವಿರುದ್ಧ ಪ್ರಕರಣ ದಾಖಲಾಗಿವೆ ಎಂದು ತಿಳಿಸಿದರು.

### ಹೋರಾಟ ನನ್ನದು, ಪ್ರಚಾರ ಸಂಸದರದ್ದು: ಶಾಸಕ ಸತೀಶ ಸೈಲ್

• ಉದಯವಾಹಿನಿ ಕಾರವಾರ

ಸೀಬರ್ಡ್ ಯೋಜನೆ ಸಂತ್ರಸ್ತರಿಗೆ 28 (ಎ) ಕಲಂ ಅಡಿ ಹೆಚ್ಚುವರಿ ಪರಿಹಾರ ಬಿಡುಗಡೆಗೆ ನಿರಂತರ ಹೋರಾಟ ನಡೆಸಿದ್ದು ನಾನು. ಆದರೆ, ತರಾತುರಿಯಲ್ಲಿ ಪರಿಹಾರ ವಿತರಿಸುವ ಮೂಲಕ ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ತಾವು ಪ್ರಚಾರ ಪಡೆದಿದ್ದಾರೆ ಎಂದು ಶಾಸಕ ಸತೀಶ ಸೈಲ್ ಆರೋಪಿಸಿದರು.

ಯೋಜನೆಗೆ ಭೂಮಿ ಕಳೆದುಕೊಂಡ ಕುಟುಂಬಗಳ ಪೈಕಿ 200ಕ್ಕೂ ಹೆಚ್ಚು ಮಂದಿಯ ಅರ್ಜಿಗಳು ತಿರಸ್ಕೃತಗೊಂಡಿವೆ. ಅರಿವಿನ ಕೊರತೆಯಿಂದ ಅವರು ಮೇಲ್ಮನವಿ ಸಲ್ಲಿಸಲು ಸಾಧ್ಯವಾಗಲಿಲ್ಲ. ಸಂಸದರಿಗೆ ನೈಜ ಕಾಳಜಿ ಇದ್ದರೆ ಆ ಕುಟುಂಬಗಳಿಗೂ ಪರಿಹಾರ ಕೊಡಿಸಲು ಪ್ರಯತ್ನಿಸಲಿ ಎಂದು ಇಲ್ಲಿ ಸುದ್ದಿಗೋಷ್ಠಿಯಲ್ಲಿ ಸವಾಲು ಹಾಕಿದರು.

ಹೆಚ್ಚುವರಿ ಪರಿಹಾರಕ್ಕೆ ಕೋರ್ಟ್ ಆದೇಶ ಆದ ಪ್ರಕರಣಗಳಿಗೆ ಪರಿಹಾರ ವಿತರಣೆ ಆಗಲಿದೆ. ಇದಕ್ಕೆ ಯಾವುದೇ ರಾಜಕೀಯ ಪ್ರಭಾವದ ಅಗತ್ಯವಿಲ್ಲ. ಈ ಹಿಂದೆ ಸಂತ್ರಸ್ತರಿಗೆ ಹೆಚ್ಚುವರಿ ಪರಿಹಾರ ಕೊಡಿಸಲು ನ್ಯಾಯಾಂಗ ಹೋರಾಟಕ್ಕೆ ನಿರಂತರ ಬೆಂಬಲ ನೀಡಿದ್ದೆ. ಅನುಭವಿ ವಕೀಲರನ್ನು ನೇಮಕ ಮಾಡಿಕೊಟ್ಟಿದ್ದೆ. ಪರಿಹಾರ ಮೊತ್ತ ನಿಗದಿಗೂ ಪ್ರಯತ್ನ ನಡೆಸಿದ್ದೆ ಎಂದರು.

### ವಿಧಾನಪರಿಷತ್ತಿನ ಆಗ್ನೆಯ ಪದವೀಧರ ಕ್ಷೇತ್ರ: ಕೆ.ಎಂ. ಸುರೇಶ್ ಬಿಜೆಪಿ ಅಭ್ಯರ್ಥಿ

• ಉದಯವಾಹಿನಿ ದಾವಣಗೆರೆ

ವಿಧಾನಪರಿಷತ್ತಿನ ಆಗ್ನಿಯ ಪದವೀಧರ ಕ್ಷೇತ್ರಕ್ಕೆ ಕೆ.ಎಂ. ಸುರೇಶ್ ಅವರನ್ನು ಅಭ್ಯರ್ಥಿಯಾಗಿ ಬಿಜೆಪಿ ಘೋಷಣೆ ಮಾಡಿದೆ. ನಗರದ ಸೋಮೇಶ್ವರ ಸಮೂಹ ಶಿಕ್ಷಣ ಸಂಸ್ಥೆಯ ಸಂಸ್ಥಾಪಕರಾಗಿರುವ ಕೆ.ಎಂ. ಸುರೇಶ್, ಮೂರು ದಶಕಗಳಿಂದ ಬಿಜೆಪಿಯಲ್ಲಿದ್ದಾರೆ. ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ (ಎಬಿವಿಪಿ) ಮೂಲಕ ರಾಜಕೀಯಕ್ಕೆ ಪದಾರ್ಪಣೆ ಮಾಡಿದ ಅವರು ಬಿಜೆಪಿ ಯುವ ಮೋರ್ಚಾ, ಶಿಕ್ಷಕರ ಪ್ರಕೋಷ್ಠ ಸೇರಿದಂತೆ ಹಲವು ಘಟಕಗಳಲ್ಲಿ ಕಾರ್ಯನಿರ್ವಹಿಸಿದ್ದಾರೆ. 1994ರಿಂದ ನಡೆದ ಎಲ್ಲಾ ಚುನಾವಣೆಗಳಲ್ಲಿ ಸಕ್ರಿಯವಾಗಿ ತೊಡಗಿಕೊಂಡಿದ್ದೇನೆ. ಪದವೀಧರ ಕ್ಷೇತ್ರದಲ್ಲಿ ಸ್ಪರ್ಧಿಸಲು ಅವಕಾಶ ಮಾಡಿಕೊಡುವಂತೆ ಕಳೆದ ಚುನಾವಣೆಯಲ್ಲಿಯೇ ಪಕ್ಷವನ್ನು ಕೋರಿದ್ದೆ. ಕೋಲಾರ, ಚಿಕ್ಕಬಳ್ಳಾಪುರ, ತುಮಕೂರು, ಚಿತ್ರದುರ್ಗ, ದಾವಣಗೆರೆ ಜಿಲ್ಲಾ ವ್ಯಾಪ್ತಿಯಲ್ಲಿರುವ ಕ್ಷೇತ್ರವನ್ನು ಪ್ರವಾಸ ಮಾಡಿ ಮತದಾರರನ್ನು ಸಂಪರ್ಕಿಸುತ್ತಿದ್ದೇನೆ' ಎಂದು ಸುರೇಶ್ ತಿಳಿಸಿದರು.

### ಅಂತರ ಜಿಲ್ಲಾ ಕಳ್ಳನ ಬಂಧನ

• ಉದಯವಾಹಿನಿ ಹೊಳೆಹೊನ್ನೂರು

ದೇವಸ್ಥಾನದಲ್ಲಿ ಕಳವು ಮಾಡಿದ್ದ ಅಂತರ ಜಿಲ್ಲಾ ಕಳ್ಳನನ್ನು ಪಟ್ಟಣದ ಪೊಲೀಸರು ಬಂಧಿಸಿ, ಆತನಿಂದ ರೂ. 10.49 ಲಕ್ಷ ಮೌಲ್ಯದ ಬೆಳ್ಳಿ, ಬಂಗಾರದ ಆಭರಣ, ಕೃತ್ಯಕ್ಕೆ ಬಳಸಿದ್ದ ಮೋಟಾರ್ ಬೈಕ್ ವಶಪಡಿಕೊಂಡಿದ್ದಾರೆ. ದಾವಣಗೆರೆ ಜಿಲ್ಲೆಯ ಚನ್ನಗಿರಿ ತಾಲ್ಲೂಕಿನ ಉಮೇಶ್ (45) ಬಂಧಿತ. ಮಾರಿಕಾಂಬ ದೇವಸ್ಥಾನದ ಬೀಗ ಮುರಿದು ಗರ್ಭಗುಡಿಯಲ್ಲಿದ್ದ ದೇವಿಯ ಬೆಳ್ಳಿಯ ಮುಖವಾಡ ಮತ್ತು ಬಂಗಾರದ ತಾಳಿ ಕಳವು ಮಾಡಲಾಗಿದೆ ಎಂದು ಭದ್ರಾವತಿ ತಾಲ್ಲೂಕು ಬೊಮ್ಮನಕಟ್ಟೆಯ ಪಂಡರಹಳ್ಳಿ ಕ್ಯಾಂಪ್‌ನ ಮಾರಿಕಾಂಬ ದೇವಸ್ಥಾನ ಸಮಿತಿ ಅಧ್ಯಕ್ಷ ಟಿ. ಬೈಲಪ್ಪ ತಿಮ್ಮಾ ಭೋವಿ ಈಚೆಗೆ ದೂರು ನೀಡಿದ್ದರು.

### ಬಳಕೆಯಾದ 201 ಸ್ಮಾರ್ಟ್ ಫೋನ್ ಪತ್ತೆ

• ಉದಯವಾಹಿನಿ ಮಂಗಳೂರು

ಬಳಕೆಯಾದ 201 ಸ್ಮಾರ್ಟ್‌ಫೋನ್‌ಗಳನ್ನು ದಕ್ಷಿಣ ರೈಲ್ವೆಯ ಪಾಲಕ್ಕಾಡ್ ವಿಭಾಗದ ರೈಲ್ವೆ ಸುರಕ್ಷತಾ ಪಡೆ (ಆರ್‌ಪಿಎಫ್) ಸಿಬ್ಬಂದಿ ಮಂಗಳೂರು ಜಂಕ್ಷನ್ ರೈಲು ನಿಲ್ದಾಣದಲ್ಲಿ ವಶಪಡಿಸಿಕೊಂಡಿದ್ದಾರೆ. ಅವುಗಳ ಮೌಲ್ಯ ರೂ. 10.05 ಲಕ್ಷ ಎಂದು ಅಂದಾಜಿಸಲಾಗಿದೆ.

ಕೇರಳ ರಾಜ್ಯದ ವಿಧಾನಸಭಾ ಚುನಾವಣೆ ಸಮೀಪಿಸುತ್ತಿದ್ದು, ಚಿನ್ನ, ನಗದು, ಮತ್ತಿತರ ಬೆಲೆಬಾಳುವ ವಸ್ತುಗಳು ರೈಲಿನ ಮೂಲಕ ಆ ರಾಜ್ಯಕ್ಕೆ ಕಳ್ಳಸಾಗಣೆಯಾಗುವುದನ್ನು ತಪ್ಪಿಸಲು ಆರ್‌ಪಿಎಫ್ ಸಿಬ್ಬಂದಿಯು ರೈಲುಗಳಲ್ಲಿ ತಪಾಸಣಾ ಕಾರ್ಯವನ್ನು ತೀವ್ರಗೊಳಿಸಿದ್ದಾರೆ. ಸ್ಮಾರ್ಟ್ ಫೋನ್‌ಗಳಿದ್ದ ಬ್ಯಾಗ್ ಈ ತಪಾಸಣೆ ವೇಳೆ ಪತ್ತೆಯಾಗಿದೆ.

'ಜಾಮ್‌ನಗರ- ತಿರುನೆಲ್ವೇಲಿ ಜಂಕ್ಷನ್ ಎಕ್ಸ್‌ಪ್ರೆಸ್ ರೈಲು (ಸಂಖ್ಯೆ 19578) ಮಂಗಳೂರು ಜಂಕ್ಷನ್ ನಿಲ್ದಾಣದ ಪ್ಲಾಟ್‌ಫಾರಂ-3ರಲ್ಲಿ ನಿಂತಿದ್ದಾಗ ಆರ್‌ಪಿಎಫ್‌ನ ಹೆಡ್ ಕಾನ್‌ಸ್ಟೇಬಲ್ ಸುಜೀಶ್, ಕಾನ್‌ಸ್ಟೇಬಲ್ ರಾಮಕೃಷ್ಣ ಅವರು ಬೋಗಿಗಳ ತಪಾಸಣೆ ನಡೆಸಿದ್ದರು. ರೈಲಿನ ಸಾಮಾನ್ಯ ಬೋಗಿಯಲ್ಲಿ ಮೇಲುಗಡೆ ಲಗೇಜು ಇಡುವ ಸ್ಥಳದಲ್ಲಿ ವಾರಸುದಾರರು ಇಲ್ಲದ ಮೂರು ಬ್ಯಾಗ್‌ಗಳು ಇರುವುದನ್ನು ಸಿಬ್ಬಂದಿ ಗಮನಿಸಿದ್ದರು. ಸಂದೇಹದಿಂದ ಬ್ಯಾಗ್‌ಗಳನ್ನು ಪರಿಶೀಲಿಸಿದಾಗ, ಅದರಲ್ಲಿ ಬೇರೆ ಬೇರೆ ಬ್ರಾಂಡ್‌ಗಳ ಬಳಕೆಯಾದ 201 ಸ್ಮಾರ್ಟ್ ಫೋನ್‌ಗಳು ಸಿಕ್ಕಿದ್ದವು. ವಶಪಡಿಸಿಕೊಂಡ ಸ್ಮಾರ್ಟ್‌ಫೋನ್‌ಗಳ ಮಹಜರನ್ನು ಇಬ್ಬರು ಸಾಕ್ಷಿದಾರರ ಸಮ್ಮುಖದಲ್ಲಿ ನಡೆಸಲಾಗಿದೆ. ಈ ಬಗ್ಗೆ ಮುಂದಿನ ಕ್ರಮ ಕೈಗೊಳ್ಳಲಾಗುತ್ತದೆ ಎಂದು ರೈಲ್ವೆ ಇಲಾಖೆಯ ಪಾಲಕ್ಕಾಡ್ ವಿಭಾಗದ ಪ್ರಕಟಣೆ ತಿಳಿಸಿದೆ.

